Registered with the Registrar of Newspapers in India Under No. 50622/86
'Prasada' Bi-Monthly, Vol. 35 Issue No. 2, March-April 2020



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೋವಿಡ್–19 ವೈರಾಣು ಸೋಂಕಿನ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕರೆ ನೀಡಿದ್ದ ಜ್ಯೋತಿ ಬೆಳಗುವ ಅಭಿಯಾನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಶ್ರೀಮಠದಲ್ಲಿನ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು ಪಾಲ್ಗೊಂಡು ಜ್ಯೋತಿ ಬೆಳಗಿದರು. (5.4.2020)

ಬಿಡಿ ಪ್ರತಿ: ರೂ. 10
e-mail: jsspublications@gmail.com * www.jssonline.org

# ಪ್ರಸಾದ

## ದ್ವೈಮಾಸಿಕ

ಸಂಪುಟ ೩೫ ಸಂಚಿಕೆ ೨ ಮಾರ್ಚ್–ಏಪ್ರಿಲ್ ೨೦೨೦



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರಿನ ಗಿರಿಯಾಭೋವಿ ಪಾಳ್ಯದಲ್ಲಿರುವ ಜೆಎಸ್ಎಸ್ ಪ್ರೌಢಶಾಲೆಯ ಆವರಣದಲ್ಲಿ ಮೈಸೂರು ನಾಗರಿಕರ ವೇದಿಕೆಯಿಂದ ಕೂಲಿ ಕಾರ್ಮಿಕ ಕುಟುಂಬಗಳಿಗೆ ಪರಮಪೂಜ್ಯ ಜಗದ್ಗುರುಗಳವರ ಸಮ್ಮುಖದಲ್ಲಿ ಆಹಾರಧಾನ್ಯಗಳ ಕಿಟ್‌ನ್ನು ವಿತರಿಸಲಾಯಿತು. ಚಿತ್ರದಲ್ಲಿ ಶ್ರೀಮತಿ ತಸ್ನೀಮ್, ಶ್ರೀ ಸಿ. ಶ್ರೀಧರ್, ಶ್ರೀ ಅಭಿರಾಮ್ ಜಿ. ಶಂಕರ್, ಶ್ರೀ ಗುರುದತ್ತ ಹೆಗಡೆ, ಶ್ರೀಮತಿ ಅಶ್ವಿನಿ ಅನಂತ್, ಶ್ರೀ ಜಿ.ಎಸ್. ಸತ್ಯರಾಜ್, ಶ್ರೀ ವಾಸುದೇವ್ ಭಟ್, ಶ್ರೀ ಪಿ.ವಿ. ಗಿರಿ, ಶ್ರೀಮತಿ ರಶ್ಮಿ ಕೋಟಿ, ಶ್ರೀ ಜಗದೀಶ ಬಾಬು, ಡಾ. ಬಾಲಸುಬ್ರಹ್ಮಣ್ಯ, ಡಾ. ಸಿ.ಜಿ. ಬೆಟಸೂರಮಠ ಮತ್ತಿತರರು. (7.4.2020)



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೊರೋನಾ ನಿಯಂತ್ರಣ ಪರಿಹಾರ ಕಾರ್ಯಗಳಿಗಾಗಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ ಮಠಾಧಿಪತಿಗಳ ಗೋಷ್ಠಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಮ್ಮುಖದಲ್ಲಿ ಶ್ರೀ ಹೊಸಮಠ, ಶ್ರೀ ಹರವೆ ಮಠ, ಶ್ರೀ ನೀಲಕಂಠಸ್ವಾಮಿ ಮಠ ಹಾಗೂ ಶ್ರೀ ಕುಂದೂರು ಮಠದ ಶ್ರೀಗಳವರು ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರಿಗೆ 1.50 ಲಕ್ಷ ರೂ.ಗಳ ಚೆಕ್ಕನ್ನು ನೀಡಿದರು. ಕೃಷಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್, ಮಾಜಿ ಸಚಿವರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ಸಂಸದರಾದ ಶ್ರೀ ಪ್ರತಾಪ ಸಿಂಹರವರಿದ್ದಾರೆ. (11.4.2020)

# ಪ್ರಸಾದ

**ಸಂಪುಟ 35 : ಸಂಚಿಕೆ 2** **ಮಾರ್ಚ್–ಏಪ್ರಿಲ್ 2020**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ
ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

ಮುಖಪುಟ ಚಿತ್ರ

ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೋವಿಡ್–19 ವೈರಾಣು ನಿಯಂತ್ರಣ ಪರಿಹಾರ ಕಾರ್ಯಗಳಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಸಂಸ್ಥೆಯ ನೌಕರರು ನೀಡಿರುವ 50 ಲಕ್ಷ ರೂ.ಗಳ ಚೆಕ್‌ಅನ್ನು ಪರಮಪೂಜ್ಯ ಜಗದ್ಗುರುಗಳವರು ಸಚಿವರಾದ ಶ್ರೀ ವಿ. ಸೋಮಣ್ಣನವರಿಗೆ ನೀಡಿದರು. ಡಾ. ಬಿ. ಸುರೇಶ್, ಶ್ರೀ ಎಸ್. ಪುಟ್ಟಸುಬ್ಬಪ್ಪ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಪ್ರತಾಪ ಸಿಂಹ, ಶ್ರೀ ಅಭಿರಾಮ್ ಜಿ.ಶಂಕರ್, ಶ್ರೀ ಬಿ. ನಿರಂಜನಮೂರ್ತಿ ಹಾಗೂ ಶ್ರೀ ಎಸ್. ಶಿವಕುಮಾರಸ್ವಾಮಿಯವರು (1.4.2020)

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ವೈದ್ಯರಿಗೆ ಮಾನವೀಯತೆ ಅತ್ಯಗತ್ಯ 11
**ಸನ್ಮಾನ್ಯ ಉಪರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯನಾಯ್ಡು**

ಶಿಕ್ಷಣ ಜೀವನ ನಡೆಸಲು ಸಿದ್ಧತೆಯಲ್ಲ, ಶಿಕ್ಷಣವೇ ಜೀವನ 19
**ಡಾ. ರಾಜ್‌ಕುಮಾರ್ ಖತ್ರಿ**

ಮತ್ತೆ ಕೊರಡು ಕೊನರಿಸಿ, ಕಲ್ಯಾಣವಾಗಿಸಿದ
ಮಂಜಪ್ಪನವರಿಗಿದೋ ಶರಣಾರ್ಥಿ... 24
**ವೆಂಕಟೇಶ ಕೆ. ಜನಾದ್ರಿ ಕನಕಗಿರಿ**

ಭರತೇಶ ವೈಭವ: "ವೀರಶೈವ ತಾತ್ವಿಕ ನಿಲುವುಗಳು" 33
**ಡಾ. ಹಾ.ಮ. ನಾಗಾರ್ಜುನ**

ಸರ್ವಜ್ಞನ ವಚನಗಳಲ್ಲಿ ಆರೋಗ್ಯಶಾಸ್ತ್ರ 44
**ವೈದ್ಯರತ್ನ ಡಾ॥ ಸಿ. ಶರತ್‌ಕುಮಾರ್**

ಅಷ್ಟಾವರಣಗಳು 47
**ಡಾ. ಬಸವರಾಜ ಸಬರದ**

ವಾರ್ತಾವಿಹಾರ 56

ಕೃತಿ–ಸ್ವೀಕೃತಿ 62

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1973 | ಮೂರನೇ ಸಂಚಿಕೆ |
| 7. | 1975 | ಮೂರನೇ ಸಂಚಿಕೆ |
| 8. | 1976 | ಮೂರನೇ ಸಂಚಿಕೆ |
| 9. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

ಇಡೀ ಜಗತ್ತು ಇಂದು ಬಹು ದೊಡ್ಡ ಸಂಕಷ್ಟವನ್ನು ಎದುರಿಸುತ್ತಿದೆ. ಔದ್ಯೋಗೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಬೆನ್ನುಹತ್ತಿ ನಾಗರಿಕತೆಯ ತುರೀಯ ಸ್ಥಿತಿಯನ್ನು ತಲುಪಲು ನಾಗಾಲೋಟದಲ್ಲಿ ಸ್ಪರ್ಧಾತ್ಮಕವಾಗಿ ಧಾವಿಸುತ್ತಿದ್ದ ಜಗತ್ತಿನ ಚಲನೆ ಇದ್ದಕ್ಕಿದ್ದ ಹಾಗೆ ಉಸಿರುಕಟ್ಟಿದಂತಾಗಿ ಎಲ್ಲ ಓಟಕ್ಕೂ ವಿರಾಮ ಕೊಟ್ಟು ಇಂದಿಗೇನು ನಾಳೆಗೇನು ಎಂಬ ಆತಂಕದ ಮನಃಸ್ಥಿತಿಯಲ್ಲಿ ಬದುಕುವಂತಾಗಿದೆ.

ದೃಷ್ಟಿಗೋಚರವಾಗುವ ಯಾವುದೇ ಅಡ್ಡಿ ಆತಂಕಗಳನ್ನು ಕ್ಷಣಮಾತ್ರದಲ್ಲಿ ಪರಿಹರಿಸಬಲ್ಲ ಪರಿಹಾರ ತಂತ್ರಗಳನ್ನು ಆವಿಷ್ಕರಿಸಲಾಗಿದೆ ಎಂದು ಬೀಗುತ್ತಿದ್ದ ನಾಗರಿಕ ಮನುಕುಲ ದೃಷ್ಟಿಗೆ ಕಾಣದ ಒಂದು ಸಾಸಿವೆಕಾಳಿನ ಹತ್ತು ಲಕ್ಷದ ಒಂದನೆಯ ಭಾಗದಷ್ಟು ಗಾತ್ರ(!)ದ ವೈರಾಣುವೊಂದಕ್ಕೆ ಎದೆಯೊಡ್ಡಿ ಗೆಲ್ಲಲಾರದೆ ತತ್ತರಿಸಿ ಹೋಗುವ ಮೂಲಕ, ಮನುಷ್ಯನ ಬೌದ್ಧಿಕ ಮಿತಿಗಳ ಸ್ವರೂಪವನ್ನು ಅರಿತು ನಡೆಯಬೇಕಾದ ಹಂತಕ್ಕೆ ಬಂದಿದೆ. ಮಹಾಭಾರತದಲ್ಲಿ ಒಂದು ಕಡೆ ಧರ್ಮರಾಯನು "ನಾವು ನಾವೇ ಜಗಳವಾಡುವಾಗ ಕೌರವರು ನೂರು ಜನ, ನಾವು ಐದು ಜನ; ಆದರೆ ಬೇರೆಯವರು ನಮಗೆ ಎದುರಾದರೆ ನಾವು ನೂರೈದು ಜನ? ಎಂದು ಹೇಳಿದ ಹಾಗೆ ಈಗ ಎಲ್ಲ ರಾಷ್ಟ್ರನಾಯಕರುಗಳು, ಹಾಗೆಯೇ ವಿವಿಧ ಜನಾಂಗಗಳು ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ವೈರಾಣುವನ್ನು ನಾಶಮಾಡುವ ದಿಕ್ಕಿನಲ್ಲಿ ಏಕಾಭಿಪ್ರಾಯದಿಂದ ತೊಡಗಿಕೊಂಡಿರುವುದು ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ.

ಈ ಪಿಡುಗಿನ ಪರಿಹಾರಕ್ಕೆ ಸೂಕ್ತ ಔಷಧಕ್ಕಾಗಿ ಜಗತ್ತಿನಾದ್ಯಂತ ವಿಜ್ಞಾನಿಗಳು ಹಾಗೂ ಸಂಶೋಧಕರು ತಮ್ಮೆಲ್ಲ ಸಾಮರ್ಥ್ಯಗಳನ್ನು ಒಟ್ಟುಗೂಡಿಸಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ; ಈಗಾಗಲೇ ಕರೋನಾ ಎನ್ನುವ ಈ ಅಗೋಚರ ಹೆಮ್ಮಾರಿಯ ಹಿಡಿತಕ್ಕೆ ಸಿಲುಕಿರುವವರ ಶುಶ್ರೂಷೆಯಲ್ಲಿ ವೈದ್ಯರು, ದಾದಿಯರು, ಆಶಾ ಕಾರ್ಯಕರ್ತೆಯರು ಅಹರ್ನಿಶಿ ಶ್ರಮಿಸುತ್ತಿದ್ದಾರೆ. ವಿವಿಧ ಇಲಾಖೆಗಳ ಸಿಬ್ಬಂದಿ ವರ್ಗದವರು ತುಂಬ ಜವಾಬ್ದಾರಿಯುತವಾಗಿ ಸೇವಾಮನೋಭಾವದಿಂದ ಕರ್ತವ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಜನರು ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಅಸಹಾಯಕರ ಬೆನ್ನಿಗೆ ನಿಂತಿದ್ದಾರೆ.

ಸರ್ಕಾರಗಳು ಎಲ್ಲ ರೀತಿಯ ಧನಾತ್ಮಕ ಮಾರ್ಗಗಳನ್ನು ಮುಕ್ತವಾಗಿ ತೆರೆದಿವೆ. ಇಷ್ಟಾಗಿಯೂ ಲಕ್ಷಾಂತರ ಸಂಖ್ಯೆಯಲ್ಲಿ ಜನ ಈ ಪಿಡುಗಿಗೆ ತುತ್ತಾಗುತ್ತಲೇ ಇದ್ದಾರೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಅಮೆರಿಕ ಒಂದರಲ್ಲಿಯೇ ಹದಿನೈದು ಲಕ್ಷ ಜನ ಸೋಂಕಿತರಿದ್ದು, ತೊಂಬತ್ತೂರು ಸಾವಿರ ಜನ ಮೃತಪಟ್ಟರೆ, ಇಡೀ ವಿಶ್ವದಲ್ಲಿ ಮೂರೂಕಾಲು ಲಕ್ಷ ಜನ ಬಲಿಯಾಗಿದ್ದಾರೆ. ಒಟ್ಟು ಸೋಂಕಿತರ ಸಂಖ್ಯೆ ಐವತ್ತು ಲಕ್ಷದಷ್ಟಾಗಿದೆ. ಇದು ದಿನದಿನಕ್ಕೂ ಹೆಚ್ಚಾಗುತ್ತಲೇ ಇದೆ.

ಇದರಿಂದ ಸಾಮಾಜಿಕ ಬದುಕು ಅಸ್ತವ್ಯಸ್ತಗೊಂಡು, ಜನಸಾಮಾನ್ಯರ ಬದುಕು ದುರ್ಭರವಾಗಿದೆ. ಭಾರತದಲ್ಲಿಯೂ ಸೋಂಕಿತರ ಸಂಖ್ಯೆ ಒಂದು ಲಕ್ಷದ ಗಡಿಯನ್ನು ದಾಟಿದೆ. ಲಾಕ್‌ಡೌನ್ ಸಡಿಲಗೊಳಿಸಿದ ನಂತರ ಅದರ ವೇಗ ಮತ್ತಷ್ಟು ಹೆಚ್ಚಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಎಲ್ಲ ಆರ್ಥಿಕ ಹಾಗೂ ಮಾನವ ಶಕ್ತಿಯನ್ನು ಈ ರೋಗದ ನಿಯಂತ್ರಣ ಹಾಗೂ ನಿರ್ಮೂಲನೆಗೆ ಬಳಸುತ್ತಿವೆ.

ಇದು ಸಮಸ್ಯೆಯ ಒಂದು ಮುಖ. ಆದರೆ ಸಾಮಾಜಿಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ವ್ಯವಹರಿಸದಿದ್ದರೆ, ಸರ್ಕಾರಗಳ ಎಲ್ಲ ಪ್ರಯತ್ನಗಳೂ ವ್ಯರ್ಥವಾಗುತ್ತವೆ. ಸರ್ಕಾರಗಳು ಎಷ್ಟೇ ಸಮರ್ಥವಾಗಿದ್ದರೂ, ದೇಶದ ಆರ್ಥಿಕ ಸ್ಥಿತಿ ಎಷ್ಟೇ ಶಕ್ತಿಯುತವಾಗಿದ್ದರೂ, ಅನಿವಾರ್ಯವಾಗಿ ಎಲ್ಲರೂ ನಿಸ್ಸಹಾಯಕ ಸ್ಥಿತಿಯನ್ನು ತಲುಪಬೇಕಾಗುತ್ತದೆ ಎನ್ನುವುದು ಈಗಾಗಲೇ ಅನೇಕ ಮುಂದುವರಿದ ರಾಷ್ಟ್ರಗಳ ಉದಾಹರಣೆಯಿಂದ ಮನವರಿಕೆ ಯಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮನ್ನು ಕಾಪಾಡಿಕೊಳ್ಳಬೇಕು ಎನ್ನುವ ಅರಿವು ಬರಬೇಕಾಗಿದೆ. ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಆರೋಗ್ಯ ಇಲಾಖೆ ಏನೇನು ಕ್ರಮಗಳನ್ನು ಮಾರ್ಗಸೂಚಿಗಳನ್ನು ಹೇಳಿದೆಯೋ, ಅವು ಎಷ್ಟೇ ಕಠಿಣ ಎನಿಸಿದರೂ, ಎಲ್ಲರೂ ಕಡ್ಡಾಯವಾಗಿ ಅನುಸರಿಸಬೇಕು. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವ್ಯವಹರಿಸು ವುದು ಅಷ್ಟೇನು ಕಷ್ಟಕರವಾದ ಕೆಲಸ ಎನಿಸುವುದಿಲ್ಲ – ಒಂದಿಷ್ಟು ಸಂಯಮ, ತಾಳ್ಮೆ ಬೇಕು ಅಷ್ಟೆ

ಈ ನಿಟ್ಟಿನಲ್ಲಿ ಎಲ್ಲರೂ ತ್ರಿಕರಣಪೂರ್ವಕವಾಗಿ, ಪ್ರಾಮಾಣಿಕತೆಯಿಂದ ಪ್ರಯತ್ನಿಸಬೇಕು, ಆ ಮೂಲಕ ಸಾಮಾಜಿಕ ಬದುಕು ಆತಂಕದಿಂದ ದೂರ ವಾಗಿ ಎಂದಿನ ಸಮಸ್ಥಿತಿಗೆ ಬಂದು ನೆಮ್ಮದಿಯನ್ನು ಕಾಣುವಂತಾಗಲೆಂದು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಕೊರೋನಾ.... ಕೊರೋನಾ.... ಕೊರೋನಾ....

ಈ ಭಯದ ಜಪ ಪ್ರಾರಂಭವಾಗಿ ಸುಮಾರು ಎರಡು ತಿಂಗಳು ಕಳೆಯುತ್ತಾ ಬಂದುವು.

ಯಾರಿಗೇ ದೂರವಾಣಿ ಕರೆ ಮಾಡಿದರೂ, ಆ ತುದಿಯಿಂದ ಹಿತವಾದ 'ರಿಂಗ್‌ಟೋನ್' ಬದಲು ಮೊದಲು ಅಪ್ಪಳಿಸುವುದು ಯಾರೋ ಬಂದು ನಮ್ಮ ಕಿವಿಯ ಬಳಿಯೇ ಕೆಮ್ಮಿದಂತೆ. ಘೊಕ್... ಘೊಕ್... ಎನ್ನುವ ಭಯಂಕರ ಸದ್ದು. ಮರುಕ್ಷಣದಲ್ಲಿಯೇ, ಹಲೋ... ಹೇಗೆ ಕಾಲ ಕಳೆಯುತ್ತಿದ್ದೀರಿ? (ಎಲ್ಲಿದ್ದೀರಿ ಎನ್ನುವ ಪ್ರಶ್ನೆ ಅಪ್ರಸ್ತುತ!) ಏನ್ರಿ ಈ ಪರಿಸ್ಥಿತಿ ಆಗಿಹೋಯಿತು. ನಾವು ಪ್ಲೇಗ್... ಕಾಲರಾ... ಸಿಡುಬು... ಮುಂತಾದುವನ್ನು ಕೇಳಿದ್ದೆವು ಅಷ್ಟೆ. ಆಗಲೂ ಜನ ಒಟ್ಟೊಟ್ಟಾಗಿ ಸಾಯುತ್ತಿದ್ದರಂತೆ. ರೋಗಪೀಡಿತರನ್ನು ತಂದೆ, ತಾಯಿ, ಗಂಡ, ಹೆಂಡತಿ ಮುಂತಾದ ಸಂಬಂಧಗಳ ಹಿಡಿತ ಎಷ್ಟೇ ಇದ್ದರೂ ಅವರನ್ನು ಇದ್ದಲ್ಲಿಯೇ ಹಾಗೆಯೇ ಬಿಟ್ಟು ಬಾಳಿ ಬದುಕಿದ ಊರನ್ನೇ ತೊರೆದು ಜೀಬ ಭಯದಿಂದ ಓಡಿಹೋಗುತ್ತಿದ್ದುದನ್ನು ಕೇಳಿದ್ದೆವು.

ಹಾಗೆ ಕೇಳಿಸಿಕೊಂಡಾಗ, ಹೆತ್ತವರು ಹೊತ್ತವರನ್ನೆಲ್ಲಾ ಬಿಟ್ಟು ಹೇಗೆ ತಾನೇ ಹೋಗುತ್ತಿದ್ದರು ಎಂದು ಅಂದುಕೊಳ್ಳುತ್ತಿದ್ದೆವು, ಆದರೆ ಈಗ ಅದೇ ಸ್ಥಿತಿ ನಮಗೂ ಉಂಟಾ ಗಿದೆ. ಸಾಮಾಜಿಕ ಅಂತರವನ್ನು ಕಾಯ್ದುಕೊಂಡೇ ಮನೆಯಲ್ಲಿ ವ್ಯವಹರಿಸಬೇಕು; ಅತಿಥಿ ಅಭ್ಯಾಗತರ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಸುಖಾಸುಮ್ಮನೆ ಸುತ್ತುವುದು, ಮನರಂಜನೆಯ ಹೆಸರಿನ ಮೋಜುಗಾರಿಕೆ, ವಾಹನಗಳ ಜಾಲಿ ರೈಡಿಂಗ್ ಮತ್ತು ವಾಹನಗಳು, ಮಾಲ್‌ಗಳು ಡಿಆರ್‌ಸಿಗಳು ಮುಂತಾದ ಕಡೆ 'ಅಸಹಜಹವಾ'ದ ಅಭ್ಯಾಸ – ಈ ಎಲ್ಲದಕ್ಕೂ 'ಲಾಕ್‌ಡೌನ್' ಆಗಿ, ನಾಗರಿಕ ಬದುಕಿನ ಹುಚ್ಚು ಸೆಳೆತಗಳಿಗೆಲ್ಲಾ 'ಬ್ರೇಕ್' ಹಾಕಿರುವುದು, ಏನೋ ದೊಡ್ಡ ದುರಂತ ಸಂಭವಿಸಿರುವಂತೆ ಭಾಸವಾಗುತ್ತಿದೆ. ಏನು ಬದುಕು ಇದು! ಹೌದು ಏನು ಬದುಕು ಇದು?

ಎರಡು ಮಹಾಯುದ್ಧಗಳನ್ನು ಜಗತ್ತು ಕಂಡಿದೆ. ಅನೇಕ ರಾಷ್ಟ್ರಗಳು ತಮ್ಮದೇ ಸಮಸ್ಯೆಗಳ ಬೇರೆ ಬೇರೆ ಯುದ್ಧಗಳ ಪರಿಣಾಮವನ್ನು ಅನುಭವಿಸಿವೆ.

ಅನೇಕ ಕ್ರಾಂತಿಗಳಲ್ಲಿ ನಡೆದ ಮನುಷ್ಯರ ಕಗ್ಗೊಲೆಗಳು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಬಾಂಬ್‌ಗಳಿಂದ ಉಂಟಾದ ವಿಕಿರಣಗಳ ಪ್ರಭಾವದ ದುರ್ಭರ ಬದುಕನ್ನು ಕೆಲವರು ಈಗಲೂ ಅನುಭವಿಸುತ್ತಿದ್ದಾರೆ. ಆದರೆ ಇವೆಲ್ಲಕ್ಕೂ ಭಿನ್ನವಾದ ಸಂಕಷ್ಟಕ್ಕೆ ಈಗ ಇಡೀ ಮನುಕುಲ ಸಿಕ್ಕಿ ಒದ್ದಾಡುತ್ತಿದೆ. ಕಣ್ಣಿಗೆ ಕಾಣುವ ಶತ್ರುವನ್ನು ಎದುರಿಸಲು ಅನೇಕ ಮಾರ್ಗಗಳಿವೆ, ತಂತ್ರಗಳಿವೆ. ಆದರೆ ವೈರಸ್‌ನಂತಹ ಅಗೋಚರ ಜೀವಿಯೊಡನೆ ಹೋರಾಡುವ ಮಾರ್ಗೋಪಾಯಗಳನ್ನು ಕಾಣದೆ ಜಗತ್ತು ತತ್ತರಿಸುತ್ತಿದೆ. ಪ್ರಪಂಚದ ದೊಡ್ಡಣ್ಣ, ಚಿಕ್ಕಣ್ಣ–ಎಲ್ಲರೂ ಈಗ ತಮ್ಮ ಭ್ರಮೆಗಳನ್ನು ಬಿಟ್ಟು ಕ್ರಿಮಿಯೊಂದರ ಮುಂದೆ ದೈನೇಸಿಯಂತೆ ಮಂಡಿಯೂರಿದ್ದಾರೆ. ನಮ್ಮ ರಕ್ಷಣೆಗಾಗಿ ನಾವೇ ಪ್ರತಿಷ್ಠಾಪಿಸಿ ಕೊಂಡಿರುವ ದೇವರುಗಳು ಈಗ ಬಾಗಿಲು ಮುಚ್ಚಿಕೊಂಡು ಭಕ್ತರೊಡನೆ ಸಾಮಾಜಿಕ ಅಂತರವನ್ನು ಕಾಯ್ದುಕೊಂಡಿರುವ ಸ್ಥಿತಿ ನಿರ್ಮಾಣವಾಗಿದೆ.

ಇದನ್ನು ಕಂಡಾಗ ಬಸವಾದಿ ಶರಣರು ಹೇಳಿದ ದೇಹವನ್ನೇ ದೇವಾಲಯವನ್ನಾಗಿಸಿಕೊಳ್ಳುವ ಕಲ್ಪನೆ ಅದೆಷ್ಟು ಅರ್ಥಪೂರ್ಣ ಎನಿಸುತ್ತದೆ. ಇಂತಹ ಮಾರಣಾಂತಿಕ ಸನ್ನಿವೇಶದಲ್ಲಿ ನಮ್ಮ ಅಹವಾಲು ಸಲ್ಲಿಸುವುದು ಯಾರಿಗೆ? 'ರಕ್ಷಿಸು ನಮ್ಮನನವರತ' ಎಂದು ಮೊರೆಯಿಡುವುದು ಯಾರ ಬಳಿ? ಈ ಒಂದೊಂದೂ ನಮ್ಮನ್ನು ಹೆಚ್ಚು ಹೆಚ್ಚು ಅಂತರ್ಮುಖಿಗಳನ್ನಾಗಿ ಸುತ್ತಿವೆ. ಪರಂಪರಾಗತವಾಗಿ ಬಂದ ಅನೇಕ ನಂಬಿಕೆ ನಡಾವಳಿಗಳು ಸಾವಿನ ಭಯದ ಮುಂದೆ ಹೇಗೆ ನಾಶವಾಗಿ ಬಿಡುತ್ತವೆ ಎನ್ನುವುದಕ್ಕೆ ಇದು ಬಹು ದೊಡ್ಡ ಉದಾಹರಣೆ.

ಇಂತಹ ಸನ್ನಿವೇಶವೊಂದನ್ನು ನಿರ್ಲಿಪ್ತವಾಗಿ ಪೂರ್ಣದೃಷ್ಟಿಯಿಂದ ಪರಿಭಾವಿಸಿದಾಗ ಸತ್ಯದ ಬೇರೆ ಬೇರೆ ಮುಖಗಳು ಅನಾವರಣಗೊಳ್ಳುತ್ತವೆ. 'ವೈಜ್ಞಾನಿಕ ಸಂಶೋಧನೆ' ಎನ್ನುವ ಆಧುನಿಕ ಪ್ರಕ್ರಿಯೆ ಪ್ರಾರಂಭವಾಗಿ ಕೇವಲ ಒಂದೆರಡು ಶತಮಾನಗಳು ಮಾತ್ರ ಸಂದಿವೆ. ಇಡೀ ಸೃಷ್ಟಿಯ ಗೂಢಾತಿಗೂಢವಾದ ಅನೇಕ ಅಂಶಗಳು ಸಂಶೋಧಕರಿಗೆ ಇನ್ನೂ ದಕ್ಕಬೇಕಾಗಿದೆ. ವೈರಾಣು ಎನ್ನುವುದು ಹೊಸದಾಗಿ ಹುಟ್ಟಿರುವ ಜೀವಿ ಏನಲ್ಲ; ಹಾಗೆಯೇ ಇಂತಹ ಲೆಕ್ಕಕ್ಕೆ ಸಿಕ್ಕದಷ್ಟು ವೈರಾಣುಗಳು ನಮ್ಮೊಳಗೆ, ನಮ್ಮ ಸುತ್ತಮುತ್ತಲ್ಲೆಲ್ಲಾ ಸುಪ್ತ ರೂಪದಲ್ಲಿ ಇದ್ದೇ ಇವೆ. ಒಟ್ಟು ಜೀವಜಾಲದ ಆವರ್ತದಲ್ಲಿ ಯಾವುದೇ ಜೀವಿಯ 'ಅಳಿವು–ಉಳಿವು' ಒಂದು ಸಹಜ ಪ್ರಕ್ರಿಯೆ ಮಾತ್ರ. ಆದರೆ ಪ್ರಾಕೃತಿಕ ವೈಪರೀತ್ಯಗಳಿಂದ, ಹಾಗೆಯೇ ಮನುಷ್ಯನ ನಿಸರ್ಗ ವಿರೋಧಿ ಜೀವನಕ್ರಮದಿಂದ ಉಂಟಾಗುವ ದೇಹದಲ್ಲಿನ ವ್ಯತ್ಯಾಸದಿಂದ ಕೆಲವು ವೈರಾಣುಗಳು ಉಲ್ಬಣಗೊಳ್ಳುತ್ತವೆ. ಅವುಗಳನ್ನು ನಾಶ ಮಾಡುವ

ಭೇಷಜ ನಮಗೆ ಸಿಕ್ಕಿದಾಗಲೋ ಅಥವಾ ಅದಕ್ಕೆ ಪೂರಕವಲ್ಲದ ಪರಿಸರ ನಿರ್ಮಾಣವಾದಾಗಲೋ ಅದರಷ್ಟಕ್ಕೆ ಅದೇ ನಾಶವಾಗುತ್ತವೆ ಅಥವಾ ನಿಯಂತ್ರಣಗೊಳ್ಳುತ್ತವೆ.

ಅತ್ಯಾಧುನಿಕವಾದ ವೈದ್ಯಕೀಯ ಸೌಲಭ್ಯ ವಿರುವ ಅಮೆರಿಕದಂತಹ ದೇಶದಲ್ಲಿಯೇ ಲಕ್ಷಾಂತರ ಜನ ಮರಣಹೊಂದಿದರು ಎನ್ನುವುದನ್ನು ನೆನೆಸಿಕೊಂಡರೆ ಮನಸ್ಸು ಜರ್ಝರಿತವಾಗುತ್ತದೆ. ಹಾಗಿದ್ದರೆ ಇದರಿಂದ ಬಿಡುಗಡೆ ಪಡೆಯಲು ಇರುವ ಮಾರ್ಗೋಪಾಯಗಳು ಯಾವುವು? ಅವು ಯಾರಿಂದ ಚಾಲನೆಗೊಳ್ಳಬೇಕು ಎನ್ನುವುದನ್ನು ಪ್ರತಿಯೊಬ್ಬರೂ ಗಂಭೀರವಾಗಿ ಚಿಂತಿಸಬೇಕಾಗಿದೆ.

ಸಂಶೋಧಕರು, ವೈದ್ಯಕೀಯ ಸಿಬ್ಬಂದಿ, ಅವರಿಗೆ ನೆರವಾಗಲು ವಿವಿಧ ಇಲಾಖೆಗಳ ನೌಕರವರ್ಗ, ಎಲ್ಲದಕ್ಕೂ ಹಣವನ್ನು ವ್ಯಯ ಮಾಡುತ್ತಿರುವ ಸರ್ಕಾರ – ಈ ಎಲ್ಲವುಗಳು ಇದನ್ನೊಂದು ಸವಾಲಾಗಿ ಸ್ವೀಕರಿಸಿ ಸೇವೆ ಸಲ್ಲಿಸುತ್ತಿರುವುದು ಸಮಸ್ಯೆಗಳನ್ನು ಪರಿಹರಿಸುವ ಒಂದು ಸ್ತರದ ಕೆಲಸವಾದರೆ; 'ಸಾಮಾಜಿಕರ ಜವಾಬ್ದಾರಿ' ಎನ್ನುವುದು ಈ ಎಲ್ಲಕ್ಕಿಂತ ಹೆಚ್ಚಿನದಾಗಿದೆ. ಸಮಾಜದ ಪ್ರತಿಯೊಬ್ಬರೂ ಒಟ್ಟು ವ್ಯವಸ್ಥೆಯ ಹಿನ್ನೆಲೆಯಲ್ಲಿ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ನಡೆದುಕೊಳ್ಳದಿದ್ದರೆ ಉಳಿದೆಲ್ಲರ ಎಲ್ಲ ಪ್ರಯತ್ನಗಳೂ ಹೊಳೆಯಲ್ಲಿ ಹುಣಸೆಹಣ್ಣು ತೇಯ್ದಂತೆಯೇ ಸರಿ.

ನಮ್ಮ ಪೂರ್ವಜರಿಗೆ ಈಗಿನಷ್ಟು ವಿದ್ಯಾಭ್ಯಾಸ ಇಲ್ಲದಿದ್ದರೂ ಬದುಕಿನ ಬಗ್ಗೆ ಒಂದು ಬದ್ಧತೆ ಎನ್ನುವುದು ಇತ್ತು. ಹಾಗೆಯೇ ನಿತ್ಯದ ವ್ಯವಹಾರದಲ್ಲಿ ಒಂದು 'ಆದ್ಯತೆ' ಎನ್ನುವುದಿತ್ತು. ಚತುರ್ವಿಧ ಪುರುಷಾರ್ಥಗಳ ಕಲ್ಪನೆಯೂ ಆದ್ಯತೆಗಳನ್ನು ಆಧರಿಸಿದ್ದೇ ಆಗಿದೆ. ಈಗ ಆ ಕಲ್ಪನೆಯೇ ನೇತ್ಯಾತ್ಮಕ ವಿಮರ್ಶೆಗೆ ಪಕ್ಕಾಗಿರುವುದು ದುರದೃಷ್ಟಕರ.

ಕ್ವಾರಂಟೈನನ್ನು ಸ್ವಲ್ಪವೇ ಸಡಿಲ ಮಾಡಿದ ತಕ್ಷಣ ಹೆಂಡದಂಗಡಿಗಳ ಮುಂದೆ ಮಹಿಳೆಯರು ಸಾಲುಗಟ್ಟಿ ನಿಂತಿದ್ದುದನ್ನು ದೃಶ್ಯಮಾಧ್ಯಮಗಳಲ್ಲಿ ನೋಡುತ್ತಿದ್ದರೆ ನಮ್ಮ ಸಾಮಾಜಿಕ ಬದುಕಿನ ಹೀನಸ್ಥಿತಿಯ ಅರಿವಾಗುತ್ತದೆ. ಮೊದಲ ಒಂದೇ ದಿನದಲ್ಲಿ 50 ಕೋಟಿ ರೂಪಾಯಿಗಳ ಮದ್ಯದ ವಹಿವಾಟು ನಡೆದಿದೆ ಎನ್ನುವುದು ರಾಜ್ಯದ ಬೊಕ್ಕಸದ ದೃಷ್ಟಿಯಿಂದ ಸಂಬಂಧಪಟ್ಟವರು ಸಂತೋಷಪಡುವ ವಿಚಾರವಾಗಿರ ಬಹುದು. ಆದರೆ ಉಳಿದಂತೆ ಇದು ವೈರಸ್‌ಗಿಂತ ಹೆಚ್ಚಿನ ಅನಾಹುತವನ್ನು ಉಂಟುಮಾಡುವ ಸೂಚನೆಯೇ ಆಗಿದೆ.

ಈ ದಿನಗಳಲ್ಲಿ ಮನೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಶೇಕಡಾ 40ರಷ್ಟು ಹೆಚ್ಚಾಯಿತಂತೆ; ಅನೇಕ ಯುವಕ–ಯುವತಿಯರು ಮಾನಸಿಕ

ಒತ್ತಡಕ್ಕೆ ಒಳಗಾದರಂತೆ. ಈ ಅಂಶಗಳೆಲ್ಲಾ ಏನನ್ನು ಸೂಚಿಸುತ್ತವೆ? 'ಮನೆಯೇ ಬೃಂದಾವನ' ಎನ್ನುವ ನಮ್ಮ ಹಿರಿಯರ ಪರಿಕಲ್ಪನೆಯೇ ತಲೆಕೆಳಗಾಗಿ 'ಮನೆಯೇ ನೋವಿನ ತಾಣ' ಎನ್ನುವಂತಾಗಲು ಕಾರಣವೇನು? ಆಪ್ತ ಆವರಣದ ಸಂತೃಪ್ತ ಬದುಕಿಗಿಂತ ಹುಸಿ ಪ್ರದರ್ಶನದ, ಪ್ರಚಾರದ ಭ್ರಮೆಯ, ಮಾರುಕಟ್ಟೆ, ಮಾಲ್‌ಗಳು ಹುಟ್ಟುಹಾಕಿರುವ ಕೊಳ್ಳುಬಾಕ ಬಯಕೆಯ, ಏಕಾಂತಕ್ಕಿಂತ 'ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ, ಇದರ ಬಾಲ ಅದು, ಅದರ ಬಾಲ ಇದು ಮೂಸಿ ಅಂಡಲೆಯುವ' ಬದುಕಿನ ರೀತಿರಿವಾಜುಗಳಿಗೆ ಎಲ್ಲರೂ ಒಗ್ಗಿಹೋಗಿರುವುದು ನಿಚ್ಚಳವಾಗಿ ಗೋಚರವಾಗುತ್ತಿದೆ. ಜಾತಿ, ಧರ್ಮ, ಭಾಷೆ, ಬಡವ, ಸಿರಿವಂತ ಇತ್ಯಾದಿ ಕಾರಣಗಳಿಂದ ನಮ್ಮ ಮನಸ್ಸುಗಳ ಅಂತರ ಎಂದೋ ಆಗಿಹೋಗಿದೆ. ಈಗ ದೈಹಿಕ ಅಂತರವೂ ಉಂಟಾಗುತ್ತಿದೆ. ಇದರಿಂದ 'ಸಮುದಾಯದ' ಬದುಕಿನ ಮೂಲ ಬೇರುಗಳೇ ನಿರ್ಮೂಲವಾಗುತ್ತಿವೆ. ಆಧುನಿಕ ಬದುಕಿನ ಪ್ರವಾಹದಲ್ಲಿ 'ಮುಖಮುಖಗಳೂ ಮುಖವಾಡ ಧರಿಸಿ' ಸಾಗುತ್ತಿರುವ ದಿನಮಾನಗಳಲ್ಲಿ ಇನ್ನು 'ಮಾಸ್ಕನ್ನೂ' ಧರಿಸುವುದು ಶಾಶ್ವತವಾಗಿಬಿಟ್ಟರೆ ಗತಿ ಏನು?

ಹೀಗೆ ಮುಖ ಮುಚ್ಚಿಕೊಂಡು ಸಮುದಾಯದ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಅವಕಾಶಗಳಿಂದ ವಂಚಿತರಾಗಿ ಬದುಕುವ ಅನಿವಾರ್ಯತೆಯ 'ಉಬ್ಬಸ' ಎಷ್ಟು ದಿನ? ಮತ್ತೆ ಅಂತಹ ಬದುಕು ತಾನೆ ಏಕೆಬೇಕು? ಹಾಗೆಯೇ ಜಾಗತಿಕ ಮಟ್ಟದಲ್ಲಿ ಇಂತಹ ಕಷ್ಟ ಉಂಟಾಗಿದ್ದರೂ ಭಯೋತ್ಪಾದಕ ಕೃತ್ಯಗಳು, ಗಡಿಯಲ್ಲಿ ಸೇನೆಯ ಜಮಾವಣೆ, ಈ ಸ್ಥಿತಿಗೆ ಯಾರು ಕಾರಣ ಎನ್ನುವುದರ ಬಗ್ಗೆ ಪರಸ್ಪರ ಕೆಸರೆರಚಾಟ, ರಾಜಕೀಯ ಪಕ್ಷವೊಂದನ್ನು ಅಥವಾ ರಾಜಕೀಯ ನೇತಾರರೊಬ್ಬರನ್ನು ಗುರಿಯಾಗಿಸಿಕೊಂಡು ಮಾಡುವ ಜವಾಬ್ದಾರಿ ರಹಿತ ಟೀಕೆ-ಟಿಪ್ಪಣಿಗಳು ನಿರಂತರವಾಗಿ ನಡೆಯುತ್ತಿರುವುದನ್ನು ನೋಡಿದರೆ ಬಹುಶಃ ಎಲ್ಲೋ ನಮ್ಮ ಮೌಲ್ಯರಹಿತ ಬದುಕಿನ 'ಪಾಪದ ಕೊಡ' ತುಂಬಿ ಬಂದಿದೆಯೇನೋ ಎನಿಸುತ್ತಿದೆ. ಈ ಸ್ಥಿತಿಯಿಂದ ಹೊರಬರುವ ಮಾರ್ಗಗಳು ಯಾವುವು? ಪ್ರಜ್ಞಾವಂತರು ಚಿಂತಿಸಬೇಕಾಗಿದೆ.

ಕೆಸರಲ್ಲಿ ಬಿದ್ದ ಬಡಪಶುವಿನಂತೆ –
ಆನು ದೆಸೆದೆಸೆಗೆ ಬಾಯಿಬಿಡುತ್ತಿದ್ದೆನಯ್ಯಾ !
ಆರಯ್ಯರಿಲ್ಲ – ಅಕಟಕಟ ! ಪಶುವೆಂದೆನ್ನ
ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ವೈದ್ಯರಿಗೆ ಮಾನವೀಯತೆ ಅತ್ಯಗತ್ಯ

**ಸನ್ಮಾನ್ಯ ಉಪರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯನಾಯ್ಡು**

**ಮೈ**ಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ದಶಮ ಘಟಿಕೋತ್ಸವ ಭಾಷಣ ಮಾಡಲು ನಿಮ್ಮೆಲ್ಲರೊಂದಿಗೆ ಇರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಯಾವುದೇ ಸಂಸ್ಥೆಗೆ ಉಪರಾಷ್ಟ್ರಪತಿಯಾದವರು ಒಮ್ಮೆ ಭೇಟಿ ನೀಡಿದರೆ 2 ವರ್ಷಗಳ ಅವಧಿಯಲ್ಲಿ ಪುನಃ ಭೇಟಿ ನೀಡುವುದಿಲ್ಲ. ಆದರೆ ನನಗೆ ಈ ಸಂಸ್ಥೆಯ ಬಗ್ಗೆ ವಿಶೇಷ ಗೌರವವಿದೆ. ಪರಮಪೂಜ್ಯರು ಆಧ್ಯಾತ್ಮಿಕ ಮಾರ್ಗದರ್ಶನದೊಂದಿಗೆ ಸಾಮಾಜಿಕ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿಯೇ ನಾನು ಈ ಆಹ್ವಾನವನ್ನು ಒಪ್ಪಿಕೊಂಡಿದ್ದೇನೆ. 2018ರ ಅಗಸ್ಟ್ 28 ರಂದು ರಾಜೇಂದ್ರ ಶ್ರೀಗಳವರ 103ನೇ ಜಯಂತಿಯಲ್ಲಿ ನಾನು ಪಾಲ್ಗೊಂಡಿದ್ದೆ. ಸುಂದರವಾದ ನಗರ ಮೈಸೂರಿಗೆ ಬರಲು ಸಂತೋಷವಾಗುತ್ತದೆ. ಇಲ್ಲಿರುವ ಸ್ವಚ್ಛತೆ, ಸೇವಾ ಸೌಕರ್ಯಗಳು ಸ್ಫೂರ್ತಿ ನೀಡುತ್ತವೆ.

ಇಲ್ಲಿ ಸೇರಿರುವ ಎಲ್ಲಾ ಪದವೀಧರ ವಿದ್ಯಾರ್ಥಿಗಳಿಗೆ ಈ ದಿನ ನಿಜಕ್ಕೂ ಬಹಳ ವಿಶೇಷವಾದದ್ದು. ನಿಮ್ಮ ಜೀವನದಲ್ಲಿ ನೆನಪಿನಲ್ಲಿ ಉಳಿಯುವಂತಹ ಮಹತ್ವದ ಸಂದರ್ಭವಿದು. ಜೊತೆಗೆ ಈ ಸಂಭ್ರಮಾಚರಣೆಯಲ್ಲಿ ಹೊಸ ಆರಂಭವೂ ಇದೆ. ಇಲ್ಲಿಂದ ಹೊರಹೋದ ನಂತರ ಕೆಲವರು ಉನ್ನತ ಅಧ್ಯಯನವನ್ನು ಕೈಗೊಳ್ಳಬಹುದು. ಕೆಲವರು ಆರೋಗ್ಯಸೇವೆಯ ವೃತ್ತಿಯನ್ನು ಪ್ರಾರಂಭಿಸಬಹುದು. ಇನ್ನೂ ಕೆಲವರು ಸ್ವಂತ ಉದ್ಯಮಗಳನ್ನು ಸ್ಥಾಪಿಸ ಬಹುದು ಮತ್ತು ವಿದೇಶಕ್ಕೆ ಹೋಗಬಹುದು. ಏನೇ ಆಗಲಿ ದೇಶವನ್ನು ತೊರೆಯಬೇಡಿ, ತಾಯ್ನಾಡಿಗೆ ಸೇವೆ ಸಲ್ಲಿಸಿ.

---

ನವೆಂಬರ್ 2 ರಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ದಶಮ ಘಟಿಕೋತ್ಸವದಲ್ಲಿ ಘನತೆವೆತ್ತ ಉಪರಾಷ್ಟ್ರಪತಿಗಳಾದ ಶ್ರೀ ಎಂ. ವೆಂಕಯ್ಯನಾಯ್ಡುರವರು ಮಾಡಿದ ಘಟಿಕೋತ್ಸವ ಭಾಷಣ.

ನೀವು ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳಿ. ಆದರೆ ಉನ್ನತವಾದ ಕನಸನ್ನು ಕಾಣಿ. ನಿಮ್ಮ ಗುರಿ ಸಾಧಿಸಲು ಅಚಲವಾದ ಬದ್ಧತೆ ಮತ್ತು ಉತ್ಸಾಹದಿಂದ ಶ್ರಮಿಸಿ. ಎಂದಿಗೂ ಹಿಂಜರಿಯಬೇಡಿ. ನಿಮ್ಮ ಕನಸುಗಳು ಸಾಕಾರಗೊಳ್ಳಲು ಪ್ರಾಮಾಣಿಕ ಮತ್ತು ಸ್ಥಿರವಾದ ದಾರಿಯಲ್ಲಿ ನಡೆಯಿರಿ. ನಿಜವಾದ ಬುದ್ಧಿವಂತಿಕೆಯೆಂದರೆ, ನಮ್ಮ ಕಣ್ಣ ಮುಂದೆ ನಡೆಯುತ್ತಿರುವುದನ್ನು ನೋಡುವುದು ಮಾತ್ರವಲ್ಲದೆ, ಅದು ಮುನ್ಸೂಚನೆಯನ್ನು ಒಳಗೊಂಡಿರ ಬೇಕಾಗುತ್ತದೆ ಎಂಬುದನ್ನು ನೆನಪಿಡಬೇಕು. ಇಲ್ಲಿ ಸೇರಿರುವವರಲ್ಲಿ ಹೆಚ್ಚಿನವರು ವೈದ್ಯರು, ಫಾರ್ಮಾಸಿಸ್ಟ್‌ಗಳು ಅಥವಾ ಸಂಶೋಧಕರು ಆಗಿರಬಹುದು. ನೀವು ಮಾಡುತ್ತಿರುವ ಕೆಲಸದಲ್ಲಿ ನಿಮ್ಮ ಸಾಮರ್ಥ್ಯದ ಪಾತ್ರ ಬಹಳ ಮುಖ್ಯವಾಗಿರುತ್ತದೆ.

ಸ್ವಾತಂತ್ರ್ಯಾನಂತರದಲ್ಲಿ ಭಾರತವು ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಸರ್ಕಾರವು ಕೂಡ ಜನರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಇದರಿಂದ ಮನುಷ್ಯನ ಸರಾಸರಿ ಜೀವಿತಾವಧಿಯು 69 ವರ್ಷಗಳಿಗೆ ಏರಿಕೆ ಕಂಡಿದೆ. ಸುರಕ್ಷಿತವಲ್ಲದ ತಾಯ್ತನ, ಬಾಲಗ್ರಹ, ಸಾಂಕ್ರಾಮಿಕ ಮತ್ತು ಪೌಷ್ಠಿಕಾಂಶದ ಕೊರತೆಯ ಕಾಯಿಲೆಗಳಿಂದ ಹೆಚ್ಚಿದ್ದ ರೋಗದ ಹೊರೆ 1990 ರಿಂದ 2006ರ ಅವಧಿಯಲ್ಲಿ ಶೇ. 61 ರಿಂದ 33ಕ್ಕೆ ಇಳಿದಿದೆ.

ದೇಶದಲ್ಲಿನ ಆರೋಗ್ಯ ಸೇವೆ, ಅಭಿಯಾನಗಳು, ನೈರ್ಮಲ್ಯ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಹೆಚ್ಚಳದಿಂದಾಗಿ ಶಿಶು ಮರಣ ಮತ್ತು ಬಾಣಂತಿ ಮರಣ ಪ್ರಮಾಣಗಳಲ್ಲಿ ಇಳಿಕೆ ಕಂಡು ಗಮನಾರ್ಹ ಸುಧಾರಣೆಗಳಾಗಿವೆ. ಸಾಕ್ಷರತೆ ಮತ್ತು ರೋಗ ನಿರೋಧಕ ಶಕ್ತಿಯ ಹೆಚ್ಚಳದಿಂದಾಗಿ ಇದು ಸಾಧ್ಯ ವಾಗಿದೆ. ಭಾರತದ ಆರೋಗ್ಯ ಕ್ಷೇತ್ರವು ಹಲವಾರು ಸ್ಪರ್ಧಾತ್ಮಕ ಅನುಕೂಲ ಗಳನ್ನು ಹೊಂದಿದೆ. ನುರಿತ ತಜ್ಞ ವೈದ್ಯರಿಂದ ಹಿಡಿದು ಪ್ರವರ್ಧಮಾನಕ್ಕೆ ಬರುತ್ತಿರುವ ಫಾರ್ಮಾ ಉದ್ಯಮದ ಔಷಧ ತಯಾರಿಕೆಯು ಪರಿಣಾಮಕಾರಿ ಯಾಗಿದೆ ಮತ್ತು ಗುಣಮಟ್ಟದ ವೈದ್ಯಕೀಯ ವಿಧಾನಗಳನ್ನು ಪರಿಚಯಿಸಲಾಗು ತ್ತಿದೆ. ಅಮೆರಿಕ ಮತ್ತು ಪಶ್ಚಿಮ ಯುರೋಪ್‌ಗೆ ಹೋಲಿಸಿದರೆ ಭಾರತದಲ್ಲಿ ಶಸ್ತ್ರಚಿಕಿತ್ಸೆಯ ವೆಚ್ಚ ಕಡಿಮೆ. ಹೀಗಾಗಿ ಭಾರತವು ಕೂಡ ಚಿಕಿತ್ಸೆಗೆ ಒಂದು ಆಯ್ಕೆಯಾಗಿದೆ. ಈ ಎಲ್ಲಾ ಪ್ರಗತಿಯ ಹೊರತಾಗಿಯೂ ನಮ್ಮ ಮುಂದೆ ಇನ್ನೂ ದೀರ್ಘ ಮತ್ತು ಕಠಿಣವಾದ ಹಾದಿ ಇದೆ.

ಅಸಮರ್ಪಕ ಸರ್ಕಾರಿ ಅನುದಾನ, ವೈದ್ಯರು ಮತ್ತು ರೋಗಿಗಳ ಕಡಿಮೆ ಅನುಪಾತ, ಇರುವ ಹಣಕ್ಕಿಂತ ಹೆಚ್ಚು ವೆಚ್ಚ, ಗ್ರಾಮೀಣ ಪ್ರದೇಶಗಳಲ್ಲಿನ

ಮೂಲಭೂತ ಸೌಕರ್ಯಗಳ ಕೊರತೆ, ಆರೋಗ್ಯ ವಿಮೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು, ಅಸಮರ್ಪಕ ಕಾರ್ಯವಿಧಾನಗಳು ಆರೋಗ್ಯ ಕ್ಷೇತ್ರದ ಡೋಲಾಯಮಾನ ಸ್ಥಿತಿಗೆ ಮುಖ್ಯ ಕಾರಣಗಳಾಗಿವೆ.

ವಿವಿಧ ಕ್ಷೇತ್ರಗಳಲ್ಲಿ ದೇಶವು ಹೊಂದಿರುವ ಬೆಳವಣಿಗೆ ಮತ್ತು ಆಧುನಿಕ ಔಷಧ ಕ್ಷೇತ್ರದ ಪ್ರಗತಿಯ ಹೊರತಾಗಿಯೂ, ವೈದ್ಯರ ಸಂಖ್ಯೆ, ವಿಶೇಷವಾಗಿ ತಜ್ಞವೈದ್ಯರ ಸಂಖ್ಯೆಯಲ್ಲಿ, ನಾವು ಇನ್ನೂ ದೊಡ್ಡ ಕೊರತೆಯನ್ನು ಎದುರಿಸು ತ್ತಿದ್ದೇವೆ. 6 ಲಕ್ಷ ವೈದ್ಯರು ಮತ್ತು 20 ಲಕ್ಷ ದಾದಿಯರ ಕೊರತೆಯಿದೆ ಎಂದು ಅಂದಾಜಿಸಲಾಗಿದೆ. 2018ರ ರಾಷ್ಟ್ರೀಯ ಆರೋಗ್ಯ ವರದಿಯ ಪ್ರಕಾರ 11,082 ಜನರಿಗೆ ಕೇವಲ ಒಬ್ಬ ಅಲೋಪತಿ ಸರ್ಕಾರಿ ವೈದ್ಯರಿದ್ದಾರೆ ಎಂದು ಹೇಳಲಾಗಿದೆ. ಡಬ್ಲ್ಯುಎಚ್‌ಒ ಮಾನದಂಡದ ಪ್ರಕಾರ 1:10 ಅನುಪಾತಕ್ಕಿಂತ ಇದು ಕಡಿಮೆಯಾಗಿದೆ. ದೇಶದಲ್ಲಿನ 500ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳಲ್ಲಿ 71,000 ಎಂ.ಬಿ.ಬಿ.ಎಸ್. ಸೀಟುಗಳಿವೆ. ಆದರೆ ಸ್ನಾತಕೋತ್ತರ ಸೀಟುಗಳ ಸಂಖ್ಯೆ ಕೇವಲ 32,000 ಮಾತ್ರ. ಹೊಸದಾಗಿ ರಚಿಸಲಾದ ರಾಷ್ಟ್ರೀಯ ವೈದ್ಯಕೀಯ ಆಯೋಗವು ಸರಿಯಾದ ದಿಕ್ಕಿನಲ್ಲಿ ಹೆಜ್ಜೆಯಿಟ್ಟು ದೇಶದ ಎಲ್ಲಾ ಭಾಗಗಳಲ್ಲಿ ಕೈಗೆಟುಕುವ, ಸಮರ್ಪಕ ಮತ್ತು ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆ ಹಾಗೂ ವೈದ್ಯಕೀಯ ಶಿಕ್ಷಣವನ್ನು ಒದಗಿಸಬಲ್ಲದು.

ಭಾರತವು ಸಾಂಕ್ರಾಮಿಕ ಕಾಯಿಲೆಗಳಿಗಿಂತ ಜೀವನಶೈಲಿಯಿಂದ ಉಂಟಾದ ಸಾಂಕ್ರಾಮಿಕವಲ್ಲದ ಕಾಯಿಲೆಗಳಿಂದ ಹೆಚ್ಚು ತೊಂದರೆಗೊಳಗಾಗು ತ್ತಿದೆ. ಡಬ್ಲ್ಯುಎಚ್‌ಓ ವರದಿ ಪ್ರಕಾರ ದೇಶದಲ್ಲಿ ಶೇ. 61ರಷ್ಟು ಸಾವುಗಳು ಸಾಂಕ್ರಾಮಿಕವಲ್ಲದ ಕಾಯಿಲೆಗಳಿಂದ ಸಂಭವಿಸಿವೆ. 1990ರಿಂದ 2016 ರವರೆಗೆ ಹೃದಯಸಂಬಂಧಿ ಕಾಯಿಲೆಯು ಶೇ. 34.3ರಷ್ಟು ಹೆಚ್ಚಿದೆ. ಇದೇ ಅವಧಿಯಲ್ಲಿ ಮಧುಮೇಹಿಗಳ ಪ್ರಮಾಣವು ಶೇ. 29.7ರಷ್ಟು ಹೆಚ್ಚಾಗಿದೆ. ಇದು ಜನರಿಂದಲೇ ಸ್ವಯಂ ಪಡೆದ ಅಂಕಿ–ಅಂಶಗಳಿಂದ ಪ್ರಮಾಣೀಕೃತ ವಾಗಿದೆ. ಅಭಿವೃದ್ಧಿ ಹೊಂದಿದ ಅನೇಕ ರಾಷ್ಟ್ರಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳು 55 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರಲ್ಲಿ ಕಂಡುಬರುತ್ತವೆ ಎಂಬುದು ಲ್ಯಾನ್ಸೆಟ್ ಅಧ್ಯಯನದ ವರದಿಯಾಗಿದೆ. ಒಂದು ದಶಕದ ಹಿಂದೆ ಭಾರತದಲ್ಲಿ ಇದು 45ನೇ ವಯಸ್ಸಿಗೇ ಕಂಡುಬರುತ್ತಿತ್ತು. ಆನುವಂಶಿಯತೆ, ಬದಲಾಗುತ್ತಿರುವ ಜೀವನಶೈಲಿ, ಮಾಲಿನ್ಯ, ಅನಾರೋಗ್ಯಕರ ಆಹಾರಸೇವನೆಯು ಸಾಂಕ್ರಾಮಿಕವಲ್ಲದ ರೋಗಗಳ ಹೆಚ್ಚಳಕ್ಕೆ ಕಾರಣವಾಗಿವೆ. ಇವುಗಳನ್ನು ತಡೆಯಲು ನಾವು ಆರೋಗ್ಯಕರ ಜೀವನಶೈಲಿ ಮತ್ತು ಉತ್ತಮ

ಆಹಾರಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ರೋಗಗಳಿಗೆ ಸಂಬಂಧಪಟ್ಟ ಚಿಕಿತ್ಸಾಲಯಗಳನ್ನು ಹೆಚ್ಚು ಸ್ಥಾಪಿಸುವ ಅಗತ್ಯವಿದೆ. ಇದರಲ್ಲಿ ಖಾಸಗಿ ವಲಯವು ಪ್ರಮುಖ ಪಾತ್ರ ವಹಿಸಬೇಕು ಮತ್ತು ಖಾಸಗಿ ಆಸ್ಪತ್ರೆಯ ವೈದ್ಯರುಗಳು ಕೂಡ ಹತ್ತಿರದ ಶಾಲೆಗಳಿಗೆ ಭೇಟಿ ನೀಡಿ ಆರೋಗ್ಯಕರ ಜೀವನಶೈಲಿಯ ಬಗ್ಗೆ ಜಾಗೃತಿ ಅಭಿಯಾನಗಳನ್ನು ನಡೆಸಬೇಕು.

ಇತ್ತೀಚೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧಿಸಿರುವ ತಾಂತ್ರಿಕ ಪ್ರಗತಿಯಿಂದ ಕ್ರಮೇಣವಾಗಿ ರೋಗಿ ಮತ್ತು ವೈದ್ಯರ ಸಂಬಂಧದಲ್ಲಿ ಮಾನವೀಯ ಸ್ಪರ್ಶ ಕಡಿಮೆಯಾಗುತ್ತಿದೆ. ಸರಿಯಾದ ಸಂವಹನ ಏರ್ಪಡುತ್ತಿಲ್ಲ. ಬಹುಶಃ ವೈದ್ಯರು ಕೆಲಸದ ಒತ್ತಡದಿಂದಾಗಿ ಯಾಂತ್ರಿಕಶೈಲಿಯಲ್ಲೂ ಸಮರ್ಪಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ವೈದ್ಯರು ಮತ್ತು ರೋಗಿಗಳ ನಡುವೆ ಉತ್ತಮ ಸಂವಹನವಿರಬೇಕು. ರೋಗಿಗಳು ವೈದ್ಯರನ್ನು ದೇವರೆಂದು ಪರಿಗಣಿಸುತ್ತಾರೆ. ಹೀಗಾಗಿ ವೈದ್ಯರು ಸಹಾನುಭೂತಿ ಮತ್ತು ಮಾನವಿಯತೆಯಿಂದ ಚಿಕಿತ್ಸೆ ನೀಡಬೇಕು ಎಂಬುದನ್ನು ನೆನಪಿನಲ್ಲಿಡಬೇಕು. ನೈತಿಕತೆಯ ಉನ್ನತ ಮಾನದಂಡಗಳನ್ನು ಎತ್ತಿಹಿಡಿಯುವುದು ಬಹಳ ಮುಖ್ಯವಾಗುತ್ತದೆ. ಸಮಾಜವು ವೈದ್ಯರನ್ನು ದೇವರೆಂದು ಪರಿಗಣಿಸುತ್ತದೆ. ಏಕೆಂದರೆ ಅವರು ಜೀವವನ್ನು ಉಳಿಸುತ್ತಾರೆ. ಆದರೆ ಇತ್ತೀಚೆಗೆ ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿ ಶೋಷಣೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಉದಾಹರಣೆಗೆ ಅಹಮದಾಬಾದ್‌ನ ಐಐಎಂ ವರದಿ ಪ್ರಕಾರ ಕೆಲವು ಖಾಸಗಿ ಆಸ್ಪತ್ರೆಗಳ ವೈದ್ಯರು ಅವಶ್ಯಕತೆ ಇಲ್ಲದಿದ್ದರೂ ಹಣ ಮಾಡುವ ಉದ್ದೇಶದಿಂದ ಸಿಜೇರಿಯನ್‌ಗೆ ಶಿಫಾರಸ್ಸು ಮಾಡುತ್ತಾರೆ. ದುಬಾರಿ ಔಷಧಿಗಳನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತಾರೆ. ಅನಗತ್ಯ ವೈದ್ಯಕೀಯ ಪರೀಕ್ಷೆಗಳಿಗೆ ಒಳಪಡಿಸುತ್ತಾರೆ ಎಂದು ತಿಳಿದುಬಂದಿದೆ. ಇದು ಅನೈತಿಕವಾದುದು. ಆತ್ಮಸಾಕ್ಷಿ ಹೊಂದಿರುವ ವೈದ್ಯರಿಂದ ನಾವು ಇದನ್ನು ಬಯಸುವುದಿಲ್ಲ.

ಇಂತಹ ಅಮಾನವೀಯ ಘಟನೆಗಳನ್ನು ಕಂಡಲ್ಲೆಲ್ಲಾ ಅದರ ವಿರುದ್ಧ ಧ್ವನಿ ಎತ್ತಬೇಕು ಮತ್ತು ಪ್ರತಿಭಟಿಸಬೇಕು. ನಿಮ್ಮ ಹೃದಯವು ಯಾವಾಗಲೂ ಶೋಷಿತರ, ನರಳುತ್ತಿರುವವರ ಪರವಾಗಿ ಅನುಭೂತಿಯಿಂದ ತುಡಿಯುತ್ತಿರಬೇಕು. ವೈದ್ಯಕೀಯ ಶಿಕ್ಷಣದ ಗಮನವು ರೋಗವನ್ನು ತಡೆಗಟ್ಟುವ ಅಂಶಗಳಿಗಿಂತ ರೋಗವನ್ನು ಉಪಚರಿಸುವ ಅಂಶಗಳ ಮೇಲೆ ಕೇಂದ್ರಿತವಾಗಿದೆ. ಇಂದಿನ ದಿನಮಾನದಲ್ಲಿ 'ಗುಣಪಡಿಸುವುದಕ್ಕಿಂತ ತಡೆಗಟ್ಟುವಿಕೆ ಉತ್ತಮವಾಗಿದೆ' ಎಂಬ ಹಳೆಯ ಮಾತು ಬಹಳ ನಿಜ ಮತ್ತು ಅವಶ್ಯಕ.

ಪ್ರಧಾನಮಂತ್ರಿಗಳು 'ಆಯುಷ್ಮಾನ್ ಭಾರತ್'ಅನ್ನು ಸಾಮಾನ್ಯ ಜನರಿಗೆ ಸುಲಭವಾಗಿ ಮತ್ತು ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದಲೇ ಪ್ರಾರಂಭಿಸಿದ್ದಾರೆ. ಇದು ವಿಶ್ವದ ಅತೀ ದೊಡ್ಡ ಸರ್ಕಾರಿ ಅನುದಾನಿತ ಆರೋಗ್ಯ ಯೋಜನೆಯಾಗಿದೆ. ಚಿಕಿತ್ಸೆಯಿಂದ ಹೆಚ್ಚಿನ ವೆಚ್ಚ ಉಂಟಾಗಿ ಸಾಲದ ಚಕ್ರಕ್ಕೆ ಜನ ಸಿಲುಕುವುದನ್ನು ಆಯುಷ್ಮಾನ್ ಭಾರತ್ ತಡೆಗಟ್ಟುತ್ತದೆ. ನಿಮಗೆಲ್ಲ ತಿಳಿದಿರುವಂತೆ ಭಾರತದ ಜನಸಂಖ್ಯೆಯ ಶೇ. 65ರಷ್ಟು ಜನ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಇದರ ಅನುಕೂಲವನ್ನು ನಾವು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಯುವಜನತೆ ರಾಷ್ಟ್ರ ನಿರ್ಮಾಣ ಮಾಡಲು ಸಮರ್ಪಕ ತರಬೇತಿ ಅಗತ್ಯ. ಜೊತೆಗೆ ಆರೋಗ್ಯಕರ ಮತ್ತು ಸದೃಢರಾಗಿದ್ದಾಗ ಮಾತ್ರ ಅವರು ದೇಶಕ್ಕೆ ಕೊಡುಗೆ ನೀಡಬಲ್ಲರು. ಇದರಲ್ಲಿ ಆರೋಗ್ಯ ವೃತ್ತಿಪರರ ಪಾತ್ರ ಬಹಳ ಮಹತ್ವದ್ದು. ಅನಾರೋಗ್ಯಕರ ಜನಸಂಖ್ಯೆ ಹೊಂದಿರುವ ರಾಷ್ಟ್ರವು ಎಂದಿಗೂ ಪ್ರಗತಿ ಹೊಂದಲು ಸಾಧ್ಯವಿಲ್ಲ.

ನಿಯಮಿತ ದೈಹಿಕ ಚಟುವಟಿಕೆಯಲ್ಲಿ ತೊಡಗುವಂತೆ, ಯೋಗವನ್ನು ಕಲಿತು ಅನುಷ್ಠಾನಕ್ಕೆ ತರುವಂತೆ ಯುವಜನತೆಯನ್ನು ಪ್ರೇರೇಪಿಸಬೇಕು. ಇದು ಉತ್ತಮ ಫಲಿತಾಂಶವನ್ನು ನೀಡುತ್ತದೆ. ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಪ್ರಾರಂಭಿಸಿರುವ 'ಫಿಟ್ ಇಂಡಿಯಾ' ಅಭಿಯಾನದ ಬಗ್ಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಈ ಅಭಿಯಾನವನ್ನು ಆರೋಗ್ಯಕರ ಮತ್ತು ಸಂತಸದಿಂದ ಕೂಡಿರುವ ಭಾರತವನ್ನು ನಿರ್ಮಿಸುವ ಆಂದೋಲನ ವನ್ನಾಗಿ ಮಾಡಬೇಕೆಂದು ನಾನು ನಿಮ್ಮೆಲ್ಲರಿಗೂ ಮನವಿ ಮಾಡುತ್ತೇನೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳುವಂತೆ 'ಆರೋಗ್ಯವೇ ನಿಜವಾದ ಸಂಪತ್ತೇ ಹೊರತು ಚಿನ್ನ ಮತ್ತು ಬೆಳ್ಳಿಯ ತುಣುಕುಗಳಲ್ಲ'. ನಾವು ನಮ್ಮ ಹಳೆಯ ಸಂಪ್ರದಾಯಕ್ಕೆ ಮರಳಬೇಕು. ಆರೋಗ್ಯಕರ ಜೀವನವನ್ನು ನಡೆಸುವಲ್ಲಿ ಆಹಾರವು ವಹಿಸುವ ಪಾತ್ರದ ಬಗ್ಗೆ ಅರಿವು ಮೂಡಿಸಬೇಕು. ನಮ್ಮ ಪೂರ್ವಜರು ಸೂಚಿಸಿದ ಆಹಾರಕ್ರಮಗಳನ್ನು ಪಾಲಿಸಬೇಕು. ಸಮಯ, ಭೌಗೋಳಿಕ ಪ್ರದೇಶ, ಹವಾಮಾನಕ್ಕೆ ತಕ್ಕಂತೆ ಆಹಾರವನ್ನು ಸೇವಿಸಬೇಕು. ಯಾಂತ್ರಿಕ ಜೀವನಶೈಲಿಯಿಂದ ಬಿಡುವು ಪಡೆದು ಪ್ರಕೃತಿಯ ಮಡಿಲಲ್ಲಿ ಸ್ವಲ್ಪ ಸಮಯ ಕಳೆಯಿರಿ. ಅದು ನಿಮಗೆ ಚೈತನ್ಯವನ್ನು ತುಂಬುತ್ತದೆ, ಪುನರ್ಯೌವನಗೊಳಿಸುತ್ತದೆ. ದೇಶಾದ್ಯಂತ ನಾವು ಹಸಿರು ಬೆಳೆಸಬೇಕು. ಪ್ರಕೃತಿಯೊಂದಿಗೆ ಸ್ನೇಹ ಬೆಳೆಸಿಕೊಳ್ಳಬೇಕು. ಅದರೊಂದಿಗೆ ಸ್ನೇಹದಿಂದಿದ್ದರೆ ಅದು ನಮ್ಮ ಪರವಾಗಿರುತ್ತದೆ. ಇಲ್ಲದಿದ್ದರೆ ಹವಾಮಾನ ಬದಲಾವಣೆಯ ಅಡ್ಡ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಪ್ರತಿಯೊಬ್ಬರು ತಮ್ಮ

ಮಕ್ಕಳೊಂದಿಗೆ ಸೂರ್ಯ ಚಂದ್ರರ ಕೆಳಗೆ ಕಾಲ ಕಳೆಯಬೇಕೆ ಹೊರತು ದೂರದರ್ಶನದ ಮುಂದೆ ಅಲ್ಲ. ಪ್ರಕೃತಿಯೊಂದಿಗೂ ಸ್ವಲ್ಪ ಸಮಯವನ್ನು ಕಳೆಯಿರಿ.

ಸಾಂಪ್ರದಾಯಿಕ ಆರೋಗ್ಯಕರ ಜೀವನಶೈಲಿಗೆ ಮರಳಲು ಮಾತ್ರವಲ್ಲದೆ, ನಮ್ಮ ಇತಿಹಾಸವನ್ನು ಮರು ಅನ್ವೇಷಿಸುವ ಸಮಯವು ಇದಾಗಿದೆ. ಭಾರತೀಯ ದೃಷ್ಟಿಕೋನ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುವ ನಮ್ಮದೇ ಆದ ಇತಿಹಾಸದ ಪ್ರಜ್ಞೆ ನಮಗಿರಬೇಕು. ವಿಶ್ವದ ಶಕ್ತಿಯಾಗಬೇಕು ಎಂದು ಆಶಿಸುವ ರಾಷ್ಟ್ರಕ್ಕೆ ಇತಿಹಾಸ ಪ್ರಜ್ಞೆ, ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಹೆಮ್ಮೆ ಇರುವುದು ಬಹಳ ಮುಖ್ಯ.

ಪರಮಪೂಜ್ಯ ಸ್ವಾಮೀಜಿಯವರ ಸಮರ್ಥ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಸಂಸ್ಥೆ ಭಾರತೀಯ ಮೌಲ್ಯಗಳನ್ನು ಉತ್ತೇಜಿಸುತ್ತಿದೆ. ಸಂಸ್ಥೆಯು ಉತ್ಸಾಹದಿಂದ ಸಮಾಜ ಸೇವೆ ಸಲ್ಲಿಸುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ.

'ಸರ್ವೇಜನಃ ಸುಖಿನೋಃಭವಂತು, ಸರ್ವೇ ಭದ್ರಾಣಿ ಪಶ್ಯಂತು'

ಶ್ರೀ ಸುತ್ತೂರು ಮಠವು ಸಾವಿರಾರು ವರ್ಷಗಳಿಂದಲೂ ಮಾನವೀಯತೆಯ ಬೆಳಕಾಗಿ ಮಾರ್ಗದರ್ಶನ ಮಾಡುತ್ತಿದೆ. ಮಾನವೀಯತೆ ಮತ್ತು ಸಹಾನುಭೂತಿಯೊಂದಿಗೆ ಸಮಾಜವನ್ನು ಪರಿವರ್ತಿಸುವ ದಾರಿಯನ್ನು ನಮಗೆ ತೋರಿಸುತ್ತಿದೆ. ನಮ್ಮ ದೇಶದ ನಾಗರಿಕತೆಯ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹೆಚ್ಚುತ್ತಿದೆ. ನಮ್ಮ ಸಂಸ್ಕೃತಿ, ಪರಂಪರೆ, ನಾಗರಿಕತೆಯ ಬಗ್ಗೆ ತಿಳಿಸಿಕೊಡಬೇಕಾಗಿದೆ. ಸ್ವಾತಂತ್ರ್ಯ ಬಂದು 72 ವರ್ಷಗಳಾದರೂ ಇನ್ನೂ ಕೆಲವೊಂದಿಷ್ಟು ಸಮಸ್ಯೆಗಳು ನಮ್ಮನ್ನು ಬಾಧಿಸುತ್ತಿವೆ. ಅನಕ್ಷರತೆ, ಸಾಮಾಜಿಕ, ಲಿಂಗ ತಾರತಮ್ಯಗಳು ಅಲ್ಲಲ್ಲಿ ವರದಿಯಾಗುತ್ತಲೇ ಇರುತ್ತವೆ. ಇದನ್ನು ತಡೆಯಲು ಪ್ರಧಾನಮಂತ್ರಿಗಳು ಬೇಟಿ ಪಡಾವೋ ಬೇಟಿ ಬಚಾವೋ ಅಭಿಯಾನವನ್ನು ಆರಂಭಿಸಿದ್ದು. ಇವತ್ತು ಇಲ್ಲಿ ಚಿನ್ನದ ಪದಕ ಪಡೆಯುತ್ತಿರುವ ಹೆಚ್ಚಿನವರಲ್ಲಿ ಹೆಣ್ಣುಮಕ್ಕಳು ಇರುವುದು ಸಂತೋಷದ ಸಂಗತಿ. ನಾವು ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಬೆಂಬಲವನ್ನು ನೀಡಬೇಕು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಎನ್‌ಐಆರ್‌ಎಫ್ ರ‍್ಯಾಂಕಿಂಗ್‌ನ ಪ್ರಕಾರ ಭಾರತದ ಅತ್ಯುನ್ನತ 50 ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾನ ಪಡೆದಿರುವುದನ್ನು ತಿಳಿದು ನನಗೆ ಸಂತೋಷವಾಗಿದೆ.

ಈ ದಿನ ಪಾಲಕರಿಗೂ ಬಹಳ ವಿಶೇಷವಾದದ್ದು. ತಮ್ಮ ಮಕ್ಕಳು ಒಂದು ಹಂತವನ್ನು ಯಶಸ್ವಿಯಾಗಿ ಪೂರೈಸಿರುವುದನ್ನು ನೋಡುತ್ತಿದ್ದಾರೆ. ಮುಂದೆ ಇನ್ನೂ ಅವರು ಜೀವನದಲ್ಲಿ ಹೆಚ್ಚು ಸ್ವತಂತ್ರಗೊಳ್ಳುತ್ತಾ ಹೋಗುತ್ತಾರೆ. ಆತ್ಮೀಯ ವಿದ್ಯಾರ್ಥಿಗಳೇ, ನಿಮ್ಮ ಪೋಷಕರು ನಿಮಗೆ ಶಿಕ್ಷಣ ಕೊಡಿಸಲು ಸಾಕಷ್ಟು ತ್ಯಾಗ ಮಾಡಿದ್ದಾರೆ ಎಂಬುದನ್ನು ಯಾವಾಗಲೂ ನೆನಪಿಡಿ. ನೀವು ಉಜ್ವಲ ಮತ್ತು ಸಮೃದ್ಧ ಭವಿಷ್ಯವನ್ನು ಹೊಂದಲು ಅವರು ಈ ತ್ಯಾಗ ಮಾಡಿದ್ದಾರೆ. ಹೀಗಾಗಿ ನಿಮ್ಮ ಪಾಲಕರು, ಶಿಕ್ಷಕರು ಹೆಮ್ಮೆ ಪಡುವಂತಹ ಕೆಲಸಗಳನ್ನು ಮಾಡಿ. ಧರ್ಮದ ಆಧಾರದ ಮೇಲೆ ಜಾತಿ ತಾರತಮ್ಯ ಮಾಡುವುದು, ವರದಕ್ಷಿಣೆ ಕಿರುಕುಳ, ಅಸ್ಪೃಶ್ಯತೆಯ ಹರಡುವಿಕೆಯನ್ನು ತಡೆಗಟ್ಟಬೇಕು. ಯಾವುದೇ ಅನ್ಯಾಯದ ವಿರುದ್ಧ ಅಥವಾ ವಿಷಯವನ್ನು ಉತ್ತೇಜಿಸಬೇಕಾದರೆ ಮಾತೃಭಾಷೆಯಲ್ಲೇ ವಿಚಾರವನ್ನು ತಲುಪಿಸಬೇಕು. ಇಂಗ್ಲೀಷ್ ಕಲಿಯುವುದರಿಂದ ಸಮಸ್ಯೆಯಿಲ್ಲ. ಆದರೆ ಇಂಗ್ಲಿಷ್ ಮನಸ್ಥಿತಿ ಬೇಡ. ಎಲ್ಲ ಭಾಷೆಗಳೂ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದು ಕೊಂಡಿವೆ. ಆದರೆ ಮಕ್ಕಳು ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯಬೇಕು. ಮಾತೃಭಾಷೆಯಲ್ಲಿ ಕಲಿಯಲು ಮತ್ತು ಮಾತನಾಡಲು ಹಿಂಜರಿಕೆಯಿರಬಾರದು. ನಮ್ಮ ಭಾಷೆಯಲ್ಲೇ ಮಾತನಾಡುವುದರೊಂದಿಗೆ ಇತರೆ ಭಾಷೆಗಳನ್ನು ಗೌರವಿಸುವುದು ನಮ್ಮ ಧ್ಯೇಯ ಆಗಬೇಕು. ಏಕೆಂದರೆ ಭಾಷೆ ಮತ್ತು ಭಾವನೆ ಒಂದಕ್ಕೊಂದು ನಂಟು ಹೊಂದಿವೆ. ಮಾತೃಭಾಷೆಯ ಮೂಲಕ ನಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ಹಂಚಿಕೊಳ್ಳಲು ಸಾಧ್ಯವಿದೆ.

ಜಾಗತಿಕ ಆರ್ಥಿಕ ಹಿಂಜರಿತದ ಹೊರತಾಗಿಯೂ ಭಾರತ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ಭಾರತದ ಅಭಿವೃದ್ಧಿಯ ಅನುಪಾತ ಶೇ. 6.1ರಷ್ಟಿದೆ. ಆದರೆ ಅಮೆರಿಕ 2.3ರಷ್ಟಿದ್ದರೆ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ 1.7ರಷ್ಟಿದೆ. ಇದೇ ಹಾದಿಯಲ್ಲಿ ಸಾಗಿದರೆ ಭಾರತ ವಿಶ್ವದ ಆರ್ಥಿಕತೆಯಲ್ಲಿ 3ನೇ ಸ್ಥಾನಕ್ಕೆ ಜಿಗಿಯುವುದರಲ್ಲಿ ಯಾವುದೇ ಸಂಶಯವಿಲ್ಲ.

ಅಂದು ಸರ್ದಾರ್ ವಲ್ಲಭಭಾಯಿ ಪಟೇಲ್‌ರವರು 560 ಪ್ರಾಂತ್ಯಗಳನ್ನು ಒಗ್ಗೂಡಿಸಲು ಹುಟ್ಟುಹಾಕಿದ್ದ ಆಂದೋಲನದಿಂದ ಏಕೀಕೃತಗೊಂಡ ಭಾರತದಲ್ಲಿ ತಾರತಮ್ಯ ಮತ್ತು ಒಡಕು ಮೂಡಿಸಲು ಪ್ರಯತ್ನಿಸಬಾರದು. ಭಾರತದ ಸಂಸತ್ತಿನಲ್ಲಿ ಇತ್ತೀಚೆಗೆ ಕೈಗೊಂಡ ಒಂದು ನಿರ್ಧಾರ ಇದನ್ನು ನಿಜವಾಗಲೂ ಸಾರ್ಥಕವಾಗಿಸಿದೆ. 370ನೇ ವಿಧಿ ರದ್ದುಗೊಂಡಿರುವುದರಿಂದ ಬಹುತೇಕರು ಸಂತೋಷಗೊಂಡಿದ್ದಾರೆ. ಆದರೆ ಕೆಲವರಷ್ಟೇ ಇದು ಸಂವಿಧಾನದ ಉಲ್ಲಂಘನೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದರಿಂದ

ಜನರಿಗೆ ತಪ್ಪು ಸಂದೇಶದ ರವಾನೆಯಾಗುತ್ತಿದೆ. ಈ ವಿಧೇಯಕವನ್ನು ರಾಜ್ಯಸಭೆ ಮತ್ತು ಲೋಕಸಭೆ ಎರಡರಲ್ಲೂ ಬಹುಮತದೊಂದಿಗೆ ರದ್ದುಪಡಿಸಲಾಗಿದೆ. ಇದು ದೇಶದ ಆಂತರಿಕ ವಿಷಯವಾಗಿದ್ದು, ಒಂದು ರಾಷ್ಟ್ರ ಎಂಬ ಧ್ಯೇಯವಾಕ್ಯಕ್ಕೆ ಇದೀಗ ಅರ್ಥ ಬಂದಿದೆ. ನೆರೆಯ ರಾಷ್ಟ್ರಗಳು ಭಾರತದ ಮೇಲೆ ಸಾಕಷ್ಟು ಆಕ್ರಮಣ ಮಾಡಿವೆ, ಟೀಕಿಸಿವೆ. ದೇಶವೊಂದು ಭಯೋತ್ಪಾದಕರನ್ನು ಬಳಸಿಕೊಂಡು ಭಾರತಕ್ಕೆ ತೊಂದರೆ ಕೊಡಲು ಯತ್ನಿಸುತ್ತಿದೆ. ಆದರೂ ಭಾರತ ಎಂದೂ ನೆರೆಯ ರಾಷ್ಟ್ರಗಳ ಮೇಲೆ ತಾನಾಗಿ ಆಕ್ರಮಣ ಮಾಡಿಲ್ಲ. ಬದಲಾಗಿ ಅವರನ್ನು ಸಹೋದರನಂತೆ ಕಾಣುತ್ತಿದೆ. ನಮ್ಮ ದೇಶದ ವ್ಯವಹಾರದಲ್ಲಿ ನೆರೆಹೊರೆ ರಾಷ್ಟ್ರಗಳು ಹಸ್ತಕ್ಷೇಪ ಮಾಡಬಾರದು. ಬದಲಿಗೆ ಅಭಿವೃದ್ಧಿಗಾಗಿ ಒಟ್ಟಾಗಿ ಕೆಲಸ ಮಾಡಿ ಬಡತನವನ್ನು ನಿರ್ಮೂಲನೆ ಮಾಡಬೇಕು. ಜಗತ್ತಿನ ರಾಷ್ಟ್ರಗಳು ತಂತ್ರಜ್ಞಾನದೊಂದಿಗೆ ಸಾಗುತ್ತಿವೆ. ಭವಿಷ್ಯದಲ್ಲಿ ಡಿಜಿಟಲೀಕರಣದೊಂದಿಗೆ ನಾವು ಸಾಗಬೇಕು. ಡಿಜಿಟಲೀಕರಣವು ಭ್ರಷ್ಟಾಚಾರದ ಹಾವಳಿಯನ್ನು ಕಡಿಮೆ ಮಾಡುತ್ತದೆ. ಜನರು ನೇರವಾಗಿ ಸೇವೆಗಳನ್ನು ಪಡೆಯಬೇಕು. ಆರೋಗ್ಯ ಸೇವೆಯಲ್ಲಿ ಟೆಡ್ಡಿ ಮೆಡಿಸನ್ ಕಡೆಗೆ ಹೆಚ್ಚಿನ ಗಮನ ಹರಿಸಬೇಕು.

ಇಂದು ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿದ್ದು ಪರಮಪೂಜ್ಯರ ದಿವ್ಯ ಸಾನ್ನಿಧ್ಯ ಇದನ್ನು ಮತ್ತಷ್ಟು ಪವಿತ್ರಗೊಳಿಸಿದೆ. ಪದವೀಧರರಾದ ಎಲ್ಲ ವಿದ್ಯಾರ್ಥಿಗಳಿಗೂ ನನ್ನ ಶುಭ ಹಾರೈಕೆಗಳು ಮತ್ತು ಅಭಿನಂದನೆಗಳು.

□

ಕರ್ಮವೆಂಬ ಅಂಕದೊಡನೆ ತೊಡರಿದೆ ;
ಬಿನ್ನಪ ಅವಧಾರು !
ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ,
ಕೆಡಹುವೆನಂಕವ ;
ಕರೆದಡೋ ಎನಿಸದಡೆ ನಿಮ್ಮಾಳಲ್ಲ !
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಕೂಡಲಸಂಗಮದೇವಾ.

—ಬಸವಣ್ಣ

# ಶಿಕ್ಷಣ ಜೀವನ ನಡೆಸಲು ಸಿದ್ಧತೆಯಲ್ಲ, ಶಿಕ್ಷಣವೇ ಜೀವನ

**ಡಾ. ರಾಜ್‌ಕುಮಾರ್ ಖತ್ರಿ**

**ಜೆ**ಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಘಟಿಕೋತ್ಸವ ಭಾಷಣ ಮಾಡಲು ನಿಮ್ಮ ಜೊತೆ ಇರುವುದಕ್ಕೆ ನನಗೆ ಬಹಳ ಸಂತೋಷವಾಗಿದೆ.

ಮಹಾನ್ ದೂರದೃಷ್ಟಿವುಳ್ಳ ಪರಮಪೂಜ್ಯ ಸ್ವಾಮೀಜಿಯವರ ಸಮರ್ಥ ಮತ್ತು ಕ್ರಿಯಾತ್ಮಕ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಸಂಸ್ಥೆಯು ಅನ್ನ, ಅಕ್ಷರ, ವಸತಿ ಎಂಬ ತ್ರಿವಿಧ ದಾಸೋಹದ ಮೂಲಕ ಮಾನವೀಯ ಸೇವೆ ಸಲ್ಲಿಸುತ್ತಿರುವ ಪ್ರಸಿದ್ಧ ಸಂಸ್ಥೆಗಳಲ್ಲಿ ಒಂದಾಗಿದೆ. ಸಮಾಜದಲ್ಲಿನ ದೀನ ದುರ್ಬಲರ ಹಿತಕ್ಕಾಗಿ ತನ್ನ ಶಕ್ತಿಯನ್ನು ಧಾರೆ ಎರೆಯುತ್ತಿದೆ. ಎಲ್ಲಾ ಜಾತಿ, ಜನಾಂಗ, ಧರ್ಮ ಮತ್ತು ಪ್ರಾಂತ್ಯದ ಜನರಿಗೆ ಯಾವುದೇ ಭೇದವಿಲ್ಲದೆ ಸೇವೆ ಸಲ್ಲಿಸುತ್ತಿರುವುದಕ್ಕೆ ಈ ಸಂಸ್ಥೆಯ ಬಗ್ಗೆ ನನಗೆ ಅಪಾರ ಗೌರವವಿದೆ.

**'ಶಿಕ್ಷಣ'** ಎಂಬುದು ಜೀವನ ನಡೆಸಲು ಮಾಡಿಕೊಳ್ಳಬೇಕಾದ ಸಿದ್ಧತೆಯಲ್ಲ. **'ಶಿಕ್ಷಣವೇ ಜೀವನ'** ಎಂದು ತತ್ವಜ್ಞಾನಿ ಮತ್ತು ಶಿಕ್ಷಣತಜ್ಞ ಜಾನ್ ಡೀವಿ ಹೇಳಿರುವುದು ಅಕ್ಷರಶಃ ಸತ್ಯವಾದ ಮಾತಾಗಿದೆ. ವಿಶ್ವವಿದ್ಯಾನಿಲಯದಲ್ಲಿ ನಮ್ಮ ಕಲಿಕೆ ಪ್ರಾರಂಭವೂ ಆಗುವುದಿಲ್ಲ ಮತ್ತು ಕೊನೆಗೊಳ್ಳುವುದೂ ಇಲ್ಲ ಎಂಬುದನ್ನು ಈ ನುಡಿಗಟ್ಟು ನೆನಪಿಸುತ್ತದೆ. ಶಿಕ್ಷಣವು ಈ ಜಗತ್ತಿನಲ್ಲಿ ಬದುಕಲು ಜೀವನಕ್ಕೆ ಒಂದು ಖಾತ್ರಿಯನ್ನು ನೀಡುತ್ತದೆ. ಶಿಕ್ಷಣ ಎಂದರೆ ನಾವು ಜೀವನದುದ್ದಕ್ಕೂ ಕಲಿಯುವ ಒಂದು ಪ್ರಕ್ರಿಯೆ. ಅದು ನಾವು ತಾಯಿಗರ್ಭದಲ್ಲಿದ್ದಾಗಿನಿಂದಲೇ ಆರಂಭಗೊಂಡು ನಮ್ಮ ಕೊನೆಯ

---

2019ರ ಡಿಸೆಂಬರ್ 28 ರಂದು ನಡೆದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಡಾ. ರಾಜ್‌ಕುಮಾರ್ ಖತ್ರಿಯವರು ಮಾಡಿದ ಘಟಿಕೋತ್ಸವ ಭಾಷಣ

ಉಸಿರಿನವರೆಗೂ ನಡೆಯುತ್ತಲೇ ಇರುತ್ತದೆ. ನಮ್ಮ ಪ್ರತಿ ಕ್ಷಣದಲ್ಲೂ ಅದು ಎಷ್ಟು ನಿಕಟವಾಗಿ ಸಂಯೋಜಿಸಲ್ಪಟ್ಟಿದೆಯೆಂದರೆ ಜೀವನಕ್ಕೆ ಬಹುತೇಕ ಸಮಾನಾರ್ಥಕವಾಗಿರುತ್ತದೆ.

ಈ ದಿನ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಉತ್ಸಾಹ ಮತ್ತು ನಿರೀಕ್ಷೆಯಿಂದ ಕೂಡಿರುವ ವಿಶೇಷವಾದ ದಿನ. ಭೂತಕಾಲವು ಭವಿಷ್ಯತ್‌ನ್ನು ಸಂಧಿಸುವ ಕ್ಷಣವಿದು. ಆದರೆ ಭವಿಷ್ಯವು ಹೀಗೇ ಇರುತ್ತದೆ ಎಂದು ನಿರೀಕ್ಷಿಸುವುದು ಕಷ್ಟ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಸಂವಹನ ಮತ್ತು ಜಾಗತೀಕರಣಗೊಂಡ ಆರ್ಥಿಕತೆಯಲ್ಲಿ ಪದವೀಧರರು ಒಂದೇ ವೃತ್ತಿಯನ್ನು ಅಥವಾ ಒಂದೇ ಕಂಪನಿಯನ್ನು ಅವಲಂಬಿಸುವ ಅಗತ್ಯತೆಯಿಲ್ಲ. ನಿಮಗೆ ವಿವಿಧ ಸವಾಲುಗಳನ್ನೊಡ್ಡುವ ವಿಭಿನ್ನವಾದ ಉದ್ಯೋಗಗಳಿವೆ. ನಿಮ್ಮ ಜೀವನವೆಂಬ ಪಯಣದಲ್ಲಿ ಭವಿಷ್ಯವು ನಿಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗಿ ನಿಲ್ಲಿಸುತ್ತದೆ ಎಂಬುದನ್ನು ಊಹಿಸುವುದು ಕಷ್ಟ. ನೀವು ಒಂದು ವಿಷಯದಲ್ಲಿ ಪದವಿ ಪಡೆದಿದ್ದರೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಅನ್ವೇಷಿಸಬಹುದು. ಆಧುನಿಕ ಜೀವನವು ವೇಗವಾಗಿ ಸಾಗುತ್ತಿರುವುದು ಹೊಸ ವಿದ್ಯಮಾನವೇನಲ್ಲ.

ಇಂಜಿನಿಯರಿಂಗ್ ಎಂಬುದು ನೈಸರ್ಗಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಡಿಜಿಟಲೀಕರಣದೊಂದಿಗೆ ನಮ್ಮ ಜಗತ್ತನ್ನು ರೂಪಿಸುವ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದೆ. ಇಂಜಿನಿಯರಿಂಗ್‌ನ ಶೋಧಗಳು ಮತ್ತು ಆವಿಷ್ಕಾರಗಳು ಜೀವನ ನಡೆಸಲು ಮತ್ತು ಕೆಲಸ ನಿರ್ವಹಿಸಲು ಹೊಸ ಮಾರ್ಗಗಳನ್ನು ಸೃಷ್ಟಿಸಿವೆ. ಅವು ನಮ್ಮ ಜೀವನವನ್ನು ರೂಪಿಸಿದಂತೆ ನಮ್ಮ ಜೀವನದ ಗುಣಮಟ್ಟವನ್ನು ಉಳಿಸಿಕೊಳ್ಳುವಲ್ಲಿ ನಿರ್ಣಾಯಕವಾಗಿವೆ. ಮೂಲಭೂತ ಸೌಕರ್ಯಗಳಾದ ವಿದ್ಯುತ್ ಮತ್ತು ನೀರಿನ ಪೂರೈಕೆಯಿಂದ ಹಿಡಿದು ಆಸ್ಪತ್ರೆಯಲ್ಲಿನ ಜೀವರಕ್ಷಕ ಯಂತ್ರಗಳವರೆಗೂ ಇಂಜಿನಿಯರಿಂಗ್‌ನ ಉತ್ಪನ್ನಗಳು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಬಳಕೆಯಾಗುತ್ತಿವೆ. ಇಂಜಿನಿಯರ್‌ರಿಗೆ ಸಮಾಜದ ಮೇಲೆ ಸಕಾರಾತ್ಮಕ ಪ್ರಭಾವ ಬೀರುವ ಜವಾಬ್ದಾರಿಯೂ ಇದೆ ಮತ್ತು ವಿಪುಲ ಅವಕಾಶಗಳೂ ಇವೆ.

ಸಮಾಜದ ಮೇಲೆ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದ ಪ್ರಭಾವ ಕೇವಲ ಏಕಮುಖ ಸಂಬಂಧದ್ದಲ್ಲ. ಅದು ಅಸಂಖ್ಯ ತಾಂತ್ರಿಕ ಸಾಧ್ಯತೆಗಳ ಶ್ರೇಣಿಯನ್ನು ನಿರ್ಮಿಸುತ್ತದೆ ಮತ್ತು ಸಮಾಜ ಅದರಲ್ಲಿ ತನಗೆ ಬೇಕಾದುದನ್ನು ಆಯ್ಕೆಮಾಡಿಕೊಳ್ಳುತ್ತದೆ. ಆದರೆ ಸಮಾಜವು ಅಭಿವೃದ್ಧಿ ಹೊಂದಿದ ತಂತ್ರಜ್ಞಾನವನ್ನು ರೂಪಿಸಿದರೆ ಅದನ್ನು ಒಪ್ಪುವ ಅಥವಾ ತಿರಸ್ಕರಿಸುವ

ಆಯ್ಕೆ ಇಂಜಿನಿಯರ್‌ಗಳ ಮುಂದೆ ಇರುತ್ತದೆ. ಇದರರ್ಥ ಸಮಾಜದಲ್ಲಿ ಇಂಜಿನಿಯರ್‌ಗಳು ಒಂದು ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ಸಮಾಜದ ಮೇಲೆ ಸಕಾರಾತ್ಮಕ ಪ್ರಭಾವ ಬೀರುವಂತಹ ತಂತ್ರಜ್ಞಾನಗಳನ್ನು ರಚಿಸುವುದರ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಕೂಡ ಅವರು ಸಹಾಯ ಮಾಡಬಹುದು.

ಇಂಜಿನಿಯರ್‌ಗಳ ಪ್ರಮುಖ ಜವಾಬ್ದಾರಿ ಎಂದರೆ ತಾವು ಮಾಡುವ ಕೆಲಸದಿಂದ ಯಾವುದೇ ಸಮುದಾಯ ಅಥವಾ ಸಮಾಜದ ಮೇಲೆ ಹಾನಿಯುಂಟಾಗದಂತೆ ನೋಡಿಕೊಳ್ಳುವುದಾಗಿರುತ್ತದೆ. ಉದಾಹರಣೆಗೆ ಹೊಸ ರಸ್ತೆ ಅಥವಾ ರೈಲುಮಾರ್ಗದಂತಹ ವ್ಯವಸ್ಥೆಗಳನ್ನು ಕಲ್ಪಿಸಲು ಹೊರಟಾಗ ಅದು ಹೆಚ್ಚಿನ ಸಂಪರ್ಕ ಮತ್ತು ನಗರಗಳ ಅಭಿವೃದ್ಧಿಗೆ ವರದಾನವಾದರೂ ಅದರಿಂದ ಸ್ಥಳೀಯ ಪರಿಸರ, ಮನೆಗಳು ಮತ್ತು ಜನಜೀವನದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಬಲ್ಲದು. ಈ ನಕಾರಾತ್ಮಕ ಪರಿಣಾಮಗಳು ಸಾಧ್ಯವಾದಷ್ಟು ಕಡಿಮೆಯಾಗುವಂತೆ ಮಾಡುವ ಜವಾಬ್ದಾರಿಯನ್ನು ಸಿವಿಲ್ ಇಂಜಿನಿಯರ್‌ಗಳು ಹೊಂದಿರುತ್ತಾರೆ. ನಿಮ್ಮಲ್ಲಿಯೇ ಕೆಲವರು ನೀವು ಅಭಿವೃದ್ಧಿ ಪಡಿಸಿದ ತಂತ್ರಜ್ಞಾನದಿಂದ ಉಂಟಾಗಬಹುದಾದ ಇಂತಹ ಅಪಾಯಗಳನ್ನು ತಡೆಯಬಹುದಾಗಿದೆ.

ಆದ್ದರಿಂದ ನಿಮ್ಮಂತಹ ಯುವ ಇಂಜಿನಿಯರ್‌ಗಳು ಸಕಾರಾತ್ಮಕ ಕೊಡುಗೆ ನೀಡುವ ಯೋಜನೆಗಳಲ್ಲಿ ತೊಡಗಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಹೊಂದಿದ್ದೀರಿ ಮತ್ತು ಅವು ನಮ್ಮ ಸಮಾಜವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತವೆ. ಕಡಿಮೆ ಇಂಗಾಲದ ಶಕ್ತಿಯನ್ನು ಉತ್ಪಾದನೆ ಮಾಡುವ ದಕ್ಷ ಇಂಧನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ನಿಮ್ಮ ಪಾತ್ರ ಬಹಳ ಮುಖ್ಯವಾದುದು. ಇದು ಹವಾಮಾನದ ದುಷ್ಪರಿಣಾಮಗಳನ್ನು ಸೀಮಿತಗೊಳಿಸಲು ಅಗತ್ಯವಾಗಿರುತ್ತದೆ. ನಮ್ಮ ಮೂಲಸೌಕರ್ಯಗಳಾದ ರಸ್ತೆಗಳು, ರೈಲ್ವೇ, ಇಂಧನ ಮತ್ತು ಸಂವಹನ ವ್ಯವಸ್ಥೆಗಳನ್ನು ಕಲುಷಿತಗೊಳ್ಳುತ್ತಿರುವ ಹವಾಮಾನ ವ್ಯವಸ್ಥೆಗೆ ವಿರುದ್ಧವಾಗಿ ಸ್ಥಿರವಾಗಿರಿಸುವಲ್ಲಿ ನೀವು ನಿರ್ಣಾಯಕ ಪಾತ್ರವನ್ನು ಹೊಂದಿರುತ್ತೀರಿ. ಪ್ರವಾಹದಂತಹ ನೈಸರ್ಗಿಕ ವಿಕೋಪಗಳಿಂದ ನಮ್ಮ ಜೀವನದ ಗುಣಮಟ್ಟವನ್ನು ರಕ್ಷಿಸಲು ಸಹಾಯ ಮಾಡಬಹುದು. ಬಡ ಸಮುದಾಯಗಳಿಗೆ ಕೈಗೆಟುಕುವಂತಹ ಮತ್ತು ಸೂಕ್ತವಾದ ಮೂಲ ಸೌಕರ್ಯಗಳಾದ ಶುದ್ಧ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಮತ್ತು ಸಂಪರ್ಕಸಾಧನಗಳನ್ನು ಅಭಿವೃದ್ಧಿಗೆ ಸಹ ನೀವು ಕೊಡುಗೆಯಾಗಿ ನೀಡಬಹುದು. ಕಡಿಮೆ ಬೆಲೆಯಲ್ಲಿ

ಆರೋಗ್ಯ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಇಂಜಿನಿಯರ್‌ಗಳ ಪಾತ್ರ ಪ್ರಮುಖವಾದುದು.

ಪದವೀಧರರಾದ ನೀವು ಕಲಿಯುವುದನ್ನು ಮುಂದುವರಿಸಬೇಕು ಮತ್ತು ನಿಮ್ಮನ್ನು ಬಲಪಡಿಸಿಕೊಳ್ಳಬೇಕು. ಯಶಸ್ಸು ಒಂದು ಪ್ರಯಾಣ. ಅದು ಗಮ್ಯವಲ್ಲ. ಇಂದು ನೀವು ಪದವಿ ಪಡೆದಿರುವುದು ಒಂದು ಅಂತ್ಯವನ್ನು ಸೂಚಿಸುವುದಿಲ್ಲ. ಇಲ್ಲಿಂದ ಒಂದು ದೀರ್ಘವಾದ ಪ್ರಯಾಣ ಪ್ರಾರಂಭವಾಗಿದೆ. ನೀವು ಇನ್ನು ಮುಂದೆ ಏನು ಮಾಡುತ್ತೀರಿ ಎಂಬುದು ನಿಮ್ಮ ಜೀವನದ ಯಶಸ್ಸನ್ನು ನಿರ್ಧರಿಸುತ್ತದೆ.

ಗಾಂಧೀಜಿ ಹೇಳಿದಂತೆ 'ಶಿಕ್ಷಣ' ಎಂದರೆ ಮಗು ಮತ್ತು ಮನುಷ್ಯನ ದೇಹ, ಮನಸ್ಸು ಮತ್ತು ಚೈತನ್ಯದಲ್ಲಿ ಅತ್ಯುತ್ತಮವಾದುದರ ಸಮಗ್ರ ಚಿತ್ರಣ. ಅಂತೆಯೇ ಶಿಕ್ಷಣವು ಎಲ್ಲಾ ಆಯಾಮಗಳಲ್ಲಿಯೂ ನೈತಿಕ, ಮಾನಸಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವದ ಬೆಳವಣಿಗೆಗೆ ಆಧಾರವಾಗಿರುತ್ತದೆ. ಶಿಕ್ಷಣವು ಶಾಂತಿ ಸಮೃದ್ಧಿಯ ಕೋಟೆಗಳನ್ನು ನಿರ್ಮಿಸಲು ಬೇಕಾದ ಅಡಿಪಾಯವನ್ನು ಹಾಕುತ್ತದೆ. ಪ್ರಾಚೀನಕಾಲದಿಂದಲೂ 'ಸಾ ವಿದ್ಯಾ ಯಾ ವಿಮುಕ್ತಯೆ' ಎಂದು ಹೇಳಲಾಗುತ್ತಿದೆ. ಇದರರ್ಥ ಶಿಕ್ಷಣದಿಂದ ನಾವು ಅಂತಿಮವಾಗಿ ಮೋಕ್ಷವನ್ನು ಪಡೆಯುತ್ತೇವೆ ಎನ್ನುವುದು. ಈ ಸಣ್ಣ ಸಂಸ್ಕೃತ ನುಡಿಗಟ್ಟು ಮೌಲ್ಯ ಶಿಕ್ಷಣದ ಚಿಂತನೆ ಮತ್ತು ಅದರ ಸಾರವನ್ನು ಒಳಗೊಂಡಿದ್ದು ಎಲ್ಲಾ ದೃಷ್ಟಿಕೋನಗಳಿಗೂ ಪ್ರಸ್ತುತವಾಗಿದೆ. ಈ ಒಂದು ಪರಿಕಲ್ಪನೆಯು ಮಹಾತ್ಮ ಗಾಂಧೀಜಿಯವರ ಸರಳವಾದ ಸಂಸ್ಕರಿಸಿದ ವಿಧಾನಕ್ಕೆ ಅನ್ವಯಿಸಿದಾಗ ಶೈಕ್ಷಣಿಕ ಅಭಿವೃದ್ಧಿಯ ಹೊಸ ಆಯಾಮವನ್ನು ಒದಗಿಸುತ್ತದೆ.

ನೀವು ಈ ವೇದಿಕೆಯಲ್ಲಿ ಪ್ರಶಸ್ತಿ ಪಡೆಯಲು ಬಂದಾಗ ಒಂದು ತುದಿಯಿಂದ ವಿದ್ಯಾರ್ಥಿಯಾಗಿ ಬಂದು ಪ್ರಶಸ್ತಿ ಸ್ವೀಕರಿಸಿ ನಂತರ ಇನ್ನೊಂದು ತುದಿಗೆ ಹೊರಡುವಾಗ ಹಿರಿಯ ವಿದ್ಯಾರ್ಥಿಯಾಗಿಬಿಡಿ. ನೀವು ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಭಾಗವಾಗಿರಲು ನಾನು ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ನಿಮ್ಮನ್ನು ಆಹ್ವಾನಿಸುತ್ತೇನೆ. ಇದರಿಂದ ಇಲ್ಲಿನ ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕದಲ್ಲಿರಬಹುದು. ಇದಲ್ಲದೆ ನಮ್ಮ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಸಮಾಜದ ಇತರ ಪಾಲುದಾರರೊಂದಿಗೆ ಕೈ ಜೋಡಿಸುವಂತೆ ಕರೆ ನೀಡುತ್ತಿದ್ದೇನೆ. ಕಠಿಣ ಪರಿಶ್ರಮ, ನವೀನತೆ ಮತ್ತು ಬದ್ಧತೆಯಿಂದ ನಿಮ್ಮ ಹೆತ್ತವರು ಮತ್ತು ಸಂಸ್ಥೆ ಹೆಮ್ಮೆಪಡುವಂತಹ ಸಾಧನೆ ಮಾಡಿ.

ನಿಮಗೆ ನನ್ನ ಕೊನೆಯ ಸಲಹೆ ಏನೆಂದರೆ 'ಕರ್ಮ್ ಕರೋ, ಫಲ್ ಕಿ ಚಿಂತಾ ಮತ್ ಕರೋ'. ಇದು ಭಗವದ್ಗೀತೆಯಲ್ಲಿ ಬರುವ ಅತಿ ಶ್ರೇಷ್ಠ ಸಂದೇಶ. ಇಂದು ಜನರು ಹಣ, ಮನೆ, ಕಾರು ಮತ್ತು ಸುರಕ್ಷಿತ ಭವಿಷ್ಯಕ್ಕಾಗಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ನಾವು ಗುರಿ ಚಾಲಿತರಾಗಿದ್ದೇವೆ. ನಾವು ಎಲ್ಲವನ್ನೂ ಫಲಿತಾಂಶಕ್ಕಾಗಿ ಮಾತ್ರ ಮಾಡುತ್ತೇವೆ. ಉದಾಹರಣೆಗೆ ಇನ್ನೊಬ್ಬರು ಗಮನಿಸುವ ಸಂದರ್ಭದಲ್ಲಿ ಜನರು ಹೆಚ್ಚು ಕೆಲಸ ಮಾಡುವುದನ್ನು ನಾವು ನೋಡುತ್ತೇವೆ. ಅವರ ಕಾರ್ಯಕ್ಷಮತೆಯ ಮೌಲ್ಯಮಾಪನದಲ್ಲಿ ಮೇಲಾಧಿಕಾರಿಗಳು ಅವರನ್ನು ಪ್ರಶಂಸಿಸುತ್ತಾರೆ ಎಂದು ಹಾಗೆ ಮಾಡುತ್ತಾರೆ. ಇದನ್ನು ತಪ್ಪಿಸಬೇಕು. ಏಕೆಂದರೆ ನಿರೀಕ್ಷೆಗಳು ಈಡೇರದಿದ್ದರೆ ನೋವು ಅನಿವಾರ್ಯವಾಗುತ್ತದೆ. ಆದ್ದರಿಂದ ಕೆಲಸ ಮಾಡುವುದನ್ನು ಮುಂದುವರಿಸಿ ಮತ್ತು ಪ್ರತಿಯಾಗಿ ಏನನ್ನೂ ನಿರೀಕ್ಷಿಸಬೇಡಿ.

ನಿಮ್ಮ ಮುಂದಿನ ಜೀವನಕ್ಕೆ ನನ್ನ ಶುಭ ಹಾರೈಕೆಗಳು.

□

ಇರುಳೊಂದು ಮುಖ, ಹಗಲೊಂದು ಮುಖ ;
ಕಾಯವೊಂದು ಮುಖ, ಜೀವವೊಂದು ಮುಖ.
ಬುದ್ಧಿಯನರಿಯದಿದೆ ನೋಡಾ !
ಪ್ರಾಣಲಿಂಗವೆಂಬ ಭ್ರಾಂತು ನೋಡಾ !
ಇದು ಕಾರಣ ಮೂಱು ಲೋಕವೆಯ್ದೆ
ಬರುಸೂರೆವೋಯಿತ್ತು ಗುಹೇಶ್ವರಾ.

**–ಅಲ್ಲಮಪ್ರಭು**

# ಮತ್ತೆ ಕೊರಡು ಕೊನರಿಸಿ, ಕಲ್ಯಾಣವಾಗಿಸಿದ ಮಂಜಪ್ಪನವರಿಗಿದೋ ಶರಣಾರ್ಥಿ...

**ವೆಂಕಟೇಶ ಕೆ. ಜನಾದ್ರಿ ಕನಕಗಿರಿ**

**ಅಂ**ದು ಬಸವ ಜಯಂತಿ. ನನಗಾಗ ಹದಿನಾಲ್ಕರ ಹರೆಯ. ನಮ್ಮ ಹಳ್ಳಿಯಲ್ಲಿ ಬಸವ ಜಯಂತಿಯಂದು ಹತ್ತಾರು ಎತ್ತುಗಳನ್ನು ಶೃಂಗಾರಗೊಳಿಸಿ ಮೆರವಣಿಗೆಯ ಮೂಲಕ ಊರಿನ ಮುಖ್ಯ ಬೀದಿಯಲ್ಲಿ ಕೇಕೆಹಾಕಿ ಚೀರಾಡುತ್ತಾ ರೈತಾಪಿ ವರ್ಗ ಹರ್ಷದಿಂದ ಸಂಭ್ರಮಿಸುತ್ತಿರುವುದನ್ನು ನೋಡಿ ಬಸವ ಜಯಂತಿ ಅಂದರೆ ಏನಪ್ಪಾ? ಎಂದು ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ರೈತಾಪಿ ಹುಲಗಪ್ಪನನ್ನು ಕೇಳಿದೆ. "ಹೇ ಅದೇನು ಗೊತ್ತಿಲ್ಲ ಚಿಕ್ಕಧಣಿ  ಬಸವ ಅಂದ್ರೆ ಎತ್ತು. ಈ ದಿವ್ಸ ಬಸವನೆಂಬ ಎತ್ತುಗೋಳ್ನ ವೈನಾಗಿ ಮೈತೊಳೆದು ಛಂದಗೊಳಿಸಿ ಮೆರೆಸಿ ಅವುಗೋಳೊಂದಿಗೆ ರೈತಾಪಿ ಮಂದಿನೂ ಒಂದಿಷ್ಟು ಖುಷ್‌ಖುಷಿಯಾಗಿ ಹಬ್ಬದಂಗ ಈ ದಿವಸ ಆಚರಿಸ್ತಾರೆ" ಎಂದು ಹೇಳಿದ. ಅದಿರಲಿ ಚಿಕ್ಕಧಣಿ ಇವತ್ತು ನಿನ್ನನ್ನ ಹೊಲಕ್ಕೆ ಕರಕೊಂಡು ಹೋಗ್ತೀನಿ ಬಾ ಅಂತ ನನ್ನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಹೊಲಕ್ಕೆ ಕರೆದೊಯ್ದು ತನ್ನ ಕಾಯಕಕ್ಕೆ ತಾ ತೊಡಗಿಸಿಕೊಂಡ. ನಿಜ. ಇದಾಗಿ ಎಷ್ಟೋ ದಿವಸಗಳವರೆಗೂ ನಾನು ಬಸವ ಜಯಂತಿ ಎಂದರೆ ಎತ್ತುಗಳ ಮೆರವಣಿಗೆ ಎಂದೇ ನಂಬಿಕೊಂಡಿದ್ದೆ. ನಾನು ಕಾಲೇಜಿನ ಮೆಟ್ಟಿಲು ಹತ್ತಿದಾಗ ಅಲ್ಲಿದ್ದ ಗ್ರಂಥಾಲಯಗಳಲ್ಲಿ ಬಸವಣ್ಣನವರ ಕೆಲವು ಪುಸ್ತಕಗಳ ಮೇಲೆ ಕಣ್ಣಾಡಿಸಿದಾಗ ನನಗೆ ಸ್ಪಷ್ಟವಾಗುತ್ತಾ ಹೋಗಿದ್ದು ಬಸವಣ್ಣ ಮತ್ತು ಆತನ ಕಲ್ಯಾಣದ ಪರ್ವ. ಅಬ್ಬಾ ಅದೆಂಥ ಅದ್ಭುತವಾದ ಕಲ್ಯಾಣ ನಾಡನ್ನು ಕಟ್ಟ ಹೊರಟಿದ್ದ ಬಸವಣ್ಣನ ಕುರಿತಾಗಿ ನಾನು ಎಂಥ ಅಪಾರ್ಥ ಭಾವಿಸಿದ್ದೆನಲ್ಲ ಎಂದು ತೀರಾ ನೊಂದುಕೊಂಡೆ. ಆದರೂ ಶ್ರಮವಹಿಸಿ ಕೆಲಸ ಮಾಡುವ ಎತ್ತುಗಳು ಕಾಯಕದ ಪ್ರತೀಕವಾಗಿದ್ದ ಕಾರಣ ಬಸವಣ್ಣನವರಿಗೆ ಕಾಯಕದ ಮೇಲೆ ಭಕ್ತಿ ಇರುವ ಕಾರಣಕ್ಕೆ ನಮ್ಮ ರೈತರು ಕಾಯಕದ ಸಂಕೇತವಾಗಿ ತಮ್ಮ ತಮ್ಮ ಎತ್ತುಗಳನ್ನು ಮೆರೆಸುತ್ತಿರಬೇಕೆಂದು ಮನದ ಮೂಲೆಯೊಂದರಲ್ಲಿ ಸಮಾಧಾನಪಟ್ಟುಕೊಂಡೆ.

ಹನ್ನೆರಡನೇ ಶತಮಾನದಲ್ಲಿ ಜಾತಿ, ವರ್ಣ, ವರ್ಗ ಅಸಮಾನತೆ ಮತ್ತು ಕಂದಾಚಾರ ಮೌಢ್ಯತೆಗಳು ತುಂಬಿಕೊಂಡು ವ್ಯವಸ್ಥೆ ಅವ್ಯವಸ್ಥೆಯ ಆಗರವಾಗಿತ್ತು. ಇದೇ ಸಂದರ್ಭದಲ್ಲಿ ಬಸವಾದಿ ಶರಣರು ಇಂಥ ಅವ್ಯವಸ್ಥೆಯನ್ನು ಸರಿಪಡಿಸಿ ಸಮಸಮಾಜ ನಿರ್ಮಾಣದತ್ತ ಯೋಚಿಸಿದರು. ಬಸವಣ್ಣನಂತೂ ಬರೀ ಪ್ರಗತಿಪರವಾಗಿ ಯೋಚಿಸಿ ವಚನ ರಚಿಸಲಿಲ್ಲ. ಅವರು ಪ್ರಾಯೋಗಿಕವಾಗಿಯೇ ಮೌಢ್ಯತೆಯನ್ನು ತೊಲಗಿಸಲು ತಮ್ಮಿಂದಲೇ ಆರಂಭಿಸಿದರು. ಅಂದಿನ **'ಪುರುಷ ಶ್ರೇಷ್ಠ ಮಹಿಳೆ ಕನಿಷ್ಠ'** ಎಂಬ ಮೌಢ್ಯತೆಗೆ ಉತ್ತರವಾಗಿ ಇಷ್ಟಲಿಂಗವನ್ನು ಮಹಿಳೆಗೂ ಪೂಜಿಸಿಕೊಳ್ಳಲು ಕೊಟ್ಟರು. ಬ್ರಾಹ್ಮಣ ಶ್ರೇಷ್ಠ ಮಾದಾರ ಕನಿಷ್ಠ ಎನ್ನುವ ಅನಿಷ್ಟಕ್ಕೆ ಮಾದಾರ ಚೆನ್ನಯ್ಯನನ್ನು ಅಪ್ಪನು ನಮ್ಮ ಮಾದಾರ ಚೆನ್ನಯ್ಯನೆಂದು ಅಪ್ಪಿಕೊಂಡರು. **'ಬಲಗೈ ಶ್ರೇಷ್ಠ ಎಡಗೈ ಕನಿಷ್ಠ'** ಎಂಬ ಮತ್ತೊಂದು ಮೌಢ್ಯತೆಗುತ್ತರವಾಗಿ ಎಡಗೈಯಲ್ಲಿಯೇ ಇಷ್ಟಲಿಂಗವನ್ನಿಡಿದು ಪೂಜಿಸಿಕೊಳ್ಳಲು ತಿಳಿಸಿದರು. ಇಂಥದ್ದೊಂದು ಅವ್ಯವಸ್ಥೆಯಲ್ಲಿ ಹಡಪದ ಕಾಯಕದ ವ್ಯಕ್ತಿ ಬೆಳಗ್ಗೆ ಎದುರುಗಡೆ ಬಂದರೆ ಅದೊಂದು ದರಿದ್ರ ಆ ದಿನವೆಲ್ಲ ಕೇಡಾಗುತ್ತದೆಂಬುದೊಂದು ಪೆಡಂಭೂತ ಮೌಢ್ಯವಾಗಿತ್ತು. ಈ ಮೌಢ್ಯತೆಯಲ್ಲಿ ಉರುಳಿಲ್ಲವೆಂಬುದನ್ನು ಸಾಬೀತುಪಡಿಸಲು ಹಡಪದ ಜನಾಂಗದವರೇ ಆದ ಅಪ್ಪಣ್ಣನವರನ್ನು ತಮ್ಮ ಆಪ್ತ ಕಾರ್ಯದರ್ಶಿ ಯನ್ನಾಗಿ ನೇಮಿಸಿಕೊಂಡಿದ್ದರು. ದಿನಬೆಳಗಾದರೆ ಬಸವಣ್ಣನವರು ಹಡಪದ ಅಪ್ಪಣ್ಣನವರ ಮುಖವನ್ನೇ ನೋಡಿ ಅವರ ಮೂಲಕವೇ ಅಂದಿನ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾದ ಬಹು ಮುಖ್ಯವಾದ ಕಾರ್ಯವನ್ನು ಅವರಿಗೆ ವಹಿಸುವ ಮೂಲಕ ಅಂದಿನ ಮೌಢ್ಯತೆಗಳನ್ನು ಮತ್ತು ಕಂದಾಚರಣೆಗಳನ್ನು ನಿವಾಳಿಸಿ ಬಿಸಾಕಲು ಪ್ರಾಯೋಗಿಕವಾಗಿ ಪ್ರಯತ್ನಿಸಿ ಮಾದರಿಯಾದರು.

ವರ್ಣಾಶ್ರಮದ ತುತ್ತತುದಿಯಲ್ಲಿರುವ ವಿಪ್ರನ ರಕ್ತವೂ ಕೆಂಪು, ಅಂತ್ಯಜನ ರಕ್ತವೂ ಕೆಂಪು. ಇವರುಗಳೆಲ್ಲಾ ಉಸಿರಾಡುವ ಗಾಳಿ, ಕುಡಿಯುವ ನೀರು, ಬಳಸುವ ಪ್ರಸಾದ. ಪಂಚಮಹಾಭೂತಗಳಿಂದ ತಯಾರಾದ ಶರೀರ ಹೀಗೆ ಎಲ್ಲದರಲ್ಲೂ ಒಂದೇ ಭಾವ, ವಸ್ತು, ಅಂಶಗಳಿರುವಾಗ ಕೆಲವರು ಹುಟ್ಟುಹಾಕಿದ ಜಾತಿ ವರ್ಣವ್ಯವಸ್ಥೆಗೆ ನೀರುಣಿಸಿ ಪೋಷಿಸುವುದೇಕೆಂಬುದು ನನಗಿನ್ನು ತಿಳಿಯದ ವಿಸ್ಮಯವಾಗಿದೆ. ಬಸವಾದಿ ಶಿವಶರಣರ ಹಾಗೆ ನಮ್ಮ ನುಡಿಗಳು ನಮ್ಮ ನಡೆಯೊಳಗೊಂದಾದಾಗ ನಮ್ಮೊಳಗೇ ಇರುವ ಇಷ್ಟಲಿಂಗ ಮೆಚ್ಚಿ ಹೌದಹುದು ಎನ್ನುವ ಶರಣ ಸಂಸ್ಕೃತಿಯಲ್ಲಿ ವಿಶ್ವ ಸಂಸ್ಕೃತಿಯಡಗಿದೆ. ಎಂದೆಂದಿಗೂ ಕೊನರದ ಕೊರಡಿನಂಥ ಮನಸ್ಸುಗಳೂ ಅರಳುವ ಸಂಭ್ರಮ

ದೂರವಿಲ್ಲ. ಆತನೊಲಿದರೆ ವಿಷವೂ ಅಮೃತವಯ್ಯಾ, ಕೊರಡು ಕೊನರುವು ದಯ್ಯ ಎಂದ ಶರಣರ ಆ ಕಲ್ಯಾಣದ ದಿನಗಳ ಸಂಭ್ರಮ ಏನಾದವು? ಗೊತ್ತಿಲ್ಲ. ಜಾತೀಯತೆಯ, ಧರ್ಮದ ಅಫೀಮನ್ನು ತಲೆಗೇರಿಸಿಕೊಂಡಿದ್ದವರ ಚುಚ್ಚು ಕಿವಿಮಾತಿಗೆ ಬಿಜ್ಜಳನಾಜ್ಞೆಯಿಂದ ಅಂದು ಕಲ್ಯಾಣದಲ್ಲಿ ಕ್ರಾಂತಿಯೇ ನಡೆದುಹೋಗಿತ್ತು. ಕೋಟಿಗಳ ಲೆಕ್ಕದಲ್ಲಿದ್ದ ವಚನಗಳನ್ನೆಲ್ಲ ಸುಟ್ಟು ಹಾಕಲಾಯಿತು. ಆಗ ಶರಣರು ತಮ್ಮ ಪ್ರಾಣರಕ್ಷಣೆಗಿಂತ ತಮ್ಮ ಅಮೂಲ್ಯ ಆಸ್ತಿಯಾಗಿದ್ದ ವಚನಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತು ತಮ್ಮ ಜೀವನದ ಹಂಗನ್ನು ತೊರೆದು ಅವುಗಳನ್ನು ತಮ್ಮ ಒಡಲ ಕೂಸುಗಳನ್ನು ರಕ್ಷಿಸಿದ ರೀತಿಯಲ್ಲಿ ರಕ್ಷಿಸಿದರು. ಆದರೆ ಕಾಲದ ಭಯಂಕರ ಗರ್ಭದಲ್ಲಿ ಅವುಗಳೆಲ್ಲವೂ ಹೆದರಿಕೊಂಡು ಎಲ್ಲೆಲ್ಲೋ ಮುಸುಕು ಹಾಕಿಕೊಂಡು ಮಲಗಿಕೊಂಡುಬಿಟ್ಟವು. ಯಾರದೋ ಮನೆಯ ಜಗುಲಿಯಲ್ಲಿ ಉಸಿರುಗಟ್ಟಿ ಮೂರ್ತಿಗಳ ಜೊತೆಗೆ ಮೂರ್ತಿಯಾಗಿ ಸ್ಥಾವರವಾಗಿದ್ದುವು. ಜಂಗಮವಾಗಿ ಸಮಾಜಕಲ್ಯಾಣ, ಲೋಕ ಕಲ್ಯಾಣಕ್ಕೆ ಪಥವಾಗಬೇಕಿದ್ದ ವಚನಗಳು ಸ್ಥಾವರವಾಗಿ ಸ್ಥಾವರಕ್ಕಳಿವುಂಟು ಎಂಬ ಶರಣರ ಮಾತಿನಂತೆ ಅಳಿವಿನಂಚಿನಲ್ಲಿದ್ದ ಅವುಗಳಿಗೆ ಮತ್ತೇ ಜಂಗಮ ರೂಪ ಕೊಟ್ಟವರೇ ಹರ್ಡೇಕರ ಮಂಜಪ್ಪನವರು. ಮಂಜಪ್ಪನವರು ತಮ್ಮ ಬದುಕನ್ನು ಕಲ್ಯಾಣದ ಶರಣರನ್ನು ಅವರು ರಚಿಸಿದ ವಚನಗಳನ್ನು ಮತ್ತೆ ಲೋಕಕ್ಕೆ ಜಂಗಮಗೊಳಿಸದಿದ್ದರೆ ಇನ್ನೆಷ್ಟು ದಿವಸ ನಾವು ಎತ್ತುಗಳನ್ನು ಮೆರೆಸುತ್ತಲೇ ಬಸವ ಜಯಂತಿಯನ್ನು ಆಚರಿಸುತ್ತಿದ್ದೆವೋ ಗೊತ್ತಿಲ್ಲ.

ನಿಜಕ್ಕೂ ಬಸವನೆಂದರೆ ಅದೊಂದು ಯುಗದ ಉತ್ಸಾಹವೇ ಸರಿ. ಈ ನಾಡಿನಲ್ಲಿ ಧ್ಯಾನಸ್ಥ ಮೌನದಲ್ಲಿ ಅರಿವ ಪಡೆದ ಬುದ್ಧ ಶೋಷಿತರ ಅಜ್ಞಾನ, ಬವಣೆಯನ್ನು ಕೆರೆಗೆರಚಿ, ಅವರ ಬಾಳದಾರಿಗೆ ಬೆಳಕ ತೋರಿ ಕಾರ್ಗತ್ತಲೆಯ ಗಾಢ ಮೌಢ್ಯತೆಯ ತೊರೆದವನಿಗೇ ದೇಶ ಬಿಟ್ಟು ಓಡಿಸಿದೀ ದೇಶದಲ್ಲಿ ಬುದ್ಧನನ್ನು, ಆತನ ಆ ವಿಚಾರಗಳೊಂದಿಗೆ ಜೀವಸಮಾಧಿ ಮಾಡಿದ್ದರು. ಆ ಮಹಾಪರಿನಿರ್ವಾಣದ ಬಯಲಲ್ಲಿಯ ನಿಟ್ಟುಸಿರಿನೊಳಗಿನ ಬಿಕ್ಕಳಿಕೆಯ ಬಿಸಿಯುಸಿರಾವಿಯಾಗಿ, ಹನಿಗಟ್ಟಿ ಮೋಡವಾಗಿ ಸುರಿದ ವರ್ಷಧಾರೆಯಲ್ಲಿ ಉದಯಿಸಿದ ಮಿಂಚು ನಮ್ಮ ಬಸವ. ಮತ್ತದೆ ಮೌಢ್ಯತೆ–ಜಾತೀಯತೆ–ಅಸಮಾನತೆ–ಅಮಾನವೀಯತೆಗೆ ಬಸವನ ಮನಮಿಡಿದು ಬಂದ ವಚನಗಳು ಪಚನವಾಗಲಿಲ್ಲ ನಮ್ಮವರಿಗೆ. ಬಸವನ ಘರ್ಷಿತ ಬಂಡಾಯದ ವಿಚಾರಗಳೊಂದಿಗೆ ಭಾವ–ಅನುಭಾವಗಳು ಕೂಡಿ ಕೂಡಲಸಂಗಮವಾಗಲಿಲ್ಲ. ಆ ದಿವ್ಯ ಚೇತನವನ್ನವರು ಲಿಂಗೈಕ್ಯ ಮಾಡಿದರು. ಅಂದಿನ ಕಲ್ಯಾಣದ ಪ್ರಭುತ್ವ ಅರಳಿದ ಹೂಗಳನ್ನಷ್ಟೇ ಹೊಸಕಿತ್ತು. ಆದರದಕ್ಕೆ ಮತ್ತೆ ಮತ್ತೆ

ಬರುವ ಚೈತ್ರ, ವಸಂತರನ್ನು ತಡೆಯಲಾಗಲಿಲ್ಲ. ಚೈತ್ರ ಮತ್ತೆ ಚಿಗುರಿ, ವಸಂತ ಮತ್ತೇ ಗರಿಗೆದರಿದಾಗ ಸಮಾನತೆಯ ಬೀಜ ಮತ್ತೆ ಮತ್ತೆ ಅಂಕುರಿಸುತ್ತಲಿದೆ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುವಂತೆ. ಬಂಡಾಯದ ಭಾವಸಮಾಧಿಯಲ್ಲಿ ಸಮಾನತೆಗಾಗಿ ಬುಸುಗುಡುತ್ತಿದ್ದ ಜೀವ ಭೂ ತಾಯಿಯ ಒಡಲ ಕಿಚ್ಚಾಗಿ ಅತ್ತಾಗ ಆ ಕಣ್ಣೀರ ಧಾರೆಯ ಭಾವಸಮುದ್ರದ ಜ್ವಾಲಾಮುಖಿಯಾಗಿ ಪ್ರಜ್ವಲಿಸಿದ ಹಳಕಟ್ಟಿ, ಹರ್ಡೇಕರ, ಜತ್ತಿಯಂತವರಲ್ಲಿ ಬಸವನುಸಿರು ಮತ್ತೇ ಚೇತರಿಸಿತು. ವರ್ಣಾಶ್ರಮದ ಮನಸ್ಸುಗಳು ಬಸವ–ತತ್ವ ಚಿಂತನೆಗಳನ್ನೆಂದು ಸುಡಲಾರವು. ಸುಡಲು ಬಂದವರನ್ನೇ ಸುಟ್ಟು ಬಿಡುವ ವಚನ ತತ್ವಗಳವು. ಸದಾ ಜಾಗೃತವಾಗಿರುವ ಶರಣರ ಜಂಗಮಶೀಲ ಚೇತನಗಳವು. ಬಸವನುಸಿರವು. ಅವು ಮತ್ತೆ ಮತ್ತೆ ಬರುವ ವಸಂತ, ಚೈತ್ರಗಳು ಅದುವೆ ಬಸವನ ಯುಗ ಯುಗದ ಉತ್ಸಾಹವಾಗಿತ್ತು. ಅದು ಬಸವಾದಿ ಪ್ರಮಥರ ಮತ್ತೇ ಕಲ್ಯಾಣವಾಗಿತ್ತು. ಹೀಗೆ ಅಕ್ಷರಶಃ ಕೊರಡಾಗಿದ್ದ ವಚನಗಳ ಕಟ್ಟುಗಳಲ್ಲಿಯ ಸಾರವನ್ನು ಮತ್ತೆ ಕೊನರಿಸಿದವರು ಹರ್ಡೇಕರ ಮಂಜಪ್ಪನವರು. ಸ್ಥಾವರವಾಗಿದ್ದ ಬಸವಾದಿ ಶರಣರ ವಚನಗಳನ್ನು ಮತ್ತೆ ಜಂಗಮವಾಗಿಸಿ ಎತ್ತುಗಳ ಮೆರವಣಿಗೆಯಾಗಿದ್ದ ಬಸವ ಜಯಂತಿಯ ದಿನವನ್ನು ಬಸವಣ್ಣನವರ ಶರಣ ತತ್ವದ ಕುರಿತು ಅನುಭಾವಿಸಿ ಸತ್ಪಾತ್ರಕ್ಕೆ ಸಲ್ಲಿಕೆಯಾಗುವಂತೆ ಹಗಲಿರುಳು ಶ್ರಮಿಸಿದ ಹರ್ಡೇಕರ ಮಂಜಪ್ಪನವರಿಗಿಂದು ಎಷ್ಟು ಶರಣಾರ್ಥಿಗಳನ್ನು ಹೇಳಿದರು ಋಣ ಸಂದಾಯವಾಗದು. ಅವರ ಶ್ರಮದ ಫಲಿತವೇ ಇಂದು ನಮಗೆ ವಚನ ಸಾಹಿತ್ಯ ಸಂಪತ್ತು ಮತ್ತು ಬಸವನ ಅನುಭವ ಮಂಟಪವೆಂಬ ಸಂಸತ್ತು ದೊರೆಯಲು ಸಾಧ್ಯವಾಗಿದ್ದು.

**"ಅಜ್ಞಾತ ಮಹಾತ್ಮನೆ ನಿನಗಿದೋ ನಮಸ್ಕಾರ ಲೋಕದ ಕಣ್ಣಿಗೆ ನೀ ಬೀಳದಿರಬಹುದು ಲೋಕ ನಿನ್ನನ್ನು ಲೆಕ್ಕಿಸದಿರಬಹುದು ಆದರೆ ಜಗದೀಶನ ಕಣ್ಣಿನಲ್ಲಿ ನೀನೆ ತುಂಬಿರುವೆ ಆತನ ಎದೆಯಲ್ಲಿ ನೀನೆ ಆವರಿಸಿರುವೆ"** ಎಂದು ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕದ ಗಾಂಧಿ ಎಂದೇ ಗುರುತಿಸಿದ್ದ ಹರ್ಡೇಕರ ಮಂಜಪ್ಪನವರನ್ನು ಕುರಿತು ಕವಿತೆಯಲ್ಲಿ ಕನ್ನಡಿ ಹಿಡಿದಿದ್ದಾರೆ. ಮಂಜಪ್ಪನವರು ಒಬ್ಬ ದೇಶಪ್ರೇಮಿ, ನಾಡಪ್ರೇಮಿ, ಬಸವಪ್ರೇಮಿ, ಗಾಂಧೀಜಿಯ ಆಪ್ತ ಸ್ನೇಹಿತರು. ಇಂದಿನ ಕಾರವಾರ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ 18.2.1886ರಂದು ಮಧುಕೇಶ್ವರಪ್ಪ ಮತ್ತು ಮಧುಕೇಶ್ವರ ದೇವಾಲಯದ ಪರಿಚಾರಿಕೆಯಾದ ತಾಯಿ ಮಂಜಮ್ಮನ ಕಂದನಾಗಿ ಜನಿಸಿದ ಮಂಜಪ್ಪ. ಹುಟ್ಟಿದರೆ ಬನವಾಸಿಯಲ್ಲಿ ಹುಟ್ಟಬೇಕು ಇಲ್ಲವೆ ಮರಿದುಂಬಿಯಾಗಿ ಕೋಗಿಲೆಯಾಗಿ ಹುಟ್ಟಬೇಕು ಎಂಬ ಪಂಪನ ಉತ್ಕಟ ಮನಭಾವದಲಿದ್ದವರು.

ಅಂದು ಐತಿಹಾಸಿಕವಾಗಿ ಬನವಾಸಿ ಪ್ರಸಿದ್ಧಿಯನ್ನು ಹೊಂದಿದ್ದ ಪ್ರದೇಶವಾಗಿತ್ತು. ಇದೇ ಸ್ಥಳದಲ್ಲಿ ಉದಯಿಸಿದ ಅಲ್ಲಮಪ್ರಭು, ಅಕ್ಕಮಹಾದೇವಿಯವರ ನೆಲೆಯಾಗಿದ್ದ ಈ ನೆಲದಲ್ಲಿ ಈ ಮಂಜು ತಾಯ ಮಡಿಲ ಕೂಸಾಗಿ ಬೆಳೆದ. ಅಣ್ಣ ಮಧುಲಿಂಗಪ್ಪನ ಆಶ್ರಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬನವಾಸಿಯಲ್ಲಿ ಪಡೆದು ಮುಂದೆ ಏಳು ರೂಪಾಯಿ ಸಂಬಳ ಪಡೆಯುವ ಕಾಯಕವನ್ನು ಅಪ್ಪಿಕೊಂಡ ಆದರ್ಶ ಶಿಕ್ಷಕರಾದವರು. ಮಕ್ಕಳನ್ನು ದೇಶದ ಸಂಪತ್ತೆಂದು ಭಾವಿಸಿ ಎಲ್ಲರನ್ನು ಸಮಾನವಾಗಿ ಕಂಡು ತಮ್ಮ ಶಿಷ್ಯರನ್ನು ತಮ್ಮ ಪ್ರೀತಿಯ ಅಂತಃಕರಣದ ಭಾವದಲ್ಲಿ ವಿದ್ಯೆಯನ್ನು ಕಲಿಸಿದರು. ಮಂಗೇಶರಾಯರಿಂದ "ಅಮರಕೋಶ" ಅಧ್ಯಯನ ಆರಂಭಿಸಿದರು. ಕೆಲವು ಬ್ರಾಹ್ಮಣರು ಶೂದ್ರನಿಗೆ ಸಂಸ್ಕೃತ ಕಲಿಸಬಾರದೆಂಬ ಕಟ್ಟಳೆಯ ಪರಿಣಾಮ ಮಂಗೇಶರಾಯರು ಸಂಸ್ಕೃತ ಕಲಿಸುವುದನ್ನು ನಿಲ್ಲಿಸಿದರು. ಆಗ ಮಂಜಪ್ಪನ ಒಳಗೊಬ್ಬ ಪ್ರಗತಿಪರ ಬಂಡಾಯಗಾರ ಸೃಜಿಸುತ್ತಿರುವುದನ್ನು ಲೋಕ ಅದಾಗಲೇ ಅರಿತಿತ್ತು. ಮರಾಠಿ ಕೇಸರಿ ಪತ್ರಿಕೆಯನ್ನು ಆಸಕ್ತಿಯಿಂದ ಓದುತ್ತಿದ್ದ ಮಂಜಪ್ಪ ಭಾರತ ಸ್ವಾತಂತ್ರ್ಯಕ್ಕಾಗಿ ದೇಶದ ಅಭಿಮಾನವನ್ನು ಬೆಳೆಸಿಕೊಂಡು ಪತ್ರಿಕಾಕ್ಷೇತ್ರಕ್ಕೆ ಮನಸೋತರು. ಅಣ್ಣ ಮಧುಲಿಂಗಪ್ಪನ ಜೊತೆಗೆ ನೌಕರಿಗೆ ರಾಜೀನಾಮೆ ನೀಡಿ ದಾವಣಗೆರೆಗೆ ಬಂದರು. ಆಗ ಅವರೊಳಗಣ ಕಲ್ಯಾಣದ ಪಥವೇ ಬೇರೆಯಾಗಿತ್ತು.

ಕ್ರಿ.ಶ. 1906ರಲ್ಲಿ "ಧನುರ್ಧಾರಿ" ವಾರಪತ್ರಿಕೆ ಆರಂಭಿಸಿ ಹರಿತವಾದ ಲೇಖನಗಳನ್ನು ಬರೆಯಲಾರಂಭಿಸುತ್ತಾರೆ. ಮರಾಠಿಯ ಕೇಸರಿ, ಜ್ಞಾನಪ್ರಕಾಶಿಕಾ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುತ್ತಾರೆ. ದೇಶಾಭಿಮಾನವನ್ನು ಯುವಕರ ಮನದಲ್ಲಿ ಬಿತ್ತುತ್ತಾರೆ. ಸ್ವಾತಂತ್ರ್ಯಕ್ಕಾಗಿ ಟೊಂಕ ಕಟ್ಟಿ ನಿಂತ ನೇತಾರರಾದ ಲಾಲ, ಬಾಲ, ಪಾಲ ಇವರ ಹೋರಾಟದ ಕಿಡಿನುಡಿಗಳನ್ನು ಧನುರ್ಧಾರಿ ಪತ್ರಿಕೆಯಲ್ಲಿ ಲೇಖನವಾಗಿಸಿ ಸ್ವಾತಂತ್ರ ಹೋರಾಟಗಾರರನ್ನು ಸಿದ್ಧಪಡಿಸಿ ಪ್ರೇರೇಪಿಸುತ್ತಾರೆ. 1915ರಲ್ಲಿ ಈ ಪತ್ರಿಕೆ ಹಣಕಾಸಿನ ಮುಗ್ಗಟ್ಟಿನಿಂದ ನಿಲ್ಲುತ್ತದೆ. "ಸ್ವಕರ್ತವ್ಯ ಸಿದ್ಧಾಂತ" ಮತ್ತು ಬುದ್ಧಿಯ ಮಾತು ಪುಸ್ತಕಗಳನ್ನು ಪ್ರಕಟಿಸಿ ಅಂದಿನ ಯುವಕರಿಗೆ ಕಿವಿಮಾತಾಗುತ್ತಾರೆ. "ಮಹಾತ್ಮ ಗಾಂಧಿಯವರ ಈಗಿನ ಚರಿತ್ರೆ" ಎಂಬ ಪುಸ್ತಕ ಪ್ರಕಟಿಸುತ್ತಾರೆ. ಈ ಕೃತಿ ಕನ್ನಡದಲ್ಲಿ ಗಾಂಧೀಜಿಯನ್ನು ಕುರಿತು ಬರೆದ ಮೊದಲ ಕೃತಿಯಾಗಿತ್ತು. 1920ರಲ್ಲಿ ಖಾದಿಧಾರಿಯಾಗಿ ಗಾಂಧೀಜಿ ಮತ್ತು ಬಸವಣ್ಣನವರ ತೌಲನಿಕ ಅಧ್ಯಯನ ಮಾಡಿದರು. ಅಪ್ಪಟ ರಾಷ್ಟ್ರೀಯವಾದಿ ಮಂಜಪ್ಪ ಈ ನಾಡಿನ ರಾಷ್ಟ್ರೀಯ ಚಟುವಟಿಕೆಗೆ ಹೊಸ

ಪಥವನ್ನು ತೋರಿದವರು. 1923ರಲ್ಲಿ ಹರಿಹರದ ತುಂಗಭದ್ರಾ ನದಿ ದಂಡೆಯಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿ, ರಾಷ್ಟ್ರೀಯ ಧರ್ಮ ಮತ್ತು ಸತ್ಯಾಗ್ರಹ ತತ್ವಗಳನ್ನು ಪ್ರಚುರಪಡಿಸುತ್ತಾರೆ. ನಂತರ ಹಾವೇರಿಯಲ್ಲಿ ನಡೆದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಮಾತನಾಡಿ ವಿಜಯಪುರದಲ್ಲಿ ಶ್ರೀ ರಾಜಾಜಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಮ್ಮ ಮಾತುಗಳಿಂದ ಜನರನ್ನು ಬಡಿದೆಬ್ಬಿಸಿ ಅವರಲ್ಲಿ ಪ್ರಗತಿಪರತೆಯನ್ನು ಬಡಿದೆಬ್ಬಿಸುತ್ತಾರೆ.

ಮಂಜಪ್ಪನವರು ಗಾಂಧೀಜಿಯಂತೆ ಸತ್ಯಾಗ್ರಹಪ್ರಿಯರು. ಕ್ರಿ.ಶ. 1910ರಲ್ಲಿ ಬ್ರಹ್ಮಚರ್ಯ ವ್ರತ ಪಾಲಿಸುತ್ತಾರೆ. 1920ರಲ್ಲಿ ಖಾದಿ ವ್ರತ ಅಪ್ಪಿಕೊಳ್ಳುತ್ತಾರೆ. 1924ರಲ್ಲಿ ಸಾಬರಮತಿಗೆ ತೆರಳಿ ಗಾಂಧೀಜಿ ಜತೆ ಕೆಲ ದಿವಸ ಇದ್ದು 1924ರಲ್ಲಿ ಬೆಳಗಾವಿ ಅಧಿವೇಶನದಲ್ಲಿ ಬಸವೇಶ್ವರ ಸೇವಾದಳ ಎಂಬ ಸ್ವಯಂಸೇವಕರ ಸಂಘಟನೆ ರಚಿಸಿ ಅಧಿವೇಶನ ಯಶಸ್ಸಿಗೆ ಕಾರಣರಾಗುತ್ತಾರೆ. ಕ್ರಮೇಣ ಬಸವೇಶ್ವರರ ತತ್ವಗಳಿಗೆ ಆಕರ್ಷಿತರಾಗುತ್ತಾರೆ. ಲಿಂಗಾಯತದಲ್ಲಿರುವ ಹಲವು ಗೋಡೆಗಳನ್ನು ಉರುಳಿಸಲು ಪ್ರಯತ್ನಿಸುತ್ತಾರೆ. ಮತಧರ್ಮಗಳ ಗೋಡೆಗಳುರುಳಿಸುವ ಜೊತೆ ಹಲವು ಮೌಢ್ಯತೆಗಳನ್ನು ನಂಬಿಕೆಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡುತ್ತಾರೆ. ಬಸವೇಶ್ವರರ ಕುರಿತಾಗಿಯೇ ಹಲವು ಪುಸ್ತಕಗಳನ್ನು ಪ್ರಕಟಿಸಿ ಉಚಿತವಾಗಿ ಹಂಚುತ್ತಾರೆ. ಬಸವ ತತ್ವದ ಪ್ರಚಾರ ಕಾರ್ಯ ಮಾಡುತ್ತಾರೆ. ಅಂದು ಧಾರವಾಡದ ಮುರುಘಾ ಮಠದ ಮೃತ್ಯುಂಜಯ ಸ್ವಾಮಿಗಳವರು ಇವರಿಗೆ ಅಪಾರ ಬೆಂಬಲ ನೀಡುತ್ತಾರೆ. ಸ್ವಾಮಿಗಳ ಸಹಕಾರದಿಂದಲೇ ಶ್ರಾವಣ ಮಾಸದಲ್ಲಿ ಉಪನ್ಯಾಸಮಾಲೆ ಆರಂಭಿಸುತ್ತಾರೆ. 1913ರಲ್ಲಿ "ಸಾರ್ವಜನಿಕ ಬಸವ ಜಯಂತಿ" ಆಚರಣೆಯನ್ನು ಅರ್ಥಪೂರ್ಣ ವಾಗಿ ಆಚರಿಸುವ ವಿಧಾನ ಆರಂಭಿಸಿದ ಮೊದಲಿಗರು. "ಸತ್ಯಾಗ್ರಹಿ ಬಸವೇಶ್ವರ" ಗ್ರಂಥವನ್ನು ಗಾಂಧೀಜಿಯವರಿಗೆ ಕೊಟ್ಟು ಅವರಿಗೆ ಬಸವಣ್ಣನವರನ್ನು ಪರಿಚಯಿಸುತ್ತಾರೆ. 27.3.1927ರಂದು ಕಲಬುರ್ಗಿಯಲ್ಲಿ ಗಾಂಧೀಜಿಯವರನ್ನು ಕಂಡು ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಮಾರ್ಗದರ್ಶನ ಪಡೆದು 1927ರಲ್ಲಿ ಆಲಮಟ್ಟಿಯಲ್ಲಿ ವಿದ್ಯಾಲಯ ಸ್ಥಾಪನೆ ಮಾಡಿ ಅಲ್ಲಿ ಬದುಕಿಗೆ ಅಗತ್ಯವಿರುವ ಜೀವನ ಶಿಕ್ಷಣ ಕುರಿತಾಗಿಯೂ ಕಲಿಸುವಂತೆ ವ್ಯವಸ್ಥೆ ರೂಪಿಸುತ್ತಾರೆ. 1930ರಲ್ಲಿ "ಉದ್ಯೋಗ" ಮಾಸಪತ್ರಿಕೆ ಹಾಗೂ 1931ರಲ್ಲಿ ಶರಣ ಸಂದೇಶ ಎಂಬ ಮಾಸಪತ್ರಿಕೆ ಆರಂಭಿಸುತ್ತಾರೆ. 1934ರಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಗಾಂಧೀಜಿ ಕರ್ನಾಟಕಕ್ಕೆ ಬಂದಾಗ ಅವರೊಡನೆ ಸುತ್ತಾಡುತ್ತಾರೆ. ಬಸವಣ್ಣನವರಂತೆ ಅಸ್ಪೃಶ್ಯರ ಜೊತೆ ತಮ್ಮನ್ನು

ಸಮೀಕರಿಸಿಕೊಳ್ಳುತ್ತಾರೆ. 1946ರಲ್ಲಿ ಪ್ರಗತಿ ಗ್ರಂಥವಾಲೆಯುನ್ನು ಪ್ರಾರಂಭಿಸುತ್ತಾರೆ.

ಮಂಜಪ್ಪನವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ: ಸ್ವಕರ್ತವ್ಯ ಸಿದ್ಧಾಂತ, ಬುದ್ಧಿಯ ಮಾತು, ವಾರದ ಮಲ್ಲಪ್ಪನವರ ಚರಿತ್ರೆ, ಸ್ತ್ರೀ ನೀತಿ ಸಂಗ್ರಹ, ಆರೋಗ್ಯ ಜೀವನ, ಬುದ್ಧ ಚರಿತ್ರೆ, ರಾಮತೀರ್ಥರ ಉಪನ್ಯಾಸ, ಭಾರತೀಯರ ದೇಶಭಕ್ತಿ, ಬಸವ ಚರಿತ್ರೆ, ಆಧುನಿಕ ಜರ್ಮನಿ, ವೀರಶೈವ ಸಮಾಜ ಸುಧಾರಣೆ, ಖಾದಿ, ಬ್ರಹ್ಮಚರ್ಯ, ಅಹಿಂಸೆ, ಸತ್ಯಾಗ್ರಹ ಧರ್ಮ, ಬಸವ ಬೋಧಾಮೃತ, ಸುಬೋಧಸಾರ, ಎಚ್ಚೆತ್ತ ಹಿಂದುಸ್ತಾನ ಈ ಕೃತಿಗಳನ್ನು ದಾಖಲಿಸಬಹುದು. ಅವರ ಆತ್ಮಚರಿತ್ರೆ: “ಕಳೆದ ನನ್ನ ಮೂವತ್ತು ವರ್ಷಗಳ ಕಾಣಿಕೆ”ಯನ್ನು 1936ರಲ್ಲಿ ಪ್ರಕಟಿಸುತ್ತಾರೆ. ಇದು ಕನ್ನಡದ ಮೊದಲ ಆತ್ಮಚರಿತ್ರೆ ಎಂದು ಗುರುತಿಸಲ್ಪಟ್ಟಿದೆ. ಮಂಜಪ್ಪನವರು ಬಸವಣ್ಣನ ಕುರಿತು ಸಮಗ್ರ ಅರಿವನ್ನು ಹೊಂದಿದ್ದಲ್ಲದೇ ಗಾಂಧೀಜಿಯವರ ಸಿದ್ಧಾಂತಗಳೂ ಸಹ ಬಸವಣ್ಣನ ಸಿದ್ಧಾಂತಕ್ಕೆ ಹೋಲಿಕೆಯಾಗುತ್ತಿರುವ ಕಾರಣ ಗಾಂಧೀಜಿಯವರಿಗೆ ಬಸವ ಚಿಂತನೆಗಳನ್ನು ಸರಳವಾಗಿ ತಲುಪಿಸುತ್ತಾರೆ. ಸ್ತ್ರೀಸಮಾನತೆ, ಜಾಗೃತಿಗಾಗಿ 1935ರಲ್ಲಿ ಅಕ್ಕಮಹಾದೇವಿ ಜಯಂತಿ ಆಚರಣೆಯನ್ನು ಆರಂಭಿಸಿದರು. 1942ರಲ್ಲಿ ಯುದ್ಧದ ಸಮಯದಲ್ಲಿ ಕಾಗದದ ಅಭಾವವಿತ್ತು. ಕೈಯಿಂದಲೇ ಕಾಗದ ತಯಾರಿಸಿ ಕಷ್ಟಪಟ್ಟು “ಶರಣ ಸಂದೇಶ” ಪ್ರಕಟಣೆಯನ್ನು ಮುಂದುವರಿಸುತ್ತಾರೆ. ಈ ಎಲ್ಲ ಘಟನೆಗಳನ್ನು ದಾಖಲಿಸಿದಾಗಲೇ ಹರ್ಡೇಕರ ಮಂಜಪ್ಪನವರನ್ನು ಸಮಗ್ರವಾಗಿ ಪರಿಚಯಿಸಿದಂತಾಗುತ್ತದೆ.

**ಮಂಜಪ್ಪನವರನ್ನು ಕುರಿತು:** ರಾಷ್ಟ್ರಕವಿ ಕುವೆಂಪು ಅವರು “ಪೂಜ್ಯ ಹರ್ಡೇಕರ ಮಂಜಪ್ಪನವರು ಒಂದು ಹಿರಿಯ ವಿಭೂತಿ ವ್ಯಕ್ತಿ” ಎಂದು ಅಭಿವ್ಯಕ್ತಿಸಿದ್ದರೆ, ಮತ್ತೊಬ್ಬ ಶರಣ ಜೀವಿ ಫ.ಗು. ಹಳಕಟ್ಟಿಯವರು “ಮಂಜಪ್ಪ ಕರ್ನಾಟಕದಲ್ಲಿ ಈಚೆಗೆ ಆಗಿಹೋದ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಕರ್ತರಲ್ಲಿ ಪ್ರಮುಖರಾಗಿದ್ದವರು. ಅವರ ಭಾಷಣಗಳು ಉದ್ಬೋಧಕ ವಾಗಿಯೂ ಹೃದಯವನ್ನು ಸ್ಪರ್ಶಿಸುವಂಥವೂ ಇರುತ್ತಿದ್ದವು” ಎನ್ನುತ್ತಾರೆ. ವರಕವಿ ಜ್ಞಾನಪೀಠ ಪುರಸ್ಕೃತ ದ.ರಾ. ಬೇಂದ್ರೆಯವರು “ಮಂಜಪ್ಪ ಹುಟ್ಟಾ ಬೋಧಕರು, ಶಿಕ್ಷಕರು, ಸುಧಾರಕರು. ಅವರು ಸ್ವಭಾವತಃ ಪ್ರಯೋಗ ಶರಣರು. ಅವರ ಕ್ರಿಯೆ ಅದಕ್ಕೆ ಬೇಕಾದ ಜ್ಞಾನೋದಯವೇ ನಮ್ಮ ನಾಡಿನ ಭಾಗ್ಯೋದಯ” ಎಂದು ಕೊಂಡಾಡುತ್ತಾರೆ. ಹಿರಿಯ ಸಾಹಿತಿಗಳಾದ ಸಿದ್ದಯ್ಯ ಪುರಾಣಿಕರು, “ಮಂಜಪ್ಪನವರು ಅಭಿನವ ಸರ್ವಜ್ಞರು. ಅವರು ಬರೆದುದು ಜನಾಂಗ ನಿರ್ಮಾಪಕ ಜೀವಂತ ಸಾಹಿತ್ಯ. ಜ್ವಲಂತ ಸಾಹಿತ್ಯ,

ಜೀವನದಾಯಿನೀ ಸಾಹಿತ್ಯ" ಎನ್ನುತ್ತಾರೆ. ನಮ್ಮಂಥವರಿಗಂತೂ ಬಸವಣ್ಣ ಮತ್ತು ಗಾಂಧೀಜಿಯಂಥ ವರನ್ನು ತಮ್ಮ ತನುಮನದಲ್ಲಿ ತುಂಬಿಕೊಂಡಿದ್ದ ಮಂಜಪ್ಪನವರು ಕಲ್ಯಾಣ ಪಥದ ಮಾರ್ಗಿಗಳಾಗಿದ್ದಾರೆ. ಅವರ ಪಥದಲ್ಲಿ ಸಾಗಲು ಅವರನ್ನು ಇನ್ನೂ ನಾವು ಅರಿಯಬೇಕಿದೆ.

ಮಂಜಪ್ಪನವರು ಆಲಮಟ್ಟಿಯಲ್ಲಿ ಅಕ್ಷರಶಃ ಶರಣತ್ವದ ಬದುಕನ್ನು ಸಾಗಿಸುತ್ತಿದ್ದಾಗ ನದಿಯ ಮಹಾಪೂರ ಬಂದು. ಅಲ್ಲಿದ್ದ ಇವರ ಆಶ್ರಮ ನೀರಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ಇವರ ತಾಯಿ ಇದೇ ಸಂದರ್ಭದಲ್ಲಿ ಲಿಂಗೈಕ್ಯರಾಗುತ್ತಾರೆ. ಉತ್ತರ ಕರ್ನಾಟಕದ ತುಂಬೆಲ್ಲ ಉಪನ್ಯಾಸ ಮಾಡುತ್ತಾ ಜಂಗಮ ಸೇವೆ ಮಾಡಿ ತುಂಗಭದ್ರಾ ನದಿ ತೀರದಿಂದ ಕೃಷ್ಣಾ ನದಿ ತೀರಕ್ಕೆ ಬಂದು ಅಲ್ಲಿ ಗಾಂಧೀಜಿಯವರ ಆಶಯದಂತೆ ವೃತ್ತಿಪ್ರಧಾನವಾದ ವಿದ್ಯಾಲಯವನ್ನು ಆರಂಭಿಸುತ್ತಾರೆ. 1928ರಿಂದ 1930ನೇ ಸಾಲಿನಲ್ಲಿ "ಖಾಜಿ ವಿಜಯ" ಹಾಗೂ "ಉದ್ಯೋಗ" ಮಾಸ ಪತ್ರಿಕೆ ಪ್ರಕಟಿಸುತ್ತಾರೆ. 1936ರಲ್ಲಿ "ಕಳೆದ ಮೂವತ್ತು ವರ್ಷಗಳ ನನ್ನ ಕಾಣಿಕೆ" ಎಂಬ ವಿಶಿಷ್ಟ ಬಗೆಯಲ್ಲಿ ತಮ್ಮ ಆತ್ಮಚರಿತ್ರೆಯನ್ನು ಲೋಕಾರ್ಪಣೆಗೊಳಿಸುತ್ತಾರೆ. ಇದು ಅವರ ಬದುಕಿನ ಹಲವು ಮುಖಗಳಿಗೆ ಹಿಡಿದ ಕನ್ನಡಿಯಾಗಿದೆ. ತಮ್ಮನ್ನು ತಾವು ನೋಡಿಕೊಂಡ ಪರಿ ಇದರಲ್ಲಿದೆ. ವಿಶೇಷವಾಗಿ ಅಲಮಟ್ಟಿಯಲ್ಲಿದ್ದಾಗ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ, "ಸುಬೋಧಸಾರ" "ಶುದ್ಧಿ ಸಂಘಟನೆ" "ವಚನಕಾರರ ಸಮಾಜ ರಚನೆ" ಮೊದಲಾದ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸುತ್ತಾರೆ.

ಇಂಥಹ ಮಹಾನ್ ಬಸವಪಥಿಕ 03.1.1947ರಂದು ಬಯಲಲ್ಲಿ ಬಯಲಾಗುತ್ತಾರೆ. ಅವರನ್ನು ಲಿಂಗೈಕ್ಯರಾದರು ಎನ್ನುವುದಕ್ಕಿಂತ ಜಂಗಮೈಕ್ಯ ವಾದರು ಎಂದು ಭಾವಿಸಬಹುದು. ಆಲಮಟ್ಟಿಯಲ್ಲಿ ಕ್ರಿ.ಶ. 2008ರಲ್ಲಿ ಸ್ಮಾರಕವನ್ನು ರೂಪಿಸಿದ್ದಾರೆ. ಅಲ್ಲೀಗ ಮಂಜಪ್ಪನವರ ಬದುಕು, ಬರಹ ಅಧ್ಯಯನ ಕಾರ್ಯ ಸಾಗಿದೆಯಾದರೂ ಅಲ್ಲೊಂದು ಬಸವ ವಿಶ್ವವಿದ್ಯಾಲಯ ಆಗಬೇಕೆಂಬ ತೋಂಟದ ಶ್ರೀಗಳ ಕನಸಿನ್ನೂ ವಾಸ್ತವವಾಗಬೇಕಿದೆ, ಜಂಗಮ ಗೊಳ್ಳಬೇಕಿದೆ. ಕಲ್ಯಾಣದ ಶರಣರು ಕಾಯಕವನ್ನು ತಪ್ಪದೇ ತಮ್ಮ ಪೂಜೆಯಂತೆ ಮಾಡುತ್ತಿದ್ದ ಮಾದರಿಯಲ್ಲಿ ಮಂಜಪ್ಪ ಸಹ ಸ್ವತಃ ಚರಕದಿಂದ ನೂಲುವ ಕಾಯಕಕ್ಕೆ ಮನಸೋತವರು. ಖಾದಿ ಬಟ್ಟೆ ಕುರಿತು ಅಪಾರ ಪ್ರೀತಿ. ಸಾಮಾಜಿಕ ಶೈಕ್ಷಣಿಕ, ಸಾಹಿತ್ಯ ಕ್ಷೇತ್ರಗಳಲ್ಲಿಯ ಸೇವೆಗೆ ಹೆಸರುವಾಸಿಯಾಗಿ ಅಪ್ಪಟ ಗಾಂಧೀವಾದಿಯಾಗಿದ್ದ ಇವರನ್ನು "ಕರ್ನಾಟಕ ಗಾಂಧಿ" ಎಂದು, ರಾಷ್ಟ್ರಧರ್ಮದ್ರಷ್ಟಾರರನ್ನಾಗಿ, ಸಾಮಾಜಿಕ ಧಾರ್ಮಿಕಚಿಂತಕರಾಗಿ

ಗುರುತಿಸಿದ್ದಾರೆ. ನನಗೆ ಈ ಎಲ್ಲಕ್ಕಿಂತ ಹೆಚ್ಚಾಗಿ ನನ್ನೂರಲ್ಲಿ ಬಸವ ಜಯಂತಿಯಂದು ಎತ್ತುಗಳನ್ನು ಮೆರೆಸುತ್ತಿದ್ದ ಪರಿಕಲ್ಪನೆಯನ್ನು ಪರಿವರ್ತಿಸಿ ಕೊರಡು ಕೊನರಿದಂತೆ ಅರ್ಥಪೂರ್ಣವಾದ ರೀತಿಯಲ್ಲಿ ಬಸವ ಜಯಂತಿಯನ್ನು ಪ್ರಪ್ರಥಮವಾಗಿ ನಾಡಿನಾದ್ಯಂತ ಆಚರಿಸಲು ಮತ್ತು ವಚನಗಳಿಗೆ ಮತ್ತೆ ಹೊಸ ಜಂಗಮತ್ವವನ್ನು ದಯಪಾಲಿಸಿ ಅವುಗಳಲ್ಲಿಯೇ ಮತ್ತೆ ಕಲ್ಯಾಣವನ್ನು ಕಂಡಂಥ, ಲೋಕಕ್ಕೆ ತೋರಿದಂಥ ಹರ್ಡೇಕರ ಮಂಜಪ್ಪ ಬಸವ ಜಯಂತಿಯ ಈ ದಿನ ನನಗೇಕೋ ಬಹಳ ನೆನಪಾಗುತ್ತಿದ್ದಾರೆ. ಅವರಾಶಯದಂತೆ ಬಸವಣ್ಣನನ್ನು ಮತ್ತು ಶರಣರ ಚಿಂತನೆಗಳನ್ನು ಜಗದ ಮನೆಮನೆಗಳಿಗೆ ಮತ್ತು ಎಲ್ಲರ ಮನಮನದೊಳಗೆ ಜಂಗಮಿಸಬೇಕಿದೆ. □

ಸಿರಿಯಾಳಂಗೆ ಲಿಂಗ, ದಾಸಿಮಯ್ಯಂಗೆ ಜಾಗ್ರ
ಬಸವಣ್ಣಂಗೆ ಆದರಿಕೆಯಂ ಬಿಟ್ಟು ಜೂಜನಾಡರೆ ನಮ್ಮವರಂದು ?
ಒಬ್ಬಂಗೆ ಮಗನ ರಪಣ, ಒಬ್ಬಂಗೆ ಸೀರೆಯ ರಪಣ
ಒಬ್ಬಂಗೆ ತನು ಮನ ಧನದ ರಪಣ
ಮೂವರೂ ಮೂದಲಿಸಿ ಮುಕ್ಕಣ್ಣನ ಗೆಲಿದರು
ಎನ್ನ ದೇವ ಚನ್ನಮಲ್ಲಿಕಾರ್ಜುನಾ.

**–ಅಕ್ಕಮಹಾದೇವಿ**

# ಭರತೇಶ ವೈಭವ : "ವೀರಶೈವ ತಾತ್ವಿಕ ನಿಲುವುಗಳು"

**ಡಾ. ಹಾ.ಮ. ನಾಗಾರ್ಜುನ**

**ಕ**ನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಧ್ಯಕಾಲೀನ ಸಾಹಿತ್ಯದ ಸಂದರ್ಭವು ದೇಶೀ ಪರಿಕಲ್ಪನೆಗಳನ್ನು ಸಾಹಿತ್ಯದಲ್ಲಿ ಸಾಧಿತವಾಗಿಸಿಕೊಳ್ಳುತ್ತಾ ತನ್ನ ಚಾಲನೆಯನ್ನು ವಿಶಿಷ್ಟವಾಗಿ ನೀಡಿದ ಸಂದರ್ಭ. ಇದುವರೆಗೆ ಕನ್ನಡ ಸಾಹಿತ್ಯ ವನ್ನು ನಿರ್ದೇಶಿಸುತ್ತಾ ಬಂದಿರುವ ಧರ್ಮ–ರಾಜಾಶ್ರಯದ ಯಜಮಾನಿಕೆಗಳ ಕೃಪಾಪೋಷಣೆ ಮತ್ತು ಭಾವನಾತ್ಮಕ ಹೇರಿಕೆ, ಹೊರೆಗಳಿಂದ ದೂರ ಸರಿದು ಹೊಸ ಚಹರೆಗಳನ್ನು ಅಳವಡಿಸಿಕೊಂಡ ಸಂದರ್ಭ ಗಮನಾರ್ಹವಾದುದು. ಅಭಿವ್ಯಕ್ತಿಗಾಗಿ ಹೊಸ ತುಡಿತಗಳೊಂದಿಗೆ ದೇಸೀಯತೆಯ ಕಡೆಗೆ ಹೊರಳಿದ ಸಾಹಿತ್ಯದಲ್ಲಿ ಪೌರಣಿಕ, ಐತಿಹಾಸಿಕ ವ್ಯಕ್ತಿಗಳೆಲ್ಲ ದೇಸೀ ಪರಿವೇಷಗಳನ್ನು ತೊಟ್ಟು ನಿಂತ ಕಾಲಘಟ್ಟದಲ್ಲಿ ತನ್ನನ್ನು ಮತ್ತು ತನ್ನ ಸೃಜನಾತ್ಮಕ ಚೇತನವನ್ನು ಪ್ರಯೋಗಕ್ಕೆ ಒಡ್ಡಿಕೊಂಡವನು ರತ್ನಾಕರ. ವ್ಯಕ್ತಿಗತ ನೆಲೆಯಲ್ಲಿ ಜೀವಂತ ವಿದ್ದಾಗಲೇ ರೋಚಕವಾಗಿ ಬದುಕಿ ತನ್ನ ಸಮುದಾಯದಲ್ಲಿ ಅನೇಕ ವಾದ ವಿವಾದಗಳಿಗೆ ಆಗರವಾದ ರತ್ನಾಕರನ ಮನೋಧರ್ಮ ಒಂದು ರೀತಿ ವಿಲಕ್ಷಣವಾದುದು. ಕನ್ನಡ ಕವಿಗಳ ಕಾವ್ಯ ನಿರ್ಮಾಣಕ್ಕೆ ಸ್ವಧರ್ಮ ಪ್ರೇರಣೆ ವಿಪುಲವಾಗಿದ್ದರೂ, ಕೆಲವು ಕಾವ್ಯಗಳಾದರೂ ಸ್ವಧರ್ಮ ಸೀಮೋಲ್ಲಂಘನೆ ಮಾಡಿ ವಿಶ್ವಧರ್ಮಕ್ಕೆ ಸಂಬಂಧಿಸಿದ ಕಾವ್ಯಗಳಾಗಿ ಮೂಡಿ ಬಂದಿವೆ. ರತ್ನಾಕರನ ಕಾವ್ಯ ವಸ್ತು, ಛಂದಸ್ಸು, ಶೈಲಿ, ಜೀವನದೃಷ್ಟಿಯಂತಹ ವಿಷಯಗಳಲ್ಲಿ ಯಾವೊಬ್ಬ ಕವಿಯ ನಿಲುವನ್ನು ಅನುಸರಿಸಿದಂತಿಲ್ಲ.

ರತ್ನಾಕರನು ಹುಟ್ಟು ಜೈನನಾಗಿದ್ದು, ಅವನು ಮುಂದೆ ಕಾರಣಾಂತರದಿಂದ ವೀರಶೈವನಾದ ಎಂಬುದು ನಿರ್ವಿವಾದವಾಗಿದೆ. ಇಲ್ಲಿ ಕವಿಯ ಪ್ರತಿಭೆಗೂ, ಆತನ ಯೋಗ ಸಾಮರ್ಥ್ಯಕ್ಕೂ ಮೆಚ್ಚಿ, ಆತನು ಜಿನಮತವನ್ನು ಬಿಟ್ಟು ತನ್ನ ಮತವನ್ನವಲಂಬಿಸಬೇಕೆಂದು ಬೇಡಿಕೊಳ್ಳಲು ಆತನ ಒಲುಮೆಗಾಗಿ ಕವಿಯು ಲಿಂಗವನ್ನು ಕಟ್ಟಿಕೊಂಡು ಶೈವನಾದನು ಎಂಬುದನ್ನು ಚರಿತ್ರಾರ್ಹವಾಗಿದೆ.

"ಆತ್ಮಜ್ಞಾನಿಗೆ ಜಾತಿ, ಕುಲ ಯಾವುದಾದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವಶಾಸ್ತ್ರಂಗಳಂ ಬಸವಪುರಾಣ ಮೊದಲಾಗಿ ಮಾಡಿ,

ಕೆಲವು ದಿನದಿಂ ಮೇಲೆ ಉಪಶಮನವಂತಾಳ್ದು ನಂಬಿ ನಡೆದಂ" ಎಂದು ಬರೆಯುತ್ತಾನೆ ಎಂಬುದು ಜನಜನಿತವಾದ ದಂತಕಥೆ. ಜೈನನೇ ಆದ ದೇವಚಂದ್ರನ ಹೇಳಿಕೆ ರತ್ನಾಕರ ಸ್ವಧರ್ಮದಿಂದ ಬಹಿಷ್ಕೃತನಾಗಿ ವೀರಶೈವನಾದ ಎಂಬ ಮಾತನ್ನು ಇಲ್ಲಿ ಖಚಿತಪಡಿಸುತ್ತದೆ.

ಕವಿ ವೀರಶೈವಧರ್ಮದ ಪ್ರಭಾವಕ್ಕೆ ಒಳಗಾಗಿದ್ದನೆಂಬುದನ್ನು ಅವನ ಕಾವ್ಯಾಂತರ್ಗತವಾಗಿ ಪ್ರಮಾಣಗಳು ಸ್ಪಷ್ಟಪಡಿಸುತ್ತವೆ ಹಾಗೂ ರತ್ನಾಕರನ ಸ್ವರಚಿತ ಕಾವ್ಯಗಳು ಸ್ಪಷ್ಟಪಡಿಸುತ್ತವೆ.

ಅವುಗಳಲ್ಲಿ ಮುಖ್ಯವಾದ ಮೂರು ಶತಕಗಳು 1. ರತ್ನಾಕರಾಧೀಶ್ವರ ಶತಕ 2. ಅಪರಾಜಿತೇಶ್ವರ ಶತಕ ಮತ್ತು 3. ತ್ರಿಲೋಕ ಶತಕ 4. ಮಹಾಕಾವ್ಯ: ಭರತೇಶ ವೈಭವ, ಇದಲ್ಲದೆ ಕೆಲವು ಹಾಡುಗಳನ್ನು ಲಿಖಿಸಿದ್ದಾನೆ.

ಕನ್ನಡ ಶತಕಸಾಹಿತ್ಯವು ಹಚ್ಚಹಸಿರಾಗಿ ಹುಲುಸಾಗಿದೆಯಾದರೂ ಸತ್ವಯುತವಾದ ಶತಕಗಳು ತೀರ ವಿರಳವೆಂದೇ ಹೇಳಬಹುದು. ಅವುಗಳಲ್ಲಿ ಹರಿಹರನ ಪಂಪಾಶತಕ, ರಕ್ಷಾಶತಕ, ರತ್ನಾಕರನ ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ ಮತ್ತು ಪುಲಿಗೆರೆಯ ಸೋಮನ ಸೋಮೇಶ್ವರ ಶತಕ ಮುಖ್ಯವಾದವುಗಳು ಆದರೂ ವೀರಶೈವದ ಪ್ರಭಾವ ರತ್ನಾಕರನ ಮೇಲೆ ಎಷ್ಟು? ಎಂಬುದೇ ಇಲ್ಲಿ ಪ್ರಸ್ತುತ.

ರತ್ನಾಕರನು ಬಸವಪುರಾಣ ಮೊದಲಾದ ವೀರಶೈವ ಗ್ರಂಥಗಳನ್ನು ಅಧ್ಯಯನ ಮಾಡಿ, ತಾನು ಶತಕ ರಚನೆಗೆ ಕೈಹಾಕಿದಾಗ ಹರಿಹರನ ಶತಕಗಳನ್ನು ಅವಲೋಕಿಸಿ, ಅವುಗಳನ್ನು ಚೆನ್ನಾಗಿ ಅಭ್ಯಸಿಸಿದ್ದನಾದುದರಿಂದಲೇ ರತ್ನಾಕರನ ಶತಕಗಳ ಮೇಲೆ ಹರಿಹರನ ಶತಕಗಳ ಸ್ಪಷ್ಟ ಪ್ರಭಾವ ಮೂಡಿ ಬಂದಿದೆ ಎನ್ನಬಹುದು. ಇಲ್ಲಿ ಕೇವಲ ಭಾವ, ಭಾಷೆಗಳಷ್ಟೇ ಅಲ್ಲದೆ, ಹರಿಹರನ ಸರ್ವಾರ್ಪಣ ಭಕ್ತಿ, ಸರ್ವಶಕ್ತನಲ್ಲಿ ಸಮ್ಮಿಲನಾಕಾಂಕ್ಷೆ, ಸಂಸಾರದ ಕ್ಷಣಭಂಗುರತೆ ಮತ್ತು ಇಂದ್ರಿಯ ದೌರ್ಬಲ್ಯ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವಲ್ಲಿಯೂ ಹರಿಹರನಿಂದ ರತ್ನಾಕರ ದೂರ ಸರಿದಿಲ್ಲ.

> ಮಾಸುಮುಸುಂಕಿ ತಾಯೊಡಲೊಳಂತಿರ್ದುದು ಮೂತ್ರ ಮಾರ್ಗದೊಳ್
> ಹೇಸದೆ ಬರ್ದುದೆಂತು ಮೊರೆದೊಳ್ಮಲ ಮೂತ್ರದೊಳಾಳುತೇಳುತುಂ
> ಕೂಸೆನಿಸಿರ್ದುದೆಂತುಟದನಾಂ ಮರೆದಾಗಳೆ ಠಕ್ಕು ಜವ್ವನಂ
> ಸಾಸದವೆಂದು ನಚ್ಚಿದೆನಲಾ ಮತಿದೋರಪರಾಜಿತೇಶ್ವರ ಅ.ಪ.ಶ

ಕಾಮನ ಕೈಗೊಂಬೆಯಾಗಿ ತನ್ನತನದ ನಿಜವನರಿಯದೆ ಕಷ್ಟಪಡುವ ಈ ಮನಸ್ಸಿನ ಸ್ಥಿತಿಯನ್ನು ಹರಿಹರನಿಂದ ಕೇಳಿ.

ಸ್ತ್ರೀಮಾತ್ರಂ ನೇತ್ರದತ್ತಲ್ ಸುಳಿದೊಡೆ ಮನವಿರ್ಭಾಗವಾಗುತ್ತೆ ತಾಪ
ಸ್ತೋಮಂ ಕೈಮೀರಿ ಲಜ್ಜಾರಸಮುಡುಗಿ ವಿವೇಕಂ ಕಳ್ಳೋಡಿರಾಗಂ
ಕೈಮಿಕ್ಕಾವನೇನೆಂದರಿಯದ ತೆರನಂ ಮಾಡುತ್ತಿರ್ದಪ್ಪುದಿಂತೀ
ಕಾಮಂ ಕಾಮಾರಿ ಪಂಪಾಪುರದರಸ ವಿರುಪಾಕ್ಷ ರಕ್ಷಿಪುದೆನ್ನಂ (ರಕ್ಷಾಶತಕ)

ಹೀಗೆ ಕಾವ್ಯ ಪವಿತ್ರ ವಸ್ತು. ಅದನ್ನು ಅಪಾತ್ರದಲ್ಲಿ ಬಳಸಬಾರದು ಎನ್ನುವ ಮತ ಈರ್ವರದ್ದೂ ಎನ್ನುವ ಅಭಿಮತ ಈತನದ್ದು.

ಮನುಜರ ಮೇಲೆ ಸಾವರಮೇಲೆ ಕನಿಷ್ಠರಮೇಲಕ್ಕಟಾ
ತನಗಿಂದ್ರ ಚಂದ್ರ ರವಿಕರ್ಣ ದಧೀಚಿ ಬಲೀಂದ್ರನೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡಲೆ ಮಾನವ ನೀನರ್ಹನಿಶಂ
ನೆನೆಪೊಗಳರ್ಚಿಸೆಮ್ಮೆಯ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ
(ಪಂಪಾಶತಕ)

ಅಲ್ಪರನ್ನು ಅಮರರಂತೆ ಹೊಗಳಲು ಕಾವ್ಯ ಬಳಸಬಾರದು. ಹಂಪೆಯಾಳ್ವನ ಹೊಗಳಿಕೆಗೆ ಮಾತ್ರ ಈ ಕಾವ್ಯ ಮೀಸಲು. ಹರಿಹರ ಹರನಿಗೇ ನಾಲಗೆಯನ್ನು ಮಾರಿಕೊಂಡವನಲ್ಲವೇ? ರತ್ನಾಕರನೂ ಕವಿತಾಶಕ್ತಿಯನ್ನು ಸದ್ಧರ್ಮಕ್ಕಾಗಿಯೇ ಬಳಸಬೇಕು. ಅದು ಎಲ್ಲರ ಮನೋವಿಶುದ್ಧಿ ಬುದ್ಧಿ ಸಾಫಲ್ಯ ಗೊಳಿಸಬೇಕು ಎಂದು ಹೇಳುತ್ತಾನೆ. ಕಾವ್ಯದ ಮತ್ತೊಂದು ಭಾಗದಲ್ಲಿ ಮಾನಿನಿಯರ ಅಂಗಾಂಗಗಳನ್ನು ಬಣ್ಣಿಸುವ ನಾನೇನು ಕವಿಯೋ ಕಪಿಯೋ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡಿದ್ದಾನೆ. ಭರತೇಶ ವೈಭವದ ಆದಿಯಲ್ಲಿಯೂ ರತ್ನಾಕರನ ಈ ಕಾವ್ಯೋದ್ದೇಶದ ಪ್ರಜ್ಞೆ ಪ್ರಕಟಗೊಂಡುದನ್ನು ಕಾಣಬೇಕು.

ಹೊಲ್ಲದ ನೃಪರಿಗೆ ಇಲ್ಲದ ಸದ್ಗುಣಗಳನ್ನಿಟ್ಟು
ಸೊಲ್ಲಿಪ ಕೃತಿ ಮಾರ್ಗವಿದಲ್ಲ (ಭ.ವೈ.ಆಸ್ಥಾನ)

ಎಂದು ಹೇಳುವಾಗಲೂ ಸಾವಕೆಡುವ ಈ ಲೋಗರ ಬಣ್ಣನೆಗೆ ಕಾವ್ಯವನ್ನು ಬಳಸಲಾಗದೆಂದು ಸಾರಿ ಹೇಳುತ್ತಾನೆ.

ರತ್ನಾಕರನ ಭರತೇಶ ವೈಭವದ ತುಂಬ ವೀರಶೈವ ವಿಚಾರ ತತ್ತ್ವ ಪಾರಿಭಾಷಿಕ ಪದ, ಉಪಮೆಗಳನ್ನು ಧಾರಾಳವಾಗಿ ಕಾಣುತ್ತೇವೆ. ಕವಿ ಅರಿತೋ ಅರಿಯದೆಯೋ ತನ್ನ ವ್ಯಕ್ತಿತ್ವದಲ್ಲಡಕವಾದ ಪ್ರಭಾವವನ್ನು ತನ್ನ ಕೃತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ.

ಭೋಗ ಯೋಗಗಳು ಜೀವನದ ಎರಡು ತದ್ವಿರುದ್ಧ ಮುಖಗಳು. ಈ ಎರಡೂ ಮುಖಗಳನ್ನು ಒಂದೇ ವ್ಯಕ್ತಿತ್ವದಲ್ಲಳವಡಿಸಿಕೊಂಡಿರುವ ವಿಧಾನವನ್ನು ವಿರಶೈವ ಸಿದ್ಧಾಂತ ಬೋಧಿಸುತ್ತದೆ. ಜೈನ ಸಿದ್ಧಾಂತವಾದರೋ ವಿಶೇಷ ಭೋಗದಿಂದ ವಿರತಿ ಹೊಂದುವುದನ್ನು ಬಿಂಬಿಸುತ್ತದೆ. ‘ವೀರಶೈವ’ ಸಂಸಾರ

ವಿರತಿಮಾರ್ಗವಲ್ಲ. ಭೋಗ ಬೇಡವೆಂದು ಅದು ಹೇಳದು. ಆದರೆ ಆ ಭೋಗ ಮೈಮರೆಸುವಂತಾಗಬಾರದು. ಭೋಗ 'ಶಿವಭೋಗ'ವಾಗಬೇಕು; ಯೋಗ 'ಶಿವಯೋಗ'ವಾದಂತೆ! ಒಂದೇ ವ್ಯಕ್ತಿಯಲ್ಲಿದ್ದು ಒಂದರೊಳಗೊಂದು ಬೆರೆಯದೆ ಎರಡೂ ಶಿವಾರ್ಪಿತವಾಗಬೇಕು ಎನ್ನುವ ವೀರಶೈವತತ್ವ ಭರತೇಶನ ಜೀವನದಲ್ಲಿ ಎದ್ದು ಕಾಣುತ್ತದೆ. ಸರ್ವವೂ ಶಿವಾರ್ಪಿತವೆಂದು ಭೋಗಿಸುವ ಭೋಗ ಅದೂ ಯೋಗವೇ ಎಂದು ವೀರಶೈವತತ್ವ ಪ್ರತಿಪಾದಿಸುತ್ತದೆ. ಭೋಗದ ಪ್ರಾಚುರ್ಯ ಅಧಿಕವಾಗಿ ಯೋಗದ ವಿಚಾರವೂ ಸಾಕಷ್ಟು ಜೈನರಲ್ಲಿದೆ ಯಾದರೂ ಭೋಗದಲ್ಲಿದ್ದು ಯೋಗಿಯಾಗುವ ರೀತಿ ವೀರಶೈವ ಪ್ರಭಾವವೆಂದೇ ಭಾವಿಸಬೇಕಾಗುತ್ತದೆ.

> ಮೊಲೆಯ ಮೇಲಿದ್ದ ಯೋಗಿಗಳುಂಟು ಬೆಟ್ಟದ
> ಶಿಲೆಯ ಮೇಲಿದ್ದೂ ಭೋಗಿಗಳುಂಟು

ಎನ್ನುವ ತಾತ್ವಿಕ ಪ್ರಭಾವ ವೀರಶೈವ ಪ್ರಭಾವವೇ ಇರಬೇಕು. ರತ್ನಾಕರನ ಭರತೇಶ ವೈಭವದ ತುಂಬ ಈ ತತ್ತ್ವದ ಛಾಯೆಯನ್ನು ಕಾಣುತ್ತೇವೆ. "ಶಿವಯೋಗಿ" ಅನ್ನುವಂತೆ 'ಜಿನಯೋಗಿ' ಅನ್ನುವ ಪದವನ್ನು ರತ್ನಾಕರ ಬಹಳ ಕಡೆ ಬಳಸುತ್ತಾನೆ.

ವೀರಶೈವದಲ್ಲಿ ಗುರುವಿಗಿದ್ದಷ್ಟು ಪ್ರಾಧಾನ್ಯ ಹರನಿಗೂ ಇಲ್ಲ. ಹರ ಮುನಿದರೂ ಗುರು ಕಾಯುತ್ತಾನಂತೆ ! ಜೈನರಲ್ಲಿ ಗುರು ಗೌರವ ಸಾಕಷ್ಟಿದ್ದರೂ ಗುರು ಜಿನನಿಗಿಂತಲೂ ಶ್ರೇಷ್ಠ ಅನ್ನುವ ಭಾವ ಅವರಲ್ಲಿಲ್ಲ. ಗುರು ಧರ್ಮಮಾರ್ಗದ ಮಾರ್ಗದರ್ಶಕ ಮಾತ್ರ; ಆದರೆ ಗುರುವಿನ ಮಹಿಮೆಯನ್ನು ಕೊಂಡಾಡುವ ಸನ್ನಿವೇಶ ಭರತೇಶ ವೈಭವದಲ್ಲಿ ಹೆಜ್ಜೆ ಹೆಜ್ಜೆಗೂ ಸಿಕ್ಕುತ್ತವೆ. ಭರತೇಶ ವೈಭವದ ಆದಿಯಲ್ಲೇ 'ಬಿನ್ನಹ ಗುರುವೇ ಧ್ಯಾನಕ್ಕೆ ಬೇಸರವಾದಾಗ ನಿನ್ನನಾದಿಯ ಮಾಡಿಕೊಂಡು' (ಆಸ್ಥಾನ 5) ಈ ಕಾವ್ಯ ಬರೆಯುತ್ತೇನೆಂದು ಹೇಳಿಕೊಳ್ಳುತ್ತಾನೆ.

'ಗುರುವೇ ಪ್ರತ್ಯಕ್ಷವಾಗೆನಗೆ' (ಆಸ್ಥಾನ 4) 'ಪರಮಾರ್ಥ ಗುರುವೆ, (ಕವಿ.ಸ. 1) 'ನಿಜಗುರುವಿಗೆ ಭಕ್ತನಂತೆ' (ಕವಿ ಸ. 12) 'ಗುರು ಭಕ್ತಿ ತೋರು ವಂತರುಣೋದಯ ತೋರಿತು' '(ಶಯ್ಯಾ ಸ. 124) ಗುರುವಿಲ್ಲ ದುತ್ತಮ ತೀರ್ಥಾ' (ನಗರೀ. ಸ. 35) 'ಗುರುವೇ ನಿರಂಜನ ಸಿದ್ಧ' (ವಿದ್ಯಾಗೋಷ್ಠಿ 2)

ಕಾವ್ಯದ ಪುಟಪುಟಕ್ಕೂ ಗುರು ಗೌರವ, ಗುರು ಸ್ಮರಣೆ ಹಬ್ಬಿ ಹಂದರ ವಾದುದನ್ನು ಕಾಣುತ್ತೇವೆ. ಜಿನಧ್ಯಾನ ಜಿನಸ್ಮರಣೆಗೂ ಅಧಿಕವೆನ್ನುವಂತೆ ಕಾವ್ಯದಲ್ಲಿ ಗುರುಧ್ಯಾನ ಮೂಡಿಬಂದಿದೆ. ಮುನಿಭಕ್ತಿ ಸಂಧಿಯು ಅದಕ್ಕೆ ಮೀಸಲು. ಅಷ್ಟೇ ಅಲ್ಲದೆ ಭರತೇಶ ತನ್ನ ಮಗನಿಗೆ 'ಗುರುರಾಜ' ಎಂದು

ಹೆಸರಿಟ್ಟಿದ್ದ. ವೀರಶೈವರಲ್ಲಿ 'ಗುರಪ್ಪ' 'ಗುರುಪಾದ' 'ಗುರುಗೌಡ' 'ಗುರುರಾಜ' 'ಗುರುಮೂರ್ತಿ' 'ಗುರುಚರಣ' ಮೊದಲಾದ ಹೆಸರುಗಳು ಮನೆಮನೆಗೂ ಸಿಕ್ಕುತ್ತವೆ.

ಕವಿ ರತ್ನಾಕರನು ವೀರಶೈವ ಧರ್ಮದ ಪ್ರಭಾವಕ್ಕೊಳಗಾಗಿ ಅಂಥ ಹಲವಾರು ಪದಗಳನ್ನು ವೀರಶೈವ ತಾತ್ವಿಕಾರ್ಥದಲ್ಲೇ ಬಳಸಿಕೊಂಡಿದ್ದಾನೆ.

ನಿರಂಜನ ಸಿದ್ಧನ ಸ್ತೋತ್ರದಲ್ಲಿ 'ಗರಳಹರನೆ ಭವಹರನೆ' (ಕವಿವಾಕ್ಯ 1) 'ಮಹದೇವ' (ಶಯ್ಯ 1) 'ಸದಾಶಿವ' (ಪೂರ್ವಸಾಗರ 1) 'ಶಿವಗುಣ ಮುಖ್ಯ' (ನಗರೀ 1) 'ಭಕ್ತರೊಡೆಯ' ವೀರಕ್ತರೊಡೆಯ (ಜಿನವಾಸ 1) 'ಮಹೇಶಾ' (ಚಕ್ರೇಶ ಕೈವಲ್ಯ 1) ಮೊದಲಾದ 'ಶಿವಾರ್ಥ' ಶಬ್ದಗಳನ್ನು ಗುರುಸ್ತುತಿಯಲ್ಲಿ ಬಳಸಿ ಕೊಂಡಿದ್ದಾನೆ. ವೀರಶೈವರ ಗುರು ಹರ ಅದೇ ಕಲ್ಪನೆ ಇಲ್ಲಿ ವ್ಯಕ್ತವಾಗುತ್ತದೆ.

ವೀರಶೈವ ಸಿದ್ಧಾಂತದ ಪಾರಿಭಾಷಿಕ ಶಬ್ದಗಳಾದ 'ಪ್ರಸಾದ' 'ವಿಭೂತಿ'. ಲಿಂಗಗಳ ಬಳಕೆಯನ್ನು ರತ್ನಾಕರನ ಕಾವ್ಯದಲ್ಲಿ ಕಾಣಬಹುದು. ಭರತ ತನ್ನ ತಾಯಿ ಎದುರು ಇದೆಲ್ಲ ನಿಮ್ಮ ಪ್ರಸಾದ (ಪಾರಣೆ 109) ಎಂದು ಹೇಳುತ್ತಾನೆ. 'ಪ್ರಸಾದ' ಶಬ್ದದ ವ್ಯಾಪಕಾರ್ಥದ ಪಾವಿತ್ರತೆ ಅಚ್ಚಳಿಯದೇ ಇಲ್ಲಿದೆ. ಭರತನು ದಿಗ್ವಿಜಯಕ್ಕೆ ಹೋಗುವಾಗ. ಮೃತ್ಯುಂಜಯ ಸಿದ್ಧ ಚಕ್ರಾದಿ ಯಜ್ಞಗಳ ಶುದ್ಧ ವಿಭೂತಿಯ ಮುಟ್ಟಿ ಕೊರಳಿಗಿಟ್ಟು (ಪಟ್ಟಣ ಪಯಣಮಂ) ಕೊಂಡು ಹೊರಡುತ್ತಾನಂತೆ! ಅಷ್ಟಾವರಣಗಳಲ್ಲೊಂದಾದ ವಿಭೂತಿಯನ್ನು ವೀರಶೈವರು ಹಣೆಗಷ್ಟೇ ಅಲ್ಲ ಕೊರಳಿಗೂ ಹಚ್ಚುವ ರೂಢಿ ಇಂದೂ ಇದೆ. ಇಡೀ ಅಂಗಾಂಗಗಳಿಗೂ ಹಚ್ಚುತ್ತಾರೆ. ಅಲ್ಲದೆ ಇಲ್ಲಿ ಉಕ್ತವಾದ 'ಮೃತ್ಯುಂಜಯ ಇಂದು ವೀರಶೈವ ಸ್ವಾಮಿಗಳ ಪ್ರಖ್ಯಾತ ಹೆಸರುಗಳಲ್ಲಿ ಒಂದಾಗಿ ಕಾಣಬಹುದು.

'ಚಿದ್ಘನಲಿಂಗಾ' (ಅಂಬಿಕಾ 1) ಇನ್ನೊಂದು ಅಚ್ಚ ವೀರಶೈವ ಶಬ್ದ ಗುರು ಲಿಂಗ ಜಂಗಮ ಒಂದೇ ಎಂಬ ತತ್ವದಂತೆ, 'ಚಿದ್ಘನಲಿಂಗಾ' 'ನಿರಂಜನ ಸಿದ್ಧ' ಎನ್ನುವಲ್ಲಿ ತನ್ನ ಗುರುವನ್ನು 'ಚಿದ್ಘನಲಿಂಗಾ' 'ನಿರಂಜನಸಿದ್ಧಾ' ಎನ್ನುವಲ್ಲಿ ತನ್ನ ಗುರುವನ್ನು ಚಿದ್ಘನಲಿಂಗಕ್ಕಾರೋಪಿಸಿ ಹೇಳುವ ರೀತಿಯು ಮತ್ತಷ್ಟು ಪುಷ್ಟಿಕೊಟ್ಟಂತಾಗಿದೆ.

ಅಲ್ಲದೆ 'ಆರಾಧ್ಯ', ಚಿದ್ರೂಪ 'ಚಿತ್ಕಲೆಯ ಬೆಳಗು' ಊಟಕ್ಕೆ ನೀಡು ಎಂಬರ್ಥದಲ್ಲಿ 'ಎಡೆಮಾಡು' ಮುಂತಾದ ಶಬ್ದಗಳು ವೀರಶೈವ ಸಿದ್ಧಾಂತದ ತಾತ್ವಿಕತೆಯನ್ನು ಅಳವಡಿಸಿಕೊಂಡಿರುವುದನ್ನು ಸಾಕ್ಷೀಕರಿಸುತ್ತವೆ.

ಹಾಗೆಯೇ ಅಚ್ಚ ವೀರಶೈವ ಶಬ್ದಗಳನ್ನು ಅದೇ ಧರ್ಮದ ತಾತ್ತ್ವಿಕಾರ್ಥ ದಲ್ಲಿ ಬಳಸಿದ್ದನ್ನು ನೋಡಿದರೆ ರತ್ನಾಕರನ ಮನಸ್ಸಿನ ಮೇಲಿನ ವೀರಶೈವ ಪ್ರಭಾವ ಸ್ಪಷ್ಟವಾಗದಿರದು. ಮಿಂದು ದೇವಂ ಪೂಜೆಯ ಮಾಡಿದನಂತೆ

ಭರತ' (ಅಂಬಿಕ 104 ಒಳಿತು ಕೆಡುಕಿಗೆ ಕಾರಣವಾದ ದೇವರ ಅಸ್ತಿತ್ವವನ್ನೇ ನಂಬದ ದೇವರಲ್ಲಿ ದೇವರ ಕಲ್ಪನೆ ಎಲ್ಲಿಂದ ಬಂತು? ಜಿನನ ಪೂಜೆಗೆ ಹಾಗೆ ಹೇಳಿದುದೆನ್ನಬಹುದಾದರೂ ದೇವಪೂಜೆ ಎನ್ನುವ ಪ್ರಯೋಗದಲ್ಲಿ ಸೃಷ್ಟಿಯ ಹುಟ್ಟು ಬದುಕು ಲಯಕ್ಕೆ ಕಾರಣವಾದ ಸರ್ವಶಕ್ತನ ಕಲ್ಪನೆ ಇಲ್ಲದಿಲ್ಲ. ಇದಕ್ಕೆಲ್ಲ ವೀರಶೈವ ಸಂಸ್ಕಾರವೇ ಮೂಲವಾಗಿರಬೇಕು.

"ಕಲ್ಲುತಾಗಿದ ಮಿಟ್ಟೆಯಂತೆ", "ಕರ್ಪೂರದ ಗಿರಿಯ ಸುಟ್ಟರೆ ಇದ್ದಲುಂಟೆ?" "ಹುರಿದು ಬಿತ್ತಿದ ಬೀಜ ಮೊಳೆವುದೇ?" "ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ" "ತನುವೆ ಜಿನಾಲಯ" (ದೇಹವೇ ದೇಗುಲ ಎನ್ನುವಂತೆ) ಮೊದಲಾದ ವಚನ ಸಾಹಿತ್ಯದ ಈ ತಾತ್ವಿಕ ತುಡಿತಗಳನ್ನು ನೋಡಿದರೆ. ರತ್ನಾಕರ ವೀರಶೈವ ಧರ್ಮ ಸಾಹಿತ್ಯವನ್ನು ಚನ್ನಾಗಿ ಅಭ್ಯಾಸಮಾಡಿ ಅದರ ಪ್ರಭಾವಕ್ಕೊಳ ಗಾಗಿರಬೇಕೆನ್ನುವುದನ್ನು ಕಾಣಬಹುದು.

ಈ ಪ್ರಭಾವವನ್ನು ಸಂಕುಚಿತ ದೃಷ್ಟಿಯಿಂದ ಕಾಣಲಾಗದು. ಈ ಪ್ರಭಾವಕ್ಕೊಳಗಾದ ರತ್ನಾಕರನ ಕಾವ್ಯ ಇನ್ನ ಶ್ರೀಮಂತ ಸತ್ವಯುತವಾಯಿತಲ್ಲದೆ ಸಾರ್ವತ್ರಿಕತೆಯನ್ನು ಪಡೆಯಿತೆಂದು ಹೇಳಬೇಕು. ಸ್ವಧರ್ಮದ ಸಂಕುಚಿತ ಸಂಕೋಲೆಯ ಬಿಗಿ ಸಡಿಲಿಸಿ, ಪರಧರ್ಮದ ಒಳಿತನ್ನು ಒಳಗೆ ಬರಮಾಡಿ ಕೊಂಡು ಧರ್ಮಕ್ಕೆ ವ್ಯಾಪಕವಾದ ಆದರ್ಶಮಾರ್ಗ ಹಾಕಿಕೊಂಡು ಕಾರ್ಯ ಮಾಡಿದ್ದಾನೆ ರತ್ನಾಕರ. ಈ ದೃಷ್ಟಿಯಿಂದ ಗಮನಿಸಿದಾಗ ಒಬ್ಬ ಕವಿ ಇನ್ನೊಬ್ಬ ಕವಿಯಿಂದ, ಇನ್ನೊಂದು ಧರ್ಮ, ಭಾಷೆಯಿಂದ ಏನನ್ನಾದರೂ ತೆಗೆದುಕೊಂಡಿ ದ್ದಾನೆಂದು ಹೇಳಿದರೆ ಅವನ ವ್ಯಕ್ತಿತ್ವಕ್ಕೆ ದೋಷಾರೋಪಣೆಯನ್ನು ಹೊರಿಸಿ ದಂತಾಗದು. ಅದೊಂದು ರೀತಿಯ ಗುಣವೆಂದೇ ಹೇಳಬೇಕು. ಕದಿಯದ ಕವಿಯಿಲ್ಲ; ಕದಿಯದ ವರ್ತಕನಿಲ್ಲವಂತೆ! ಜಗತ್ತಿನ ಎಲ್ಲ ಕವಿಗಳನ್ನು ಸಾಲಾಗಿ ನಿಲ್ಲಿಸಿದರೆ ಒಬ್ಬನ ಕಿಸೆಯಲ್ಲಿ ಇನ್ನೊಬ್ಬನ ಕೈ ಇದ್ದಿತು ಎನ್ನುವ ಮಾತೇನೂ ಸುಳ್ಳಲ್ಲ. ಹಾಗೆ ನೋಡಿದರೆ ಕೈ ಹಾಕದವನಿಗೇ ಹೆಚ್ಚಿನ ಹಾನಿ. ಪಂಪನ ಕಾವ್ಯವನ್ನು ರನ್ನ ಕಳವು ಮಾಡಿದ ಎನ್ನಲಾದೀತೇ! ಅದರಿಂದ ರನ್ನನ ಕಾವ್ಯಕ್ಕೆ ಕುಂದಣವಿಟ್ಟಂತಾಗಿದೆಯೇ ಹೊರತು ಕುಂದುತನವಿಲ್ಲ. ಅಂತೆಯೇ ರತ್ನಾಕರನ ಕಾವ್ಯವು ವೀರಶೈವ ಪ್ರಭಾವಕ್ಕೊಳಗಾಗಿ ತನ್ನ ವೈಭವವನ್ನು ಹೆಚ್ಚಿಸಿಕೊಂಡಿರುವುದು ಆತನ ಘನತೆಗೊಂದು ಕುರುಹು.

ಮಹಾಕವಿ ರತ್ನಾಕರನಿಗೆ 'ರತ್ನಾಕರವರ್ಣಿ' 'ರತ್ನಾಕರ ಸಿದ್ಧ' 'ರತ್ನಾಕರ ಆರ್ಯ' ಎಂಬ ಪರ್ಯಾಯನಾಮಗಳಿದ್ದರೂ 'ರತ್ನಾಕರ ಸಿದ್ಧ' ಎಂದು ಹೇಳಿಕೊಳ್ಳುತ್ತಾನೆ. ಸಿದ್ಧ ಪದಕ್ಕೆ ಸೋತ, ಸುಸಂಸ್ಕೃತ ಜೀವಿಯಾದ ರತ್ನಾಕರನಿಗೆ, 'ಜನನ ಮರಣವುಳ್ಳ ಜನಕರ ನಾಮವ ಹೇಳಿಕೊಂಡು ಹೆಮ್ಮೆ ಪಡುವುದು

ಸರಿಕಾಣಲಿಲ್ಲ. 'ಶ್ರೀ ಮಂದರಸ್ವಾಮಿ ನನ್ನಯ್ಯ' ಎಂದು ನುಡಿದು ದೇಶಿಗಳಾಗ್ರರ್ ಚಾರುಕೀರ್ತಿ ಆಚಾರ್ಯರಿಂದ ಶ್ರೀಶುಚಿ ದೀಕ್ಷಾಬದ್ಧನಾಗಿ, 'ಮೋಕ್ಷಾಗ್ರ ಗುರು ಹಂಸನಾಥ'ನಿಗೆ ತಲೆಬಾಗುತ್ತ ಆತ್ಮಲೀಲಾರ್ಥವಾಗಿ 'ಭರತೇಶ ವೈಭವ' ಕಾವ್ಯವನ್ನೊರೆದಿದ್ದಾನೆ. ವೈದಿಕ ಹಾಗೂ ವೀರಶೈವ ಧರ್ಮಗಳ ಪ್ರಾಬಲ್ಯದಿಂದ ಜೈನ ಧರ್ಮವು ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿದ್ದ ಸನ್ನಿವೇಶದಲ್ಲಿ, ರತ್ನಾಕರವರ್ಣಿಯು ಭರತೇಶ ವೈಭವವನ್ನು ರಚಿಸಿದ್ದಾನೆ. ಯಾವುದನ್ನು ಜೈನ ಧರ್ಮದಲ್ಲಿ ಲೌಕಿಕ–ಅಲೌಕಿಕ ಎಂಬ ಭಿನ್ನ ಕಾವ್ಯತತ್ವವನ್ನಾಗಿ ರೂಪಿಸಿ ಕೊಳ್ಳಲಾಗಿತ್ತೋ ಅದನ್ನೇ ಈಗ ರತ್ನಾಕರವರ್ಣಿಯು ಯೋಗ–ಭೋಗಗಳ ಸಮನ್ವಯದ ಕಾವ್ಯವನ್ನಾಗಿ ರಚಿಸಿದನು. ದಿಟ, ಜೈನ ಕಾವ್ಯ ಧರ್ಮಕ್ಕೆ ವಿರುದ್ಧವಾದ ಬಗೆಯಲ್ಲಿ ಭರತೇಶ ವೈಭವ ರಚನೆಗೊಂಡಂತೆ ಕಾಣುತ್ತದೆ.

ವೈದಿಕ ಹಾಗೂ ವೀರಶೈವ ಧರ್ಮಗಳಲ್ಲಿ ನೆಲೆಗೊಂಡ ಪ್ರತಿಮೆ ಮತ್ತು ಸಂಕೇತಗಳಿಗೆ ಪ್ರತಿಯಾಗಿ ರೂಪಿಸುವ ಒಳ ಉದ್ದೇಶವೇ ಯೋಗ–ಭೋಗವೆಂಬ ಸಮನ್ವಯದ ಕಲ್ಪನೆಗೆ ಕಾರಣವಾಗಿದೆ. "ಜಿನತತ್ವಂ ಸ್ಮರತತ್ವಂ ದೂರಸ್ಥಂ" ಇದು ಜೈನ ಧರ್ಮದ ಮಹತ್ವದ ತತ್ವ. ಕಾಮವನ್ನು ಗೆಲ್ಲುವುದೇ ಇವರ ಪರಮಸಾಧನೆ. ಅದೇ ರೀತಿ ವೈದಿಕ ಧರ್ಮದಲ್ಲಿಯೂ ಶಿವನು ಕಾಮವನ್ನು ಜಯಿಸಿದ್ದಾನೆ ಎಂಬುದೇ ಜೈನರಿಗೆ ಅಸಹನೆಯನ್ನುಂಟು ಮಾಡಿದೆ. ಕಾಮವನ್ನು ಜಯಿಸುವಲ್ಲಿ ಶಿವನಿಗಿಂತ ಜಿನನೇ ಮೇಲು ಎಂಬುದು ಇವರಿಗೆ ಮುಖ್ಯವಾಯಿತು. ಅದಕ್ಕಾಗಿಯೇ ಶಿವನನ್ನು ಗೆದ್ದ ಕಾಮನು ಜಿನನಿಗೆ ಸೋತನೆಂಬ ಕತೆಯು ಜೈನ ಕಾವ್ಯಗಳಲ್ಲಿ ಪ್ರಸಿದ್ಧಿಗೆ ಬಂತು. ಜಿನನೆಂದರೆ ಗೆಲ್ಲುವವನು ಎಂಬುದು ಜಿನ ಪದದ ಉತ್ಪತ್ತಿ ಹೇಳುತ್ತದೆ.

> ಭೋಗ ವಿಚಾರವು ಬೇಕು ನೃಪತಿಗಾತ್ಮ
> ಯೋಗ ವಿಚಾರವು ಬೇಕು
> ರಾಗ ರಸಿಕನಾಗಬೇಕು ಭಾವಿಸೆ ವೀತ
> ರಾಗ ರಸಿಕನಾಗಬೇಕು

ಭರತೇಶ ವೈಭವವನ್ನು ಜೈನ ಭಾಗವತವೆಂದೂ ಕರೆದಿದ್ದಲ್ಲದೇ, ಧಾರ್ಮಿಕ ಸಾಹಿತ್ಯ, ಭಕ್ತಿ ಸಾಹಿತ್ಯ, ಅನುಭಾವ ಸಾಹಿತ್ಯಗಳೂ ಇದರಲ್ಲಿ ಒಗ್ಗೂಡಿವೆ ಎಂದು ಹಂಪನಾ ಅವರು ವಾದಿಸುತ್ತಾರೆ. ಇವರು ಮುಂದುವರಿದು ಹೇಳುವುದೇನೆಂದರೆ, "ಸ್ಥಿತಪ್ರಜ್ಞತ್ವ ಎಲ್ಲ ಭಾರತೀಯ ದರ್ಶನಗಳ ಕೇಂದ್ರ ಪ್ರಜ್ಞೆ. ಆ ಧರ್ಮ, ಈ ಧರ್ಮ, ಆ ಮತ, ಈ ಮತ ಎಂಬಿತ್ಯಾದಿ ತಾರತಮ್ಯಗಳಿಗೆ ಎಡೆಗೊಡದೆ ಎಲ್ಲ ಮತಧರ್ಮಗಳಿಗೂ ಸಲ್ಲುವಂತ ಧರ್ಮಸಮನ್ವಯ ಸೂತ್ರಗಳಿಂದ ಭರತೇಶ ವೈಭವವನ್ನು ಹೆಣೆದಿರುವುದನ್ನು ಮನಗಾಣಬಹುದು"

(2007). ಹಂಪನಾ ಅವರ ಈ ಹೇಳಿಕೆಯನ್ನು ಸಾಂಸ್ಕೃತಿಕ ರಾಜಕಾರಣದ ನೆಲೆಯಲ್ಲಿರಿಸಿ ನೋಡಿದರೆ, ಅದರ ನೈಜ ನೆಲೆಗಳು ನಿಚ್ಚಳವಾಗಿ ಕಾಣಿಸುತ್ತವೆ. ಸಾಂಸ್ಕೃತಿಕ ಚಹರೆಗಳನ್ನು ರೂಪಿಸುವ ಸ್ವರೂಪದಲ್ಲಿಯೇ ಅನನ್ಯತೆಯ ನಿಲುವುಗಳನ್ನು ಗುರುತಿಸುತ್ತಾರೆ.

ವೈದಿಕ ಹಾಗೂ ವೀರಶೈವ ಧರ್ಮಗಳ ತಾತ್ತ್ವಿಕತೆಗಳೊಂದಿಗೆ ತಳಕು ಹಾಕಿಕೊಂಡಿರುವ ರತ್ನಾಕರವರ್ಣಿಯ ಕಾಲವು ರಾಜಕೀಯ–ಧಾರ್ಮಿಕ–ಸಾಂಸ್ಕೃತಿಕವಾಗಿ ಸಂಕ್ರಮಣದ ಕಾಲವಾಗಿತ್ತೆಂಬುದು ನಿಚ್ಚಳವಾಗಿ ತೋರುತ್ತದೆ. ಲೌಕಿಕ–ಅಲೌಕಿಕಗಳು ಎರಡು ಭಿನ್ನ ಸೂಚಕಗಳಾಗಿದ್ದರೂ, ಅಧಿಕಾರದ ನೆಲೆಯಲ್ಲಿ ಅವುಗಳೆರಡು ಒಂದೇ ಸೂಚಿತ ಎಂಬುದು ಗಮನಾರ್ಹ. ಇನ್ನೊಂದು ದೃಷ್ಟಿಯಿಂದ ಗ್ರಹಿಸಿದರೆ, ಆ ಕಾಲದಲ್ಲಿ ಪ್ರಾಬಲ್ಯವನ್ನು ಹೊಂದಿದ್ದ ವೈದಿಕ ಹಾಗೂ ವೀರಶೈವ ಧರ್ಮಗಳ ಕಾವ್ಯ ತಾತ್ತ್ವಿಕತೆಯೊಂದಿಗೆ ರಾಜಿಮಾಡಿಕೊಂಡಂತೆ ಅನ್ನಿಸುತ್ತೆ.

ವೈದಿಕರಿಗೆ ಮರುಜನ್ಮ ಅವತಾರವಾಗಿ ಕಂಡರೆ, ಜೈನರಿಗೆ ಮರುಜನ್ಮ ಎಂಬುದೊಂದು ಭವಾವಳಿ. ಇದು ಪಾಪದ ಪ್ರಾಯಶ್ಚಿತ್ತಕ್ಕಾಗಿ ಕ್ಷುದ್ರ ಪ್ರಾಣಿಗಳಾದಿಯಾಗಿ ಜನ್ಮತಾಳುತ್ತ ಕೊನೆಗೆ ಮನುಷ್ಯನಾಗಿ ಹುಟ್ಟುತ್ತಾನೆ ಎಂದು ನಂಬುತ್ತಾರೆ. ಜಿನತತ್ವ ಹಾಗೂ ಸನ್ಯಾಸತತ್ವಗಳ ನಡುವಣ ವ್ಯತ್ಯಾಸಕ್ಕೆ ಕಾರಣವೇ ಇದಾಗಿದೆ. ಈ ಧರ್ಮಗಳ ತಾತ್ತ್ವಿಕ ಚೌಕಟ್ಟನ್ನು ಬಿಡಿಸಿ ನೋಡುವುದೆಂದರೆ, ಅವುಗಳ ನಡುವಣ ವ್ಯತ್ಯಾಸವನ್ನೂ ಗುರುತಿಸುವುದೆಂದರ್ಥ. ಯುಗಧರ್ಮ ಕಳೆದಂತೆ, ಧಾರ್ಮಿಕ ಮುಖಾಮುಖಿ, ಪ್ರಭಾವ, ಪ್ರಾಬಲ್ಯಗಳ ಪರಿಣಾಮದಿಂದ ಒಂದು ಇನ್ನೊಂದನ್ನು ಅನುಸರಿಸುವ ನೆಲೆಗಳು 'ಧಾರ್ಮಿಕ ಅನುಸಂಧಾನ'ದ ಸ್ವರೂಪದಲ್ಲಿ ಮುಂಚೂಣಿಗೆ ಬಂದಿರುತ್ತವೆ. ಜಿನತತ್ವ, ವೈದಿಕತತ್ವ ಹಾಗೂ ವೀರಶೈವತತ್ವಗಳ ನಡುವೆ ಸಾಕಷ್ಟು ಸಮಾನತತ್ವಗಳಿರಬಹುದು. ಅಂತೆಯೇ ರತ್ನಾಕರನು ಬದುಕಿದ ಕಾಲದ ಯುಗಧರ್ಮದಲ್ಲೇ ಇದೆ. ಹದಿನಾರನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ವೈಭವದ ಶಿಖರವನ್ನು ಮುಟ್ಟಿ ಕೆಳಕ್ಕೆ ಸರಿದ ಕಾಲದಲ್ಲಿ, ರತ್ನಾಕರನು ಪಶ್ಚಿಮ ಕರಾವಳಿಯ ಮೂಡುಬಿದರೆಯಲ್ಲಿ ಹುಟ್ಟಿ ಬೆಳೆದನು. ವಿಜಯನಗರವು ತನ್ನ ವೈಭವದ ಕಾಲದಲ್ಲಿ "ದಕ್ಷಿಣ ಭಾರತದ ಕನ್ನಡ, ತಮಿಳು, ತೆಲುಗು ಮುಂತಾದ ಎಲ್ಲ ಭಾಷೆಗಳ ಹಾಗೂ ಶೈವ, ವೈಷ್ಣವ, ವೀರಶೈವ, ಜೈನ, ಮುಸ್ಲಿಂ ಮುಂತಾದ ಎಲ್ಲ ಮತಗಳ ಆಶ್ರಯಸ್ಥಾನವಾಯಿತು. ಸಮಗ್ರ ಭಾರತದ ಪೂರ್ವಪರಂಪರೆಯಲ್ಲಿಯ ವೈದಿಕ ಧರ್ಮವನ್ನು ಅದು ಎತ್ತಿಹಿಡಿಯಿತು. ಕನ್ನಡಿಗರ ಸಮನ್ವಯ ಬುದ್ಧಿ ಈ ಕಾಲದಲ್ಲಿ ಕಳಶ ಮುಟ್ಟಿತು." ಹೀಗೆ ರತ್ನಾಕರನಿಗೆ ಹಿನ್ನೆಲೆಯಾಗದೇ ಒಂದು ರೀತಿಯ ಸಮನ್ವಯ ದೃಷ್ಟಿ ಯುಗಮನೋಧರ್ಮದಲ್ಲಿ ಸಿದ್ಧವಾಗಿತ್ತು.

ಇದಕ್ಕಿಂತ ಬೇರೆಯಾದ ಇನ್ನೂ ಒಂದು ಸಂಗತಿಯೆಂದರೆ ರತ್ನಾಕರನಿಗೆ ವೀರಶೈವ ಧರ್ಮದ ಬಗೆಗೆ ಉಂಟಾದ ಸದರ ಮತ್ತು ಅದು ಆತನ ಮೇಲೆ ಉಂಟುಮಾಡಿದ ಪರಿಣಾಮ ವಿಶೇಷ. ರತ್ನಾಕರನ ಕಾಲಕ್ಕೆ ಆಗಲೇ ಕರ್ನಾಟಕದಲ್ಲಿ ಜೈನ ಧರ್ಮವು ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತ್ತು. ಈ ವೇಳೆಗಾಗಲೇ ಅದು ವೀರಶೈವದೊಂದಿಗೆ, ಶ್ರೀ ವೈಷ್ಣವ ಹಾಗೂ ಮಾಧ್ವಮತಗಳೊಂದಿಗೆ ಸೆಣಸಿ, ಸೋತು ನಿಟ್ಟುಸಿರಿಡುವ ಸ್ಥಿತಿಗೆ ಬಂದಿತ್ತು. ಮೊದಲಿನಿಂದಲೂ ಪಶ್ಚಿಮ ಕರಾವಳಿಯಲ್ಲಿ ಅದು ವಿಜಯನಗರದ ಸಾಮಂತ ರಾದ ತೌಳವ ಅರಸರ ಆಶ್ರಯದಲ್ಲಿ ರಕ್ಷಣೆಯನ್ನು ಪಡೆದುಕೊಂಡಿದ್ದರೂ, ವಿಜಯನಗರದ ಪತನಾನಂತರ ಹದಿನಾರನೆಯ ಶತಮಾನದ ಮಧ್ಯಭಾಗದ ವೇಳೆಗೆ ತುಳುನಾಡಿನ ಅರಸರ ಉತ್ತರಾಧಿಕಾರಿಗಳಾಗಿ ಈ ಭಾಗವನ್ನು ಆಳತೊಡಗಿದ ಇಕ್ಕೇರಿಯ ಶೈವ ಮತದ ಅನುಯಾಯಿಗಳಿಂದ ಜೈನರಿಗೆ ಅಳಿವು ಉಳಿವಿನ ಹೋರಾಟವೇ ಆಗಿಹೋಯಿತು. ಉತ್ತರ ಕನ್ನಡ ಜಿಲ್ಲೆಯ ಕೆಲವು ರಾಜಮನೆತನಗಳು ಜೈನ ಧರ್ಮವನ್ನು ಕೈಬಿಟ್ಟು ವೀರಶೈವ ಧರ್ಮವನ್ನು ಅವಲಂಬಿಸಿದುವು. ಅನಂತರ ಎರಡು ಶತಮಾನಗಳಿಗೂ ಮಿಗಿಲಾಗಿ ಪಶ್ಚಿಮ ಕರಾವಳಿಯಲ್ಲಿ ವೀರಶೈವ ಮತವಿದ್ದು ಅನೇಕ ವೀರಶೈವ ಮಠಗಳ ಸ್ಥಾಪನೆಗೆ ಕಾರಣವಾಯಿತು. ಇಂದಿಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಮೂವತ್ತಕ್ಕೂ ಹೆಚ್ಚು ಮಠಗಳನ್ನು (ಅನೇಕ ಕಡೆ ಅವಶೇಷಗಳಿವೆ) ಗುರುತಿಸಬಹುದಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ರತ್ನಾಕರನ ಕಾಲದಲ್ಲಿ ಅವನ ಬದುಕಿದ ಪರಿಸರದಲ್ಲಿ ವೀರಶೈವ ಧರ್ಮವು ತಕ್ಕಷ್ಟು ಪ್ರಭಾವಶಾಲಿಯಾಗಿ ನೆಲೆಗೊಂಡಿತ್ತು ಎಂಬುದು. ರತ್ನಾಕರನ ಕೃತಿಯನ್ನೋದಿದರೆ ಅವನು ಸುತ್ತ ಇದ್ದ ಈ ಒಂದು ಧರ್ಮದ ಪ್ರಭಾವವನ್ನು ಸ್ವೀಕರಿಸಿ, ತನ್ನ ಮತಧರ್ಮವಾದ ಜೈನಧರ್ಮ ದೊಂದಿಗೆ ಅಳವಡಿಸಿಕೊಂಡು ತನ್ನದೇ ಆದ ಧಾರ್ಮಿಕ ದೃಷ್ಟಿಯನ್ನು ರೂಪಿಸಿಕೊಂಡನೆಂದು ಭಾವಿಸಬಹುದಾಗಿದೆ.

ಸಂಪ್ರದಾಯದ ದೃಷ್ಟಿಯಿಂದ ಹೊರತಾದ ಈ ಭೋಗಯೋಗ ಸಮನ್ವಯದ ಭಾವನೆ, ರತ್ನಾಕರನಲ್ಲಿ ಬರಲು ಕಾರಣ ರತ್ನಾಕರನ ಮೇಲೆ ಅಂದು ಆದ ವೀರಶೈವ ಧರ್ಮದ ಪ್ರಭಾವವೂ ಮುಖ್ಯವಾದದ್ದು ಎಂಬ ಮಾತನ್ನು ಇಲ್ಲಿ ಒತ್ತಿ ಹೇಳುತ್ತಿದ್ದೇನೆ. ವೀರಶೈವ ಧರ್ಮ ಪ್ರಾದುರ್ಭಾವವಾದದ್ದೇ ಉಳಿದ ಧರ್ಮಗಳಲ್ಲಿ ಉಂಟಾದ ಅರಕೆಯಿಂದ ಅಸಂತುಷ್ಟರಾದ ಜನದ ಪ್ರಗತಿಗೆ ಎಂಬುದು ಅದರ ಇತಿಹಾಸವನ್ನು ನೋಡಿದರೆ ಗೊತ್ತಾಗುತ್ತದೆ. ವೀರಶೈವ ಧರ್ಮ ಪ್ರಾದುರ್ಭಾವದ ಕಾಲದ ಪರಿಸರ ಇದು; ಅತ್ತ ಕಡೆ ಜೈನ ಧರ್ಮ ಕೇವಲ ಸನ್ಯಾಸ ಧರ್ಮವಾಗಿ, ಲೌಕಿಕ ಭೋಗಗಳನ್ನು ತುಚ್ಛೀಕರಿಸಿ, ದೇಹದಂಡನಾರೂಪವಾದ ತಪೋಮಾರ್ಗವನ್ನು ಎತ್ತಿಹಿಡಿದು

ಕೇವಲ ವೈರಾಗ್ಯವನ್ನು ಸಾರಿ ಹೇಳುತ್ತಿತ್ತು. ಒಂದೆಡೆ ಸನಾತನವಾದ ವೈದಿಕ ಧರ್ಮ ಅದರ ಉತ್ತಮಾಂಶಗಳನ್ನು ಹಿಂದೆ ಸರಿಸಿ, ಕರ್ಮಕಾಂಡಗಳಿಗೆ ಕಟ್ಟುಬಿದ್ದು, ಮೇಲು ಕೀಳುಗಳ ವರ್ಣವ್ಯವಸ್ಥೆಯಿಂದ, ಧರ್ಮವೆಂದರೆ, ಆಧ್ಯಾತ್ಮವೆಂದರೆ ಕೇವಲ ಕೆಲವರ ಸ್ವತ್ತು ಮಾತ್ರ ಎಂಬ ಭಾವನೆಯನ್ನೂ, ಸಾಮಾಜಿಕವಾದ ಅತೃಪ್ತಿಯನ್ನೂ ಉಂಟುಮಾಡಿತ್ತು. ಇದಲ್ಲದೆ ನಿರೀಶ್ವರವಾದಿಗಳಾದ ಚಾರ್ವಾಕರು ಒಂದೆಡೆ, ಶೂನ್ಯವಾದಿಗಳಾದ ಬೌದ್ಧರು ಒಂದೆಡೆ ತಮ್ಮ ತಮ್ಮ ಮತಗಳನ್ನು ಮಂಡಿಸುತ್ತಿದ್ದರು. ಈ ಒಂದು ಗೊಂದಲದಲ್ಲಿ ಯಾವುದನ್ನು ಹಿಡಿಯಲಿ, ಯಾವುದನ್ನು ಬಿಡಲಿ ಎಂಬ ತೊಳಲಾಟದಲ್ಲಿ ಸಿಕ್ಕಿಕೊಂಡಿದ್ದ ಜನತೆಗೆ, ಭೋಗವನ್ನು ನಿರಾಕರಿಸದೆ ಯೋಗವನ್ನು ಸಾಧಿಸುವಂಥ ಒಂದು ಸುವರ್ಣ ಮಾಧ್ಯಮಕ್ಕೆ ಹಾರೈಸುತ್ತಿದ್ದ ಜನತೆಗೆ, ವೈದಿಕ ಧರ್ಮದ ಪರಂಪರೆಯಿಂದಲೇ ಹೊರಬಿದ್ದ ಬಸವಣ್ಣನವರ ನಾಯಕತ್ವದಲ್ಲಿ ನಡೆದ ಧಾರ್ಮಿಕ ಕ್ರಾಂತಿಯಿಂದ ಪ್ರಚಲಿತವಾದ ವೀರಶೈವ ಧರ್ಮ ಒಂದು ಸಂತೃಪ್ತಿಯ ನಿಲುಗಡೆಯಾಗಿ ತೋರಿರಬೇಕು. ಹೀಗಾಗಿ ಯೋಗ–ಭೋಗ ಎರಡನ್ನೂ ಏಕಕಾಲದಲ್ಲಿ ಹೊಂದಿಸಿಕೊಳ್ಳುವ ಒಂದು ನೆಲೆಯನ್ನು ಈ ಧರ್ಮ ಹಾಕಿಕೊಟ್ಟಿತು. ಸಂಸಾರ ದಲ್ಲಿದ್ದೂ ಶಿವಯೋಗವನ್ನು ಸಾಧಿಸಬಹುದೆಂಬುದೇ ಅದರ ಸೂತ್ರ. ಸತಿ–ಪತಿಗಳೊಂದಾಗಿಯೂ ಶಿವಭಕ್ತಿ ಸಾಧ್ಯ ಎಂಬುದೇ ಅದರ ಆಕರ್ಷಣೆ. ಯೋಗಸಾಧನೆಗೆ ಸಂಸಾರವನ್ನು ಬಿಡಬೇಕಾಗಿಲ್ಲ. ಜೀವನವನ್ನು ತಿರಸ್ಕರಿಸ ಬೇಕಾಗಿಲ್ಲ. ದೇಹವನ್ನು ದಂಡಿಸಬೇಕಾಗಿಲ್ಲ. ಈ ಯೋಗ ಕೇವಲ ಪುರುಷನ ಸ್ವತ್ತಲ್ಲ, ಯಾವೊಂದು ಜಾತಿಗೂ ಮೀಸಲಾದದ್ದಲ್ಲ. ಈ ಜಗತ್ತು ದೇವರಿಂದ ಬೇರೆಯಾದುದಲ್ಲ. ಆದ್ದರಿಂದ ಸಂಸಾರದಲ್ಲಿದ್ದುಕೊಂಡೇ ಶಿವಯೋಗವನ್ನು ವ್ಯಕ್ತಿ ಸಾಧಿಸಬಹುದಾದರೆ ಇದಕ್ಕಿಂತ ಬೇರೆಯ ಭೋಗ–ಯೋಗ ಸಮನ್ವಯವೆಂಬುದುಂಟೆ? ಈ ಒಂದು ಸಮನ್ವಯದ ಸಮಾಧಾನವಿದ್ದುದರಿಂದಲೇ ಈ ಧರ್ಮ ಬಹು ಜನಪ್ರಿಯವಾಯಿತು. ಬಹು ದೊಡ್ಡ ಶಕ್ತಿ ಕೇಂದ್ರವಾಯಿತು. ಬಸವಣ್ಣನವರ ಕಾಲದಲ್ಲಿ ನಡೆದ ಮಹಾ ವಿಪ್ಲವದ ನಂತರ ಈ ಧರ್ಮ ದಿಕ್ಕುಪಾಲಾದರೂ, ವಿಜಯನಗರದ ಪತನಾನಂತರ ಅನ್ಯದಾಳಿಗಳಿಗೆ ತುತ್ತಾಗಿ ಹರಿದು ಹಂಚಿಹೋದರೂ, ಅದು ಕರ್ನಾಟಕದ ಬೇರೆಬೇರೆಯ ಭಾಗಗಳಲ್ಲಿ ಹರಡಿ, ನೆಲೆ ನಿಂತು ಕೆಲವು ಆಚಾರ್ಯರುಗಳಿಂದ ಅಲ್ಲಲ್ಲಿ ತನ್ನ ಪುನರುಜ್ಜೀವನ ಹಾಗೂ ಪ್ರಸಾರದಲ್ಲಿ ಸುಭದ್ರವಾಗಿತ್ತು. ರತ್ನಾಕರನ ಕಾಲದಲ್ಲಿಯಂತೂ ಈ ಧರ್ಮ ಅವನ ಪರಿಸರದಲ್ಲಿ ಸಾಕಷ್ಟು ಪ್ರಬಲವಾಗಿ ಬಹು ಜನಪ್ರಿಯವಾಗಿದ್ದು, ವೀರಶೈವ ಧರ್ಮದ ಹಾಗೆ ಇದರಲ್ಲೂ ಯಾತಕ್ಕೆ ಭೋಗ–ಯೋಗದ ಒಂದು ಹೊಂದಿಕೆಯನ್ನು ಅದು ತಂದುಕೊಳ್ಳಬಾರದು ಎಂಬ ಪ್ರಶ್ನೆ

ಉದಯಿಸಿ, ರತ್ನಾಕರನು ಅಂಥ ಭೋಗ–ಯೋಗ ಸಮನ್ವಯದ ದರ್ಶನವನ್ನು ಭರತೇಶನ ಪಾತ್ರದಲ್ಲಿ ರೂಪಿಸಿ, ಅಂದಿನ ಜೈನಧರ್ಮ ತಾಳಿಕೊಳ್ಳಬೇಕಾದ ರೂಪಾಂತರಕ್ಕೆ ತನ್ನ ಆಶಯವನ್ನು ಮತ್ತು ಅಂದಿನ ಜೈನ ಧರ್ಮಕ್ಕೆ ಒಂದು ಸೂಚನೆಯನ್ನು ಕೊಟ್ಟಿರುವನೆಂದು ಭಾವಿಸಿದರೆ ತಪ್ಪಲ್ಲ.

ವೀರಶೈವ ಧರ್ಮದ ಎಷ್ಟೋ ನುಡಿ, ನುಡಿಗಟ್ಟುಗಳೂ, ಪರಿಭಾಷೆಗಳೂ, ವಿಚಾರದ ರೀತಿಗಳೂ ಕಂಡುಬರುವುದು ಸ್ಪಷ್ಟವಾಗಿದೆ. ನಿದರ್ಶನಕ್ಕೆ ಒಂದೆರಡನ್ನು ಸೂಚಿಸಬಹುದು. ವೀರಶೈವ ಸಿದ್ಧಾಂತದಲ್ಲಿ ಮುಖ್ಯವಾದ ಭೋಗಾಂಗ, ಯೋಗಾಂಗ, ತ್ಯಾಗಾಂಗಗಳೆಂಬ ಅಂಗತ್ರಯಗಳನ್ನು ರತ್ನಾಕರ ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾನೆ. 'ಬಳಸಿ ಬ್ರಹ್ಮಚಾರಿ, ಉಂಡುಪವಾಸಿ, ಮಂಡೆ ಬೆಳೆದು ಮನ ಬೋಳಾದ ತಪಸಿ'; 'ಮೊಲೆಯ ಮೇಲಿದ್ದ ಯೋಗಿಗಳುಂಟು', 'ಮಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ' ಎಂಬ ಈ ನುಡಿಗಟ್ಟುಗಳು ವಚನಕಾರರ ಪರಿಭಾಷೆಗಳೇ ಆಗಿರುವುದು ಗಮನಿಸಬೇಕಾದ ಸಂಗತಿ. ದಿವ್ಯ ಧ್ವನಿ ಸಂಧಿಯಲ್ಲಿ ಬರುವ ಮೊದಲ ಪದ್ಯ, 'ಬಯಲ ಪುರುಷ ಬಯಲಾಕಾರ ಬಕ್ಕಟ। ಬಯಲರೂಪನೆ ಬಯಲಾಂಗ॥ ಬಯಲಾಧಾರನೆ ಮತಿ ರೋರು ನಿಚ್ಚ ನಿರ್ವಲಯ' ಎಂಬುದು ಸಂಪೂರ್ಣವಾಗಿ ವೀರಶೈವ ಧರ್ಮದ ಪಾರಿಭಾಷಿಕ ಪದ. ವಚನಕಾರರೆಲ್ಲರೂ ದೇವರ ಅಥವಾ ಐಕ್ಯಸ್ಥಿತಿಗೇರಿದ ಆತ್ಮನ ಸ್ವರೂಪವನ್ನು ಬಣ್ಣಿಸುವಲ್ಲಿ ಇಂಥ ನಿರಾಕಾರ ನಿರ್ದೇಶನದ ಪದವನ್ನು ಬಳಸಿರುವಂತೆ ನಮಗೆ ತೋರುವುದಿಲ್ಲ. ಅಷ್ಟೇ ಅಲ್ಲ, ರತ್ನಾಕರನು ಶಿವನಿಗೂ ಜಿನನಿಗೂ ಅಭೇದವನ್ನು ಕಲ್ಪಿಸಿ ಹೇಳಿರುವ ಪದ್ಯಗಳೂ ಸಾಕಷ್ಟಿವೆ. ಸಮವಸರಣ ಸಂಧಿಯಲ್ಲಿರುವ 164ನೆಯ ಪದ್ಯದಿಂದ 174ನೆಯ ಪದ್ಯದ ತನಕ ಬರುವ ಜಿನವರ್ಣನೆಯಲ್ಲಿ, ಭಾರತೀಯ ಪರಂಪರೆಯಲ್ಲಿ ಭಾವಿತವಾಗಿರುವ ಶಿವಮೂರ್ತಿಯನ್ನೇ ಸಮಾವೇಶಗೊಳಿಸಿದ್ದಾನೆ. ಶಿವಪುರಾಣೋಕ್ತವಾದ ಶಿವನ ಲೀಲೆಯ ಪ್ರತಿಮೆಗಳಿಂದಲೇ ರತ್ನಾಕರನು ಜಿನನನ್ನು ವರ್ಣಿಸಿದ್ದಾನೆ. ಅಷ್ಟೇ ಅಲ್ಲ, ಜೈನವ್ರತ ಮತ್ತು ಶೈವವ್ರತಗಳಿಗೆ ಅಭೇದವನ್ನು ಹೇಳಿದ್ದಾನೆ. ಜಿನಮುಕ್ತಿಗಮನ ಸಂಧಿಯ ಕಡೆಯ ಪದ್ಯದಲ್ಲಿ: 'ಜಿನನೆಂದು ಶಿವನೆಂದು ಪೆಸರೀಶಗುಂಟದು। ಜಿನರಾತ್ರಿ ಶಿವರಾತ್ರಿಯೆಂದು॥' ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ ರತ್ನಾಕರನಿಗೆ ವೀರಶೈವ ಧರ್ಮದ ಬಗ್ಗೆ ಇದ್ದ ಒಲವಿಗೆ, ಜೈನಧರ್ಮ ಮತ್ತು ವೀರಶೈವ ಧರ್ಮ ಎರಡನ್ನೂ ತನ್ನ ಅಂತರಂಗದಲ್ಲಿ ಸಾಮರಸ್ಯಗೊಳಿಸಿಕೊಂಡು ನೋಡುವ ಮನೋಧರ್ಮಕ್ಕೆ ಸಾಕ್ಷಿಯಾಗಿವೆ.

□

# ಸರ್ವಜ್ಞನ ವಚನಗಳಲ್ಲಿ ಆರೋಗ್ಯಶಾಸ್ತ್ರ

(ಮುಂದುವರಿದ ಭಾಗ)

**ವೈದ್ಯರತ್ನ ಡಾ॥ ಸಿ. ಶರತ್‌ಕುಮಾರ್**

**ಕಣ್ಣಿನ ಶಾಸ್ತ್ರ**

ಗಂಗೆಯಲಿ ಹೊಲೆಯಿಲ್ಲ। ಲಿಂಗಕ್ಕೆ ಕಡೆಯಿಲ್ಲ।
ಕಂಗಳಿಗೆ ಬೆಳಕು ಬೇಕಿಲ್ಲ ಸಾಯವಗೆ।
ಸಂಗಡಿಗರಿಲ್ಲ ॥ಸರ್ವಜ್ಞ॥

ಕಣ್ಣುಬೇನೆಯ ಹೊಲ್ಲ। ಹುಣ್ಣಾದ ಮೊಗ ಹೊಲ್ಲ।
ಬಣ್ಣವನು ಬರೆವ ಸತಿ ಹೊಲ್ಲ ಕುಲಹೀನ।
ಹೆಣ್ಣುತರ ಹೊಲ್ಲ ॥ಸರ್ವಜ್ಞ॥

ಕಣ್ಣುಗಳು ಇಳಿಯುವವು। ಬಣ್ಣಗಳು ಅಳಿಯುವವು।
ಹುಣ್ಣಿಮೆ ಹೋದ ಶಶಿಯಂತೆ ಅಶನವನು।
ಉಣ್ಣದವನು ನೋಡಾ ॥ಸರ್ವಜ್ಞ॥

ಪ್ರಾಸವಿಲ್ಲದ ಪದವ। ತಾಸು ಹಾಡಿದರೇನು।
ಸಾಸುವೆ ಎಣ್ಣೆ ಹದ ಮಾಡಿ ಕಣ್ಣನು।
ಪೂಸಿಕೊಂಡಂತೆ ॥ಸರ್ವಜ್ಞ॥

ಕಣ್ಣಿನಿಂದಲೆ ಪುಣ್ಯ। ಕಣ್ಣಿನಿಂದಲೆ ಪಾಪ।
ಕಣ್ಣಿನಿಂದಿಹವು ಪರವಕ್ಕು, ಲೋಕಕ್ಕೆ
ಕಣ್ಣೆ ಕಾರಣವು ॥ಸರ್ವಜ್ಞ॥

ಕಂಗಳಿಗೆ ಬೆಳಕು ಸರ್ವಜ್ಞನ ವೈಜ್ಞಾನಿಕ ದೃಷ್ಟಿ ಇಲ್ಲಿ ಸೂಚ್ಯ. ಯಾವುದಾದರೊಂದು ವಸ್ತು ಗೋಚರಿಸಬೇಕಾದರೆ ಕಂಗಳ ಹತ್ತಿರ ಬೆಳಕು ಇರುವುದಕ್ಕಿಂತ ವಸ್ತುವಿನ ಮೇಲೆ ಬೆಳಕು ಇದ್ದಾಗ ಮಾತ್ರ ಗೋಚರಿಸುತ್ತದೆ. ನಾವು ಬೆಳಕಿನಲ್ಲಿ ನಿಂತು ಕತ್ತಲಿನಲ್ಲಿರುವುದನ್ನು ಕಾಣಲಾಗುವುದಿಲ್ಲ. ಬೇಕಾದರೆ ಕತ್ತಲಿನಲ್ಲಿ ನಾವಿದ್ದು ಬೆಳಕಿನಲ್ಲಿರುವ ವಸ್ತುಗಳನ್ನು ಕಾಣಬಹುದು.

ಕಣ್ಣಿನ ನೋವು ಎಂತಹ ವೇದನಾಮಯ ಎಂಬುದು ಅನುಭವವೇದ್ಯ, ಕಣ್ಣು ದೇಹದಲ್ಲಿನ ಸೂಕ್ಷ್ಮಾತಿಸೂಕ್ಷ್ಮ ಅಂಗ. ಅದಕ್ಕೆ ಒಂದು ಸಣ್ಣ ಧೂಳು ಕಣ ಬಿದ್ದರೂ ಸಹ ಬಹಳ ಬಾಧೆಯಾಗುತ್ತದೆ.

ಕಣ್ಣುನೋವು ಕೆಲವೊಮ್ಮೆ ಸೋಂಕಿನಿಂದ ಆಗುತ್ತದೆ. ಮುಖದಲ್ಲಿ ಹುಣ್ಣುಗಳು (ಮೊಡವೆಗಳು) ಹೇಗೆ ಮುಖದ ಅಂದವನ್ನು ಹಾಳುಮಾಡುತ್ತವೆಯೋ ಹಾಗೆ ಕಣ್ಣಿನ ನೋವಿನಿಂದ ಕಣ್ಣು ಕೆಂಪಾಗಿ ಊದಿಕೊಳ್ಳುತ್ತದೆ. ಕಣ್ಣಿನಿಂದ ನೀರು, ಕೀವು ಸುರಿಯುತ್ತವೆ. ಇದಕ್ಕೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಕಣ್ಣನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಗಬಹುದು.

ಆದುದರಿಂದ ಕಣ್ಣುನೋವನ್ನು ನಿರ್ಲಕ್ಷಿಸಬಾರದು. ಕಣ್ಣುಗಳು ದೇಹದ ಕನ್ನಡಿ. ದೇಹದಲ್ಲಿನ ರಕ್ತದ ಪ್ರಮಾಣವನ್ನು ಆರೋಗ್ಯದ ಮಟ್ಟವನ್ನು ಸೂಚಿಸುತ್ತವೆ. ಅಪೌಷ್ಟಿಕತೆಯಿಂದ ಕಣ್ಣಿನಿಂದ ನರಗಳ ನಿಶ್ಯಕ್ತಿಯಿಂದ ಕಣ್ಣಿನ ಸುತ್ತ ವರ್ತುಲಗಳು ಉಂಟಾಗಿ ಕಣ್ಣುಗಳು ಒಳಹೋದಂತೆ ತೇಜೋಹೀನವಾಗುತ್ತದೆ.

ಇದರಿಂದಾಗಿ ಕಣ್ಣಿನ ಕಾಂತಿ ಕಳೆದುಹೋಗಿ ಸೌಂದರ್ಯ ಹಾಳಾಗುತ್ತದೆ. ವಿಟಮಿನ್ 'ಎ' ಮತ್ತು 'ಇ'ಗಳ ಕೊರತೆಯಿಂದಾಗಿ ಇದು ಉಂಟಾಗುತ್ತದೆ. ಇದನ್ನು ಸರ್ವಜ್ಞ ಕವಿ ಅಂದೇ ಕಂಡುಕೊಂಡಿದ್ದನು. ಕಣ್ಣಿನ ಬಗ್ಗೆ ಸ್ವಯಂ ಚಿಕಿತ್ಸೆ ಖಂಡಿತಾ ಕೂಡದು. ಪ್ರಾಸವಿಲ್ಲದ ಹಾಡಿನಂತೆ ಉಪಯೋಗವಿಲ್ಲದ ಸಾಸಿವೆ ಎಣ್ಣೆ ಕಣ್ಣಿಗೆ ಹಾಕಿಕೊಂಡಂತೆ ಆಗುತ್ತದೆ ಎಂದು ಕವಿ ಹೇಳಿದ್ದಾನೆ.

> ಲೋಚನಾಂಜನಕಿಂಬ । ಕಾಚು ವೀಳೆಯಕಿಂಬು ।
> ಕೂಚುಗಳು ಇಂಬು ಮಾಳಿಗೆಗೆ ಭಕ್ತಗೈ ।
> ದಾಚಾರವಿಂಬು ॥ಸರ್ವಜ್ಞ॥

ಲೋಚನಾಂಜನಕಿಂಬು.... ಕಣ್ಣಿಗೆ ಕಾಡಿಗೆ ಹಚ್ಚುವುದರಿಂದ (ಅದರಲ್ಲಿಯೂ ಹೆಣ್ಣುಮಕ್ಕಳಿಗೆ) ಕಣ್ಣುಗಳ ಸೌಂದರ್ಯ ಅರಳುತ್ತದೆ. ವಿಶಾಲಾಕ್ಷಿ, ಕಮಲದಳಾಯತಾಕ್ಷಿ, ಕಮಲಾಕ್ಷಿ ಇತ್ಯಾದಿಯಾಗಿ ಹೂವಿನಂತೆ, ಹೂವಿನ ದಳದಂತೆ, ಕೊಳದಂತೆ, ಎಲೆಯಂತೆ ಅವರವರ ರಸಿಕತೆಯ ಕಣ್ಣುಗಳಿಗೆ ಹೆಣ್ಣಿನ ಕಾಡಿಗೆ ಹಚ್ಚಿದ ಕಣ್ಣುಗಳು ಹಲವಾರು ತೆರನಾಗಿ ಕಾಣಬರುತ್ತವೆ.

ಕಾಡಿಗೆ ಹಚ್ಚುವುದರಿಂದ ಕಣ್ಣುಗಳ ಸೌಂದರ್ಯ ಹೆಚ್ಚುವುದಷ್ಟೇ ಅಲ್ಲ, ಕಾಡಿಗೆ ಹಚ್ಚುವುದರಿಂದ ಕಣ್ಣುಗಳಿಗೆ ತಂಪಿನ ಅನುಭವವಾಗುತ್ತದೆ. ಕಣ್ಣಿನ ರೆಪ್ಪೆಯ ಕೂದಲಿನ ಬುಡಕ್ಕೆ ಪೋಷಣೆಯಾಗುತ್ತದೆ. ಪ್ರತಿಬಾರಿ ಕಾಡಿಗೆ ಹಚ್ಚುವಾಗ ಬೆರಳನ್ನು ಕಣ್ಣಿನ ರೆಪ್ಪೆಯ ಹೊರಭಾಗಗಳಿಗೆ ಮೃದುವಾಗಿ ತೀಡುವುದರಿಂದ ಕಣ್ಣುಗಳು ವಿಶಾಲವಾಗುತ್ತವೆ ಹಾಗೂ ಮಸಾಜ್ ಮಾಡಿದಂತಾಗುತ್ತವೆ. ಆದರೆ ಇದನ್ನು ಇಂದಿನ ಆಧುನಿಕ ವೈದ್ಯಶಾಸ್ತ್ರ ಒಪ್ಪುವುದಿಲ್ಲ. ಕಾರಣ ಕಾಡಿಗೆ ಇಂಗಾಲ (ಕಾರ್ಬನ್) ಎಂದಿರಬಹುದು.

ಆಯುರ್ವೇದ ವೈದ್ಯಶಾಸ್ತ್ರದಲ್ಲಿ ಇದಕ್ಕೆ ಪುರಸ್ಕಾರವಿದೆ. ಶಾಸ್ತ್ರೀಯ ರೀತಿಯಲ್ಲಿ ಒಳ್ಳೆಯ ನಂದಿಬಟ್ಟಲು ಹೂ ಅಥವಾ ಇತರ ಸೊಪ್ಪಿನ ರಸವನ್ನು ಶುದ್ಧವಾದ

ಹತ್ತಿಯಲ್ಲಿ ದಿನವೂ ನೆನಸಿ ಮುಂಜಾನೆಯ ಇಬ್ಬನಿಗೆ ತೋಯಲು ಬಿಟ್ಟು ಸಾಕಷ್ಟು ರಸ ಹತ್ತಿಯಲ್ಲಿ ಕೂಡಿದ ನಂತರ ಹರಳೆಣ್ಣೆಯ ದೀಪಕ್ಕೆ ಬತ್ತಿಯಂತೆ ಮಾಡಿ ಶುದ್ಧವಾದ ಹೆಂಚು ಅಥವಾ ಕಂಚಿನ ತಟ್ಟೆಗೆ ಅದರ ಮಸಿ ಗೂಡುಗೂಡಾಗಿ ಕಟ್ಟುವಂತೆ ಮಾಡಲು ಸುತ್ತಲೂ ಗಾಳಿಯಾಡದಂತೆ ಕತ್ತಲು ಮಾಡಿರುತ್ತಾರೆ.

ಇಂತಹ ಮಸಿಗೆ ಬೆಣ್ಣೆ ಅಥವಾ ಹರಳೆಣ್ಣೆ ಬೆರೆಸಿ ಇಡುತ್ತಾರೆ. ಇಂತಹ ಕಾಡಿಗೆ ಹಿಂದಿನಿಂದಲೂ ಬಳಕೆಯಲ್ಲಿದೆ. ಆದರೆ ಇಂದಿನ ಆಧುನಿಕ ಕಣ್ಣುಗಳ ಸೌಂದರ್ಯವರ್ಧಕಗಳಾದ ಐ ಲೈನರ್, ಐ ಶ್ಯಾಡೋ, ಮಸ್ಕರಾ, ಕೂಲ್ಜಾಜಲ್‌ಗಳ ಉಪಯೋಗದಿಂದ ಅದರಲ್ಲಿನ ರಾಸಾಯನಿಕಗಳು ಕಣ್ಣಿನ ಮೇಲೆ ಕಣ್ಣುರೆಪ್ಪೆಯ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳನ್ನೂ ಬೀರುತ್ತದೆ.

ಸರ್ವಜ್ಞನ ವಚನಗಳಲ್ಲಿ ಆರೋಗ್ಯ ವಿಚಾರಧಾರೆ ಕಣ್ಣುಗಳು ಮಾನವನಿಗೆ ಅತ್ಯಮೂಲ್ಯ ಆಸ್ತಿ. ಆರೋಗ್ಯವಂತ ಕಣ್ಣುಗಳು ನಮ್ಮ ಪುಣ್ಯದ ಫಲಗಳು. ಇದು ಅನುವಂಶೀಯವಾಗಿ ಬರುವಂತಹುದು. ಕೆಲವೊಮ್ಮೆ ನ್ಯೂನತೆಗಳೂ ಅಪೌಷ್ಟಿಕತೆ ಶಿಶುವಿನ ಗರ್ಭಾವಸ್ಥೆಯ ಮೇಲೆ ಗಾಳಿ ಬೆಳಕುಗಳಿಗೆ ಹೊಂದಿಕೊಂಡು ದೃಷ್ಟಿಸುವುದನ್ನೂ ಮಗು ಆರಂಭಿಸುತ್ತದೆ.

ಆರೋಗ್ಯವಂತ ಕಣ್ಣುಗಳಿಂದ ಸುಂದರವಾದ ಪ್ರಪಂಚದ ರಮ್ಯತೆಯನ್ನೂ ವೀಕ್ಷಿಸಬಹುದು. ಕಣ್ಣಿಲ್ಲದ ಜೀವನ ಅಪರಿಪೂರ್ಣ ಹಾಗೂ ಸದಾ ಪರಾಧೀನವಾಗಿಯೆ ಬದುಕಬೇಕಾದ ಅಸಹಾಯಕತೆ ಉಂಟಾಗುತ್ತದೆ. ವೈಯಕ್ತಿಕವಾದ ದೈನಂದಿನ ಕೆಲಸಗಳಿಗಾಗಿ ಸಹ ಕುಟುಂಬದವರನ್ನು ಆಶ್ರಯಿಸಬೇಕಾಗುತ್ತದೆ.

ಇದು ಅವರ ಕುಟುಂಬದವರ ಮನೋಧರ್ಮ, ಜಾಣ್ಮೆ, ಅನುಕಂಪ ಮತ್ತು ದೂರದರ್ಶಿತ್ವವನ್ನೂ ಅವಲಂಬಿಸಿರುತ್ತದೆ. ಇಂತಹ ಸಮಸ್ಯೆ ಇರುವವರಿಗೆ ಅವರ ಕುಟುಂಬದವರು ಮನೆಯ ಸ್ಥಳ ಪರಿಚಯ, ಬಳಸುವ ಪದಾರ್ಥಗಳ ಇರುವಿಕೆ, ಬಳಸುವಿಕೆ ಇದನ್ನು ಸ್ಪರ್ಶ ನಡಿಗೆಯಿಂದ ಪರಿಚಯಿಸಿಕೊಟ್ಟರೆ ತಪ್ಪಾಗುವುದಿಲ್ಲ. ಕಣ್ಣುಗಳು ಮಾನವನ ಅಮೂಲ್ಯ ಆಸ್ತಿ. ಆರೋಗ್ಯವಂತ ಕಣ್ಣುಗಳು ನಮ್ಮ ಪುಣ್ಯದ ಫಲಗಳು. ಕಣ್ಣುಗಳು ಮಗು ಗರ್ಭಾವಸ್ಥೆಯಲ್ಲಿರುವಾಗಲೇ ಕ್ರಿಯಾಶೀಲವಾಗಿರುತ್ತವೆ. ನಂತರ ಮಾನವನ ಅಂತ್ಯದಲ್ಲಿಯೂ ಸಹ ಕಣ್ಣಿನ ಉಪಯೋಗವಿದೆ. ಕಣ್ಣಿಲ್ಲದವರು ಇಂತಹವರ ಕಣ್ಣಿಂದ ಹೊಸ ಜೀವನ ಪಡೆಯುತ್ತಾರೆ.

ಈ ಭೂಮಿ ಒಂದು ಸುಂದರವಾದ ಕಲಾಕೃತಿ. ಇದರ ರಮ್ಯತೆಯನ್ನು ಅವರೂ ಸಹ ಕಣ್ಣಾರೆ ಕಂಡು ಅನುಭವಿಸಬಹುದು.

(ಮುಂದುವರಿಯುವುದು)

# ಅಷ್ಟಾವರಣಗಳು

(ಮುಂದುವರಿದ ಭಾಗ)

**ಡಾ. ಬಸವರಾಜ ಸಬರದ**

**4. ಪಾದೋದಕ**

ಪಾದ ಮತ್ತು ಉದಕ ಈ ಎರಡೂ ಪದಗಳು ಸಂಯೋಜನೆಗೊಂಡು ಪಾದೋದಕವಾಗಿದೆ. ಅತ್ಯಂತ ಪ್ರಾಚೀನವಾದ ಶೈವಧರ್ಮದಲ್ಲಿಯೂ ಪಾದೋದಕದ ಪ್ರಸ್ತಾಪವಿದೆ. ಆದರೆ ಬಸವಾದಿ ಶರಣರು ಪಾದೋದಕವನ್ನು ಕಂಡುಕೊಂಡ ರೀತಿ ತುಂಬ ವಿಶಿಷ್ಟವಾದುದಾಗಿದೆ. ಗುರುವಿನ ಪಾದವ ತೊಳೆದು ಕುಡಿಯುವ ಉದಕಕ್ಕೆ ಪಾದೋದಕವೆಂದು ಹಾಗೂ ಸ್ಥಾವರಲಿಂಗ ಪೂಜಿಸುವಾಗ ಆ ಲಿಂಗದ ಮೇಲೆ ಉದಕವನೆರೆದು, ಅದರ ಬುಡದಲ್ಲಿ ಹರಿದುಬರುವ ಉದಕವೇ ಪಾದೋದಕವೆಂದು ಹಲವಾರು ವಿದ್ವಾಂಸರು, ಗುರುಪರಂಪರೆಯವರು ಹೇಳಿದ್ದಾರೆ. ಆದರೆ ಲಿಂಗಾಯತ ಧರ್ಮದಲ್ಲಿ ಪಾದೋದಕವೆಂದರೆ ವಿಶಿಷ್ಟ ಅರ್ಥವಿದೆ.

ನೀರಿಗೆ ಸಂಸ್ಕಾರ ನೀಡಿದಾಗ ಅದು ಪಾದೋದಕವಾಗುತ್ತದೆ. ನೀರು ಶುದ್ಧೀಕರಣಗೊಂಡಾಗ, ಸ್ವಚ್ಛವಾದಾಗ ಪಾದೋದಕವಾಗುತ್ತದೆ. ಸ್ಥಾವರಲಿಂಗ ವನ್ನು ತೊಳೆದ ನೀರಾಗಲಿ, ಗುರುವಿನ ಪಾದವನ್ನು ತೊಳೆದ ನೀರಾಗಲಿ ಪಾದೋದಕವಾಗುವುದಿಲ್ಲ. ಇದಕ್ಕೆ ಬಸವಣ್ಣನವರ ಒಂದು ವಚನವನ್ನಿಲ್ಲಿ ಉದಾಹರಿಸಬಹುದು.



> ತ್ರಿವಿಧೋದಕದ ವಿವರವೆಂತೆಂದಡೆ;
> ಲಿಂಗೋದಕ, ಪಾದೋದಕ, ಪ್ರಸಾದೋದಕ–
> ಲಿಂಗೋದಕವೆಂಬುದು ಶಿವಮಂತ್ರ ಸಂಸ್ಕಾರದಿಂದಾದುದು
> ಪಾದೋದಕವೆಂಬುದು ಲಿಂಗಕ್ಕೆ ಆರೋಗಣೆಯ ಮಾಡಿಸಿದುದು.....
> –ಬಸವಣ್ಣ (ಸ.ವ.ಸಂ. 1, ವ: 1221)

ಬಸವಣ್ಣ ಇಲ್ಲಿ ಮೂರು ರೀತಿ ಉದಕಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಲಿಂಗೋದಕವೆಂಬುದು ಶಿವಮಂತ್ರ ಸಂಸ್ಕಾರದಿಂದಾದರೆ, ಪಾದೋದಕ

ವೆಂಬುದು ತನ್ನ ಇಷ್ಟಲಿಂಗಕ್ಕೆ ಮಜ್ಜನವೆರೆದುದೇ ಆಗಿದೆ. ಪ್ರಸಾದೋದಕ ವೆಂಬುದು ಲಿಂಗಕ್ಕೆ ಆರೋಗಣೆಯನ್ನು ಮಾಡಿಸಿರುವುದಾಗಿದೆ. ಇಷ್ಟಲಿಂಗದ ಮೂಲಕ ಸಂಸ್ಕಾರಗೊಂಡ ಉದಕವೇ ಪಾದೋದಕವಾಗಿದೆ.

ಬ್ರಹ್ಮನ ನುಡಿಯಲ್ಲಿ ಪರುಷವಿದ್ದರೆ, ವಿಷ್ಣುವಿನ ನಯನದಲ್ಲಿ ಪರುಷಗುಣ ವಿದೆ. ಅದೇ ರೀತಿ ರುದ್ರನ ಹಸ್ತ ಪರುಷವಾದರೆ, ಕೂಡಲಸಂಗನ ಶರಣರ ಪಾದವೇ ಪರುಷವಾಗಿದೆಯೆಂದು ಬಸವಣ್ಣ ಇನ್ನೊಂದು ವಚನದಲ್ಲಿ ಹೇಳಿದ್ದಾರೆ (ನೋಡಿ: ವ: 876). ಶರಣರ ಪಾದವೇ ಪರುಷವಾಗುವುದೆಂದರೆ ಶರಣರ ಎಲ್ಲ ಅಂಗಾಂಗಗಳಲ್ಲಿಯೂ ಪರುಷಗುಣವಿದೆಯೆಂದು ಅರ್ಥವಾಗುತ್ತದೆ. ಈ ದೇಹವೆಂಬ ದೇವಾಲಯ ನಿಂತಿರುವುದೇ ಪಾದದ ಮೇಲೆ, ಇಂತಹ ಪಾದದಲ್ಲಿ ಪರುಷಗುಣವಿದೆಯೆಂದರೆ, ಅದು ಇಡೀ ದೇಹದಲ್ಲಿಯೇ ಪರುಷಗುಣವಿದೆಯೆಂದು ಅರ್ಥವಾಗುತ್ತದೆ. ಬ್ರಹ್ಮ-ವಿಷ್ಣು-ರುದ್ರರಿಗೆ ಒಂದೊಂದು ಅಂಗದಲ್ಲಿ ಪರುಷಗುಣವಿದ್ದರೆ, ಶರಣರ ಪ್ರತಿಯೊಂದು ಅಂಗವೂ ಪರುಷಗುಣದಿಂದ ಕೂಡಿದೆ. ಹೀಗೆ ಇಡೀ ದೇಹವೇ ಪರುಷವಾದಾಗ ಅದು ದೇವಾಲಯವಾಗುತ್ತದೆ. ಶರಣರು ಪ್ರತಿಪಾದಿಸಿದ ಇಂತಹ ತತ್ವಗಳು ತುಂಬ ವೈಜ್ಞಾನಿಕವಾಗಿವೆ.

> ಸೂಳೆ ಮುತ್ತು ಗೊರವಿತಿಯಾದಂತೆ, ಬಂಟೆ ಮುತ್ತು ಬಾಗಿಲಕಾಯ್ದಂತೆ,
> ನರಿ ಮುತ್ತು ಬಳ್ಳಾದಂತೆ, ಹಾವು ಮುತ್ತು ಸಿಂಗಿಯಾದಂತೆ!
> ಎಲ್ಲ ದೇವರಿಗೆ ಮಸ್ತಕಪೂಜೆ, ಜಂಗಮ ದೇವರಿಗೆ ಪಾದಪೂಜೆ
> ಪಾದೋದಕ ಪ್ರಸಾದವ ಕೊಡುವ ಜಂಗಮ ದೇವರು,
> ಕಂಠಪವಾಡ, ಧೂಳಪವಾಡ, ಸರ್ವಾಂಗಪವಾಡ ಶೀಲಸಂಬಂಧವೆಂದಡೆ
> ಕೇಸರಿ ಶುಕನಾದಂತೆ ಕಾಣಾ ಗುಹೇಶ್ವರಾ.
>
> –ಅಲ್ಲಮಪ್ರಭು (ಸ.ವ.ಸಂ. 2, ವ: 1359)

ಈ ವಚನದಲ್ಲಿ ಅಲ್ಲಮಪ್ರಭು ಪಾದೋದಕ–ಪ್ರಸಾದಗಳ ಬಗೆಗೆ ಮಹತ್ವದ ಮಾತನ್ನು ಹೇಳಿದ್ದಾರೆ. ಎಲ್ಲ ದೇವರುಗಳಿಗೆ ಮಸ್ತಕಪೂಜೆ, ಜಂಗಮದೇವರಿಗೆ ಪಾದಪೂಜೆಯೆಂಬುದು ಬಹು ಮಹತ್ವದ ನುಡಿಯಾಗಿದೆ. ಜಂಗಮದೇವರೆದುರು ಯಾವ ದೇವರೂ ಇಲ್ಲ. ಹಾಗೊಂದು ವೇಳೆ ನಂಬಿದರೆ, ಅದು ಕೇಸರಿ (ಸಿಂಹ), ಶುನಕವಾದಂತೆ (ನಾಯಿ) ಎಂದು ತಿಳಿಸಿದ್ದಾರೆ. ಇಲ್ಲಿ ಬಳಸಿರುವ ಜಂಗಮ ಪದದ ಅರ್ಥ ಅನುಭಾವವಾಗಿದೆ, ಚಲನಶೀಲ ಶಕ್ತಿಯಾಗಿದೆ. ಇದೇ ನಿಜವಾದ ದೇವರು, ಇಂತಹ ಬೆಳಕನ್ನು–ಜ್ಞಾನವನ್ನು ದೇವರೆಂದು ಪೂಜಿಸುವ ಶರಣರು ಪಾದೋದಕ–ಪ್ರಸಾದಗಳ ಬಗೆಗೆ ಹೊಸ ವ್ಯಾಖ್ಯಾನ ನೀಡಿದ್ದಾರೆ.

ಕರುಣ ಜಲವೆ ಗುರುಪಾದೋದಕ,
ವಿನಯ ಜಲವೆ ಲಿಂಗಪಾದೋದಕ,
ಸಮತಾಜಲವೆ ಜಂಗಮಪಾದೋದಕ,
–ಚೆನ್ನಬಸವಣ್ಣ (ಸ.ವ.ಸಂ. 3, ವ: 1128)

ಈ ವಚನದಲ್ಲಿ ಚೆನ್ನಬಸವಣ್ಣನವರು ಮಹತ್ವದ ವಿಚಾರವನ್ನು ತಿಳಿಸಿದ್ದಾರೆ. ಗುರುಪಾದೋದಕವೆಂದರೆ ಗುರುವಿನ ಪಾದ ತೊಳೆದ ನೀರೆಂದು ಇತರ ಧರ್ಮಗಳು ಹೇಳಿದರೆ, ಗುರುವಿನ ಕರುಣೆಯೇ ಗುರುಪಾದೋದಕ ವೆಂದು ಚೆನ್ನಬಸವಣ್ಣ ಹೇಳಿದ್ದಾರೆ. ಅದೇ ರೀತಿ ವಿನಯ, ಲಿಂಗಪಾದೋದಕ ಮತ್ತು ಸಮತಾಜಲವೇ ಜಂಗಮಪಾದೋದಕವಾಗಿದೆ. ಇವೆಲ್ಲಾ ಲಿಂಗಾಯತ ಧರ್ಮದ ಮಹತ್ವವನ್ನು ಹೆಚ್ಚಿಸಿವೆ. ಕರುಣೆ, ವಿನಯ, ಸಮಾನತೆಗಳೇ ಕ್ರಮವಾಗಿ ಗುರು, ಲಿಂಗ, ಜಂಗಮಗಳಾಗುವುವೆಂದು ಹೇಳಿರುವ ಮಾತು ಅತ್ಯಂತ ಪ್ರಮುಖವಾದದ್ದಾಗಿದೆ. ಈ ತ್ರಿವಿಧೋದಕವು ಕೇವಲ ಧಾರ್ಮಿಕ ಪರಿಭಾಷೆಯಾಗಿರದೆ, ಇದು ಶರಣರ ಸಾಮಾಜಿಕ ಸಿದ್ಧಾಂತವಾಗಿದೆ. ಹೀಗಾಗಿ ಲಿಂಗಾಯತ ಧರ್ಮದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕವೆಂಬ ವಿಂಗಡೆಯಿಲ್ಲ. ಇಲ್ಲಿ ಧಾರ್ಮಿಕವೇ ಸಾಮಾಜಿಕವಾಗಿದೆ, ಇಹವೇ ಪರವಾಗಿದೆ. ಇಲ್ಲಿಯದೇ ಅಲ್ಲಿಯದಾಗಿದೆ. ಹೀಗೆ ಧಾರ್ಮಿಕ–ಸಾಮಾಜಿಕಗಳಲ್ಲಿ ಸಮನ್ವಯ ಸಾಧಿಸಿದ ಏಕೈಕ ಧರ್ಮ ಲಿಂಗಾಯತ ಧರ್ಮವಾಗಿದೆ.

ಪಾದೋದಕವು ಲಿಂಗದ ಮೇಲೆ ಎಂದಲ್ಲಿ ಜಂಗಮ ಘನವಾಯಿತ್ತು
ಆ ಲಿಂಗೋದಕ ಸ್ವೀಕರಿಸಿದಲ್ಲಿ ಜಂಗಮಕ್ಕೆ ಲಿಂಗ ಘನವಾಯಿತ್ತು
ಲಿಂಗದ ಕಳೆಯೇ ಜಂಗಮ, ಜಂಗಮದ ಕಳೆಯೇ ಲಿಂಗ
ಆವುದು ಘನವೆಂಬೆ? ಆವುದು ಕಿರಿದೆಂಬೆ?
ಲಿಂಗ–ಜಂಗಮ ನೇತ್ರದಲ್ಲಿಯ ಪ್ರಕಾಶದಂತೆ ತಿಳಿದೆ ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನಾ
–ಸಿದ್ಧರಾಮ (ಸ.ವ.ಸಂ. 4, ವ: 569)

ಈ ವಚನದಲ್ಲಿ ಶಿವಯೋಗಿ ಸಿದ್ಧರಾಮನು ಲಿಂಗದ ಕಳೆಯೇ ಜಂಗಮ, ಜಂಗಮದ ಕಳೆಯೇ ಲಿಂಗವೆಂದು ಹೇಳುತ್ತ, ಲಿಂಗ–ಜಂಗಮಗಳು ನೋಡಲು ಎರಡಾಗಿವೆಯೇ ಹೊರತು ತಿಳಿದು ನೋಡಿದಾಗ ಅವು ಒಂದೇ ಆಗಿವೆಯೆಂಬ ಸತ್ಯವನ್ನು ಈ ವಚನದಲ್ಲಿ ಹೇಳಿದ್ದಾರೆ. ಪಾದೋದಕವೆಂಬುದು ಪರಮಾತ್ಮನ ಚಿದ್ರೂಪು ಆಗಿದೆ. ಅದೇ ಮೋಕ್ಷದ ಮಾರ್ಗವಾಗಿದೆ, ಎಲ್ಲ ಪಾಪದ ಕೇಡುಗಳನ್ನು ಅದು ದೂರಮಾಡುತ್ತದೆಯೆಂದು ಇನ್ನೊಂದು ವಚನದಲ್ಲಿ ಹೇಳಿರುವ (ವ. 570) ಅವರು, ಪಾದೋದಕವೆಂಬುದು, ತೊಳೆದು ಕುಡಿಯುವ ಉದಕವಾಗಿರದೆ ಅದು ದೇವರ ಮಹಿಮೆಯೇ ಆಗಿದೆಯೆಂದು ತಿಳಿಸಿದ್ದಾರೆ.

ಪಾದದಲ್ಲಿ ಪಾದೋದಕ
ಆ ಪಾದತೀರ್ಥವನು ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬ
ಇಚ್ಛೆ ಹುಟ್ಟಿದಲ್ಲಿ ಲಿಂಗೋದಕ
ಮಜ್ಜನದಲ್ಲಿ ಮಜ್ಜನೋದಕ......

–ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ (ಸ.ವ.ಸಂ. 5, ವ. 784)

ಈ ವಚನದಲ್ಲಿ ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮನು, ದಶವಿಧದ ಪಾದೋದಕಗಳನ್ನು ಹೆಸರಿಸಿದ್ದಾರೆ. ಆದರೆ ಈ ಎಲ್ಲ ಪಾದೋದಕಗಳು ತನ್ನಂತರಂಗದಲ್ಲಿಯೇ ಇವೆಯೆಂದು ಹೇಳಿದ್ದಾರೆ. ಹೀಗೆ ಶರಣರು ಅರ್ಥೈಸಿದ ಪಾದೋದಕ ವಿಶಿಷ್ಟವಾದುದಾಗಿದೆ.

**ಪ್ರಸಾದ**

"ಪ್ರಸಾದ" ಪದವು ಅನೇಕ ಧಾರ್ಮಿಕಾಚರಣೆಗಳಲ್ಲಿ ಬಳಕೆಯಲ್ಲಿದೆ. ಆದರೆ ಲಿಂಗಾಯತ ಧರ್ಮದಲ್ಲಿ ಪ್ರಸಾದದ ಪರಿಕಲ್ಪನೆ ತುಂಬ ಉದಾತ್ತವಾದು ದಾಗಿದೆ. ಸ್ಥಾವರಲಿಂಗಕ್ಕೆ ನೈವೇದ್ಯ ಮಾಡಿ ಪಡೆಯುವ ಹಣ್ಣು–ಹಾಲು–ಆಹಾರ ಇವುಗಳನ್ನು ಪ್ರಸಾದವೆಂದು ಉಳಿದ ಧರ್ಮದ ಭಕ್ತರು ನಂಬಿದರೆ, ಶರಣರು ಹೇಳಿರುವ ಪ್ರಸಾದದ ಪರಿಕಲ್ಪನೆಗಳು ವಿನೂತನವಾದವು ಗಳಾಗಿವೆ.

ಶರಣರ ಪರಿಕಲ್ಪನೆಯಲ್ಲಿ ಪ್ರಸಾದವೆಂದರೆ ಸುಜ್ಞಾನವಾಗಿದೆ. ಆತ್ಮದ ಮೂಲಕ ಹುಟ್ಟಿಕೊಂಡ ಅಂತರಂಗದ ಅರಿವಾಗಿದೆ. ಜಂಗಮಪ್ರಸಾದವೇ ಇಲ್ಲಿ ಪ್ರಾಣವಾಗಿದೆ. ಗುರು–ಲಿಂಗ–ಜಂಗಮಗಳ ಮೂಲಕ, ಅರಿವು–ಆಚಾರ–ಸುಜ್ಞಾನಗಳು ಅನುಷ್ಠಾನಗೊಂಡು ಶುದ್ಧ–ಸಿದ್ಧ–ಪ್ರಸಿದ್ಧ ಪ್ರಸಾದಗಳಾಗಿವೆ ಯೆಂದು ಶರಣರು ಹೇಳಿದ್ದಾರೆ. ಅಂಗಗುಣವನ್ನಳಿದು, ಲಿಂಗಗುಣ ಪಡೆಯುವುದೇ ಪ್ರಸಾದವಾಗಿದೆ. ಕಾಮ–ಕ್ರೋಧಗಳನ್ನು ತೊರೆದು ದಯೆ–ಅಂತಃಕರಣಗಳನ್ನು ಪಡೆದುಕೊಳ್ಳುವುದೇ ನಿಜವಾದ ಪ್ರಸಾದದ ಪರಿಕಲ್ಪನೆ ಯಾಗಿದೆ.

ದಿನನಿತ್ಯ ಮಾಡುವ ಅಡುಗೆ ಪದಾರ್ಥವಾದರೆ, ಅದನ್ನು ದೇವರಿಗೆ ಅರ್ಪಿಸಿ, ನೈವೇದ್ಯ ಮಾಡಿದ ನಂತರ ಸ್ವೀಕರಿಸುವುದು ಪ್ರಸಾದವೆಂದು ಇತರ ಧಾರ್ಮಿಕಾಚರಣೆಗಳಲ್ಲಿ ಕಾಣಬಹುದಾಗಿದೆ. ಆದರೆ ಲಿಂಗಾಯತ ಧರ್ಮದಲ್ಲಿ ಬರುವ ಪ್ರಸಾದದ ಪರಿಕಲ್ಪನೆ ತುಂಬ ಭಿನ್ನವಾದುದಾಗಿದೆ.

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?

–ಬಸವಣ್ಣ (ಸ.ವ.ಸಂ. 1, ವ. 770)

ಈ ವಚನದಲ್ಲಿ ಬಸವಣ್ಣ ಪ್ರಸಾದದ ಮಹತ್ವವನ್ನು ತಿಳಿಸಿದ್ದಾರೆ. ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ? ಎಂದು ಕೇಳಿದ್ದಾರೆ. ಬಸವಣ್ಣನವರ ಪ್ರಕಾರ ಲಿಂಗವು ಹೊಲೆಯನ್ನು ಹೋಗಲಾಡಿಸುತ್ತದೆ, ಜಂಗಮನು ಕುಲಭೇದ ವನ್ನು ಅಳಿಸಿಹಾಕುತ್ತಾರೆ. ಅದೇ ರೀತಿ ಪ್ರಸಾದವು ಎಂಜಲಾಗದೆ ಪವಿತ್ರವಾಗು ತ್ತದೆ. ಹೀಗಾಗಿ ಈ ಲಿಂಗ-ಜಂಗಮ-ಪ್ರಸಾದಗಳು ಕೇವಲ ಅಲಂಕಾರಿಕ ವಾಗಿರದೆ, ಹೊಲೆಯನ್ನೋಡಿಸಲು, ಕುಲಭೇದವನ್ನಳಿಸಿಹಾಕಲು ಸಹಾಯಕ ವಾಗಿವೆ. ಇನ್ನೊಂದು ವಚನದಲ್ಲಿ ಪ್ರಾಣಲಿಂಗವು ಪ್ರಸಾದದಲ್ಲಿ ಸನ್ನಿಹಿತವಾಯಿ ತೆಂದು ಬಸವಣ್ಣ ತಿಳಿಸಿದ್ದಾರೆ.

ಪ್ರಸಾದ ಪ್ರಸಾದವೆಂದು ಹೆಸರಿಟ್ಟು ನುಡಿವವರಿಗೆ ಪ್ರಸಾದವೆಲ್ಲಿಯದೋ?
ಮನಮುಟ್ಟಿ ಕೊಂಡುದು ಪ್ರಸಾದವಲ್ಲ, ತನುಮುಟ್ಟಿ ಕೊಂಡುದು ಪ್ರಸಾದವಲ್ಲ

ಧನಮುಟ್ಟಿ ಕೊಂಡುದು ಪ್ರಸಾದವಲ್ಲ........
ಇಕ್ಕುವವ ಶಿವದ್ರೋಹಿ; ಕೊಂಬವ ಗುರುದ್ರೋಹಿ.
ಇದು ಕಾರಣ ಕೂಡಲಚೆನ್ನಸಂಗಯ್ಯನ ಪ್ರಸಾದ
ಘನಕ್ಕೆ ಮಹಾಘನ ನಾನೇನೆಂದು ಬಣ್ಣಿಸುವೆ...

-ಚೆನ್ನಬಸವಣ್ಣ (ಸ.ವ.ಸಂ. 3, ವ. 242)

ಚೆನ್ನಬಸವಣ್ಣ ಈ ವಚನದಲ್ಲಿ ಪ್ರಸಾದ ಎಲ್ಲಕ್ಕಿಂತಲೂ ಘನವಾದುದೆಂದು ಹೇಳಿದ್ದಾರೆ. ತನು-ಮನ-ಧನಗಳನ್ನು ಮೀರಿ ನಿಂತುದೇ ಪ್ರಸಾದವೆಂದು ತಿಳಿಸಿದ್ದಾರೆ. ಪ್ರಸಾದವಾವುದು ಓಗರವಾವುದು? ಎಂಬುದನ್ನು ತಿಳಿಯದ ಮೂಢರನ್ನು ಕಂಡು ವಿಡಂಬಿಸಿದ್ದಾರೆ. ಪ್ರಸಾದಕ್ಕೂ-ಅನ್ನಕ್ಕೂ ವ್ಯತ್ಯಾಸವಿದೆ ಯೆಂದು ಇಲ್ಲಿ ತಿಳಿಸಲಾಗಿದೆ.

ಗುರು ಮುಟ್ಟಿಬಂದ ಶುದ್ಧ ಪ್ರಸಾದಿಯಾದಡೆ,
ವಾತ ಪಿತ್ತ ಶ್ಲೇಷ್ಮವಳಿದಿರಬೇಕು,
ಲಿಂಗ ಮುಟ್ಟಿಬಂದ ಸಿದ್ಧ ಪ್ರಸಾದಿಯಾದಡೆ
ಆದಿ ವ್ಯಾಧಿಗಳಿಲ್ಲದಿರಬೇಕು.
ಮೂರರ ಅರುಹುಗಟ್ಟಿಗೊಳ್ಳುವ ಮಹಾ ಪ್ರಸಾದಿಯಾದಡೆ
ಮರಣವಿಲ್ಲದಿರಬೇಕು.

-ಸಿದ್ಧರಾಮ (ಸ.ವ.ಸಂ. 4, ವ. 1280)

ಗುರು ಮುಟ್ಟಿಬಂದುದು ಶುದ್ಧಪ್ರಸಾದವಾದಡೆ, ಲಿಂಗ ಮುಟ್ಟಿಬಂದುದು ಸಿದ್ಧಪ್ರಸಾದವಾಗಿದೆ ಮತ್ತು ಜಂಗಮ ಮುಟ್ಟಿಬಂದುದು ಪ್ರಸಿದ್ಧ ಪ್ರಸಾದವಾಗಿದೆ. ಇಂತಹ ತ್ರಿವಿಧ ಪ್ರಸಾದವ ಸೇವಿಸಿದ ನಂತರ ಮಲತ್ರಯಕ್ಕೊಳಗಾಗಬಾರ ದೆಂದು ಈ ವಚನದಲ್ಲಿ ಸಿದ್ಧರಾಮ ಸ್ಪಷ್ಟಪಡಿಸಿದ್ದಾರೆ. ಅಂದರೆ ಪ್ರಸಾದವೆಂದರೆ

ಇಲ್ಲಿ ಓಗರವಲ್ಲ, ನಿಜವಾದ ಪ್ರಸಾದ ಮಲತ್ರಯಕ್ಕೊಳಗಾಗುವುದಿಲ್ಲವೆಂದು ಹೇಳಲಾಗಿದೆ. ಅಡಿಗೆಮಾಡಿ ಉಣ್ಣುವುದು ಭೂತ, ಹಾಗೆ ಮಾಡದೆ ಬದುಕಿನ ಗುರಿಯನರಿಯಬಲ್ಲಡೆ ಅದೇ ಮಹಾಪ್ರಸಾದವೆಂದು ಸಿದ್ಧರಾಮ ತಮ್ಮ ಇನ್ನೊಂದು ವಚನದಲ್ಲಿ ಹೇಳಿದ್ದಾರೆ. ಪ್ರಸಾದಕಾಯನಾದ ಬಳಿಕ ರಸೌಷಧಿಯ ಅವಶ್ಯಕತೆಯಿರುವುದಿಲ್ಲ, ಮನದಿಚ್ಛೆ ಪೂರ್ಣವಾದ ಬಳಿಕ ಮಂತ್ರದ ಹಂಗಿರುವುದಿಲ್ಲ, ಆತ್ಮವೇ ಪರಮಾತ್ಮನಾದ ಬಳಿಕ ಪರ್ವತದ ಹಂಗಿರುವುದಿಲ್ಲ ವೆಂದು ತಿಳಿಸಿದ್ದಾರೆ.

ಪ್ರಾಣ ಲಿಂಗವೆಂದರಿದ ಬಳಿಕ
ಪ್ರಾಣ ಪ್ರಸಾದವಾಯಿತ್ತು
ಲಿಂಗ ಪ್ರಾಣವೆಂದರಿದ ಬಳಿಕ
ಅಂಗದಾಸೆ ಹಿಂಗಿತ್ತು.
–ಅಕ್ಕಮಹಾದೇವಿ (ಸ.ವ.ಸಂ. 5, ವ. 284)

ಬಸವಣ್ಣನ ಪ್ರಸಾದವಕೊಂಡು ಎನ್ನ ಕಾಯ ಶುದ್ಧವಾಯಿತ್ತಯ್ಯಾ
ಚೆನ್ನಬಸವಣ್ಣನ ಪ್ರಸಾದವಕೊಂಡು ಎನ್ನ ಜೀವ ಶುದ್ಧವಾಯಿತ್ತಯ್ಯಾ
ಮಡಿವಾಳಯ್ಯನ ಪ್ರಸಾದವಕೊಂಡು ಎನ್ನ ಭಾವ ಶುದ್ಧವಾಯಿತ್ತಯ್ಯಾ
–ಆಯ್ದಕ್ಕಿ ಲಕ್ಕಮ್ಮ (ಸ.ವ.ಸಂ. 5, ವ. 721)

ಪ್ರಸಾದಿಗಳು ಪ್ರಸಾದಿಗಳೆಂದೆಂಬರಯ್ಯ
ತಾವು ಪ್ರಸಾದಿಗಳಾದ ಪರಿಯೆಂತಯ್ಯ?
ಪರಿಪೂರ್ಣದ ನೆಲೆಯ ತಿಳಿದು
ಪರಂಜ್ಯೋತಿಯ ಅನುಭಾವವನರಿಯದನ್ನಕ್ಕ
ತಾವು ಪ್ರಸಾದಿಗಳಾದ ಪರಿಯೆಂತಯ್ಯ?
–ನೀಲಮ್ಮ (ಸ.ವ.ಸಂ. 5, ವ. 998)

ಈ ಮೂರೂ ವಚನಗಳಲ್ಲಿ ಪ್ರಸಾದಕ್ಕೆ ಸಂಬಂಧಿಸಿದ ವಿವಿಧ ಅಭಿವ್ಯಕ್ತಿ ಗಳನ್ನು ನೋಡಬಹುದಾಗಿದೆ. ಪ್ರಾಣವೇ ಲಿಂಗವಾದಾಗ ಪ್ರಾಣಪ್ರಸಾದವಾಯಿ ತೆಂದು ಹೇಳಿರುವ ಅಕ್ಕಮಹಾದೇವಿ ಇಲ್ಲಿ ಪ್ರಸಾದವೆಂದರೆ ಆಹಾರವಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವರ ಪ್ರಸಾದವಕೊಂಡು, ತನ್ನ ಕಾಯ–ಜೀವ–ಭಾವ ಶುದ್ಧವಾಯಿತೆಂದು ಆಯ್ದಕ್ಕಿ ಲಕ್ಕಮ್ಮ ಹೇಳಿದರೆ, ಪ್ರಸಾದಿಗಳಾಬೇಕಾದರೆ, ಪರಿಪೂರ್ಣದ ನೆಲೆಯನರಿತು ಪರಂಜ್ಯೋತಿಯ ಅನುಭಾವವನರಿಯಬೇಕೆಂದು ನೀಲಮ್ಮ ಹೇಳಿದ್ದಾರೆ.

ಗುರುವಿಲ್ಲದವಂಗೆ ಲಿಂಗವಲ್ಲ
ಲಿಂಗವಿಲ್ಲದವಂಗೆ ಜಂಗಮವಿಲ್ಲ
ಜಂಗಮವಿಲ್ಲದವಂಗೆ ಪ್ರಸಾದವಿಲ್ಲ
ಪ್ರಸಾದವಿಲ್ಲದವಂಗೆ ನಿರ್ವಾಣವಿಲ್ಲ

–ಆದಯ್ಯ (ಸ.ವ.ಸಂ. 6, ವ. 1129)

ಪಾದೋದಕದಿಂದ ಪದಂ ನಾಸ್ತಿಯಾಗಿರಬೇಕು
ಲಿಂಗೋದಕದಿಂದ ಅಂಗ ಮಂಗಳಮಯವಾಗಿರಬೇಕು
ಪ್ರಸಾದೋದಕದಿಂದ ಆತ್ಮಭಾವಕ್ಕೆ ಬೀಜವಿಲ್ಲದಿರಬೇಕು.

–ಮೋಳಿಗೆ ಮಾರಯ್ಯ (ಸ.ವ.ಸಂ. 8, ವ. 1894)

ಗುರು–ಲಿಂಗ–ಜಂಗಮವಿಲ್ಲದವರಿಗೆ ಪ್ರಸಾದವಿಲ್ಲವೆಂದು ಆದಯ್ಯ ಹೇಳಿದರೆ, ಪಾದೋದಕದಿಂದ ಪದಂ ನಾಸ್ತಿಯಾಗಿರಬೇಕೆಂದು ಮೋಳಿಗೆ ಮಾರಯ್ಯ ಹೇಳಿದ್ದಾರೆ. ಹೀಗೆ ಶರಣರು ಪ್ರಸಾದದ ಬಗೆಗೆ ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅಷ್ಟಾವರಣಗಳಲ್ಲಿ ಒಂದಕ್ಕೊಂದು ಸಂಬಂಧ ಇದೆ. ಅವು ಕೇವಲ ಹೊರಾವರಣಗಳಾಗದೆ, ಒಳಗೆ ಬೆಳೆಯಬಹು ದಾದ ಶಕ್ತಿಸಂಕೇತಗಳಾಗಿವೆ. ಅಷ್ಟಾವರಣಗಳ ಬಗೆಗೆ ವೈಜ್ಞಾನಿಕ ಅಧ್ಯಯನ ನಡೆಯಬೇಕಾಗಿದೆ.

**ವಿಭೂತಿ**

ಶೈವಾಗಮಗಳಲ್ಲಿ ವಿಭೂತಿ–ರುದ್ರಾಕ್ಷಿ–ಮಂತ್ರಗಳ ಪ್ರಸ್ತಾಪವಿದೆ. ಆದರೆ ಈ ವಿಷಯದಲ್ಲಿ ಆಗಮಗಳಲ್ಲಿ ಹೇಳಿದ ವಿಚಾರಗಳಿಗೂ, ಶರಣರು ಹೇಳಿದ ವಿಚಾರಗಳಿಗೂ ತುಂಬ ವ್ಯತ್ಯಾಸವಿದೆ. “ವಿಭೂತಿ” ಪದಕ್ಕೆ ಸಂಬಂಧಿಸಿದಂತೆ ಅನೇಕ ವ್ಯಾಖ್ಯೆಗಳಿವೆ. ವಿಭೂತಿಯೆಂದರೆ ಭಸ್ಮವೆಂದು ಎಲ್ಲರೂ ಹೇಳುತ್ತಾರೆ. ಆಕಳ ಸೆಗಣಿಯ ಕುಳ್ಳನ್ನು ಸುಟ್ಟು ಭಸ್ಮ ಮಾಡುತ್ತಾರೆ. ಸುಡುವ, ಶುದ್ಧೀಕರಿಸುವ ಕ್ರಿಯೆ ಇಲ್ಲಿ ಮುಖ್ಯವಾಗುತ್ತದೆ.

ಭೂತಿಯೆಂದರೆ ಹುಟ್ಟು–ಜನನ ಎಂದರ್ಥವಿದೆ. ಹುಟ್ಟಿದ ಮನುಷ್ಯ ಕಾಮ–ಕ್ರೋಧ ಮೊದಲಾದ ಷಡ್‌ವೈರಿಗಳೊಂದಿಗೆ ಬೆಳೆಯುತ್ತಾನೆ. ಇಂತಹ ಭೂತಿಯ ವಿಕಾರಗಳನ್ನು ಸುಟ್ಟು ಆತನನ್ನು ವಿಶೇಷವಾಗಿ ಬೆಳೆಸುವುದೇ ವಿಭೂತಿಯ ವೈಶಿಷ್ಟ್ಯತೆಯಾಗಿದೆ. ಇಂತಹ ಪುರುಷನಿಗೆ ವಿಭೂತಿಪುರುಷ ನೆಂದು ಕರೆಯುತ್ತಾರೆ. ವಿಭೂತಿಪುರುಷನೆಂದರೆ ಮಹಾಪುರುಷ ಎಂಬರ್ಥ ವಿದೆ. ಹೀಗೆ ವಿಭೂತಿ ಹಣೆಗೆ ಧರಿಸುವ ಭಸ್ಮವಾಗುವುದರ ಜತೆಗೆ ಸಾಮಾನ್ಯ

ವ್ಯಕ್ತಿಯನ್ನು ಮಹಾಪುರುಷನನ್ನಾಗಿ ಮಾಡುವ ಸಾಧನವಾಗಿದೆ. ಭವಪಾಶವನ್ನು ಹರಿಯುವುದೇ ವಿಭೂತಿಯ ಉದ್ದೇಶವಾಗಿದೆ.

ಬಸವಾದಿ ಶರಣರು ವಿಭೂತಿಯ ಬಗೆಗೆ ಎರಡು ರೀತಿಯ ವ್ಯಾಖ್ಯೆಗಳನ್ನು ಮಾಡಿದ್ದಾರೆ. ಹಣೆಗೆ ಧರಿಸುವ ವಿಭೂತಿ ಒಂದಾದರೆ ಪುರುಷ–ವಿಭೂತಿಪುರುಷನಾಗಿ ಬೆಳೆಯುವುದು ಮತ್ತೊಂದಾಗಿದೆ. ಹೊರಗೆ ಕಾಣುವ ನೊಸಲ ವಿಭೂತಿಯ ಜತೆಗೆ, ಒಳಗಿನ ಕಾಮ–ಕ್ರೋಧ ವಿಕಾರಗಳನ್ನು ಸುಟ್ಟುಹಾಕುವುದು ನಿಜವಾದ ವಿಭೂತಿಯಾಗಿದೆ. ಈ ಎರಡು ರೀತಿಯ ವಿಭೂತಿಗಳ ಬಗೆಗೆ ಶರಣರು ತಿಳಿಸಿದ್ದಾರೆ. ಅರಿಶಿಣ–ಕುಂಕುಮ ಮಾಂತ್ರಿಕ ದೇವತೆಗಳ ಆರಾಧನೆಯ ಪರಿಕರಗಳಾಗಿರುವುದರಿಂದ ಶರಣರು ಅವುಗಳನ್ನು ಧರಿಸದೆ, ವಿಭೂತಿಯನ್ನು ಧರಿಸಬೇಕೆಂದು ಹೇಳಿದ್ದಾರೆ.

> ನೀರಿಂಗೆ ನೈದಿಲೆಯೆ ಶೃಂಗಾರ, ಸಮುದ್ರಕ್ಕೆ ತೆರೆಯೆ ಶೃಂಗಾರ
> ನಾರಿಗೆ ಗುಣವೆ ಶೃಂಗಾರ, ಗಗನಕ್ಕೆ ಚಂದ್ರಮನೆ ಶೃಂಗಾರ
> ನಮ್ಮ ಕೂಡಲಸಂಗನ ಶರಣರಿಗೆ ನೊಸಲ ವಿಭೂತಿಯೆ ಶೃಂಗಾರ.
>
> –ಬಸವಣ್ಣ (ಸ.ವ.ಸಂ. 1, ವ. 74)

> ಶ್ರೀ ವಿಭೂತಿಯ ಹೂಸದವರ, ಶ್ರೀ ರುದ್ರಾಕ್ಷಿಯ ಧರಿಸದವರ
> ನಿತ್ಯ ಲಿಂಗಾರ್ಚನೆಯ ಮಾಡದವರ, ಜಂಗಮವೇ ಲಿಂಗವೆಂದರಿಯದವರ
> ತೋರದಿರು ಕೂಡಲಸಂಗಮದೇವಾ, ಸೆರಗೊಡ್ಡಿ ಬೇಡುವೆನು.
>
> –ಬಸವಣ್ಣ (ಸ.ವ.ಸಂ. 1, ವ. 455)

ಈ ಎರಡು ವಚನಗಳಲ್ಲಿ ಬಸವಣ್ಣ ಹೊರಗಿನ ವಿಭೂತಿಯ ಬಗ್ಗೆ ಹೇಳಿದ್ದಾರೆ. ಮೊದಲಿನ ವಚನದಲ್ಲಿ ಅಲಂಕಾರಿಕ ಉದಾಹರಣೆಗಳಿವೆ. ನೀರಿಗೆ–ನೈದಿಲೆ, ಸಮುದ್ರಕ್ಕೆ–ತೆರೆ, ನಾರಿಗೆ–ಗುಣ, ಗಗನಕ್ಕೆ–ಚಂದ್ರಮ ಶೃಂಗಾರವಾಗಿರುವಂತೆ ಶರಣರಿಗೆ–ನೊಸಲ ವಿಭೂತಿಯೇ ಶೃಂಗಾರವಾಗಿದೆಯೆಂದು ಹೇಳಲಾಗಿದೆ. ಎರಡನೇ ವಚನದಲ್ಲಿ ವಿಭೂತಿ ಧರಿಸದವರ ಮುಖವ ನೋಡಲಾಗದು, ಅಂತವರನ್ನು ತೋರದಿರೆಂದು ಕೂಡಲಸಂಗಯ್ಯನಲ್ಲಿ ಬೇಡಿಕೊಂಡಿದ್ದಾರೆ.

"ಸಕಲಕ್ರಿಯೆಗಳಿಗಿದು ಕವಚ, ಸಕಲವಶ್ಯಕ್ಕಿದು ಶುಭ ತಿಲಕ"ವೆಂದು ಮತ್ತೊಂದು ವಚನದಲ್ಲಿ ಹೇಳಿದ್ದಾರೆ.

> ವಿಭೂತಿ, ಆವ ಭೂಷಣದೊಳಗು?
> ಪುಲಿಯ ಚರ್ಮ ಆವ ವಸ್ತ್ರದೊಳಗು?
> ಖಟ್ವಾಂಗ ಆವ ಆಯುಧದೊಳಗು?...
>
> –ಅಲ್ಲಮಪ್ರಭು (ಸ.ವ.ಸಂ. 2, ವ. 1532)

ವಿಭೂತಿ ವಿಭೂತಿಯೆಂಬ ಮಾತಿಗಂಜಲೇಕೊ,
ಅದು ವಿಭೂತಿ ಅಹುದೊ, ಅಲ್ಲೊ ಎಂಬ ಕ್ರಮವನರಿಯಬೇಕಲ್ಲದೆ?
ಶ್ರೇಷ್ಠಾಚಾರವಿಡಿದು ಆಚರಿಸುವುದು ವಿಭೂತಿ.....

–ಚೆನ್ನಬಸವಣ್ಣ (ಸ.ವ.ಸಂ.3, ವ. 1625)

ಕೊಂಬನೂದುವ ಹೊಲೆಯಂಗೆ
ಕುಂಕುಮ ಹಣೆಯಲ್ಲಲ್ಲದೆ ಶ್ರೀವಿಭೂತಿ ಒಪ್ಪುವುದೆ?....

–ಮಡಿವಾಳ ಮಾಚಿದೇವಿ (ಸ.ವ.ಸಂ. 8, ವ. 573)

ಈ ಮೂರು ವಚನಗಳಲ್ಲಿ ನೊಸಲ ಮೇಲೆ ಧರಿಸುವ ಹೊರಗಿನ ವಿಭೂತಿ ಬಗೆಗೆ ಹೇಳಲಾಗಿದೆ. ಮೊದಲಿನ ವಚನದಲ್ಲಿ ಅಲ್ಲಮಪ್ರಭು ಮೂರು ಪ್ರಶ್ನೆಗಳನ್ನು ಕೇಳುತ್ತಲೇ, ನಂತರದ ಸಾಲುಗಳಲ್ಲಿ ವಿಭೂತಿಯ ಮಹತ್ವವನ್ನು ತಿಳಿಸಿದ್ದಾರೆ. ವಸ್ತ್ರಗಳಲ್ಲಿ ಹುಲಿಯ ಚರ್ಮ, ಆಯುಧಗಳಲ್ಲಿ ಖಟ್ವಾಂಗ (ಗದೆ) ಶ್ರೇಷ್ಠವಾಗಿರುವಂತೆ, ಭೂಷಣಗಳಲ್ಲಿ ವಿಭೂತಿಯೇ ಶ್ರೇಷ್ಠವಾಗಿದೆಯೆಂದು ಹೇಳಲಾಗಿದೆ. ಚೆನ್ನಬಸವಣ್ಣ ಹೊರಗಿನ ವಿಭೂತಿಯ ಪ್ರಸ್ತಾಪ ಮಾಡುತ್ತಲೇ ಒಳಗಿನ ವಿಭೂತಿಯನ್ನು ಹೇಳುತ್ತಾರೆ. ಶರಣತತ್ವಗಳ ಆಚರಣೆಯೇ ವಿಭೂತಿಯೆಂದು ವಿವರಿಸುತ್ತಾರೆ. ಮಡಿವಾಳ ಮಾಚಿದೇವರು ಹಣೆಗೆ ವಿಭೂತಿ ಭೂಷಣವೇ ಹೊರತು ಕುಂಕುಮವಲ್ಲವೆಂದು ತಿಳಿಸಿದ್ದಾರೆ. ಒಮ್ಮೆ ಶರಣಧರ್ಮ ಸ್ವೀಕರಿಸಿ ಹಣೆಗೆ ವಿಭೂತಿ ಧರಿಸಿದ ನಂತರ, ಗುರುನಿಂದಕನಾಗಿ ಹಣೆಯಲ್ಲಿ ಕುಂಕುಮ ಹಚ್ಚಿಕೊಂಡರೆ ಕೊಂಬಿನ ಹೊಲೆಯನಿಗಿಂತಲೂ ಕನಿಷ್ಠವೆಂದು ಹೇಳಿದ್ದಾರೆ.

ಲಿಂಗ ಹೊರತೆಯಾಗಿ, ವಿಭೂತಿ ರುದ್ರಾಕ್ಷಿಯ ಕೊಟ್ಟು
ಗುರುವಾಗಬಹುದೆ ಅಯ್ಯಾ?
ಬೀಜವಿಲ್ಲದೆ ಅಂಕುರವಾಗಬಲ್ಲುದೆ?

–ಅರಿವಿನ ಮಾರತಂದೆ (ಸ.ವ.ಸಂ. 6, ವ. 387)

ಅರಿವಿನ ಮಾರಿತಂದೆ ಈ ವಚನದಲ್ಲಿ ಒಳಗೆ ಧರಿಸಿಬೇಕಾದ ವಿಭೂತಿಯ ಬಗೆಗೆ ಹೇಳಿದ್ದಾರೆ. ಹೊರತೆಯೆಂದರೆ ಬಾಹ್ಯ ಎಂದರ್ಥವಿದೆ. ಹೊರಗೆ ಲಿಂಗ ಕಟ್ಟಿ ವಿಭೂತಿ ರುದ್ರಾಕ್ಷಿ ಧರಿಸಿದಾಕ್ಷಣ ಗುರುವೆನಬಹುದೆ? ಎಂದು ಇಲ್ಲಿ ಪ್ರಶ್ನಿಸಲಾಗಿದೆ. ಬೀಜವಿಲ್ಲದೆ ಸಸಿ ಹುಟ್ಟುವುದಿಲ್ಲ. ಒಳಗಡೆ ಅರಿವು–ಆಚಾರ–ಅನುಭಾವ ಜಾಗ್ರತವಾದರೆ ಮಾತ್ರ ಸಾಧ್ಯವೆಂದು ಈ ವಚನಕಾರ ತಿಳಿಸಿದ್ದಾನೆ. ಹೀಗೆ ಇನ್ನೂ ಅನೇಕ ವಚನಕಾರರು ವಿಭೂತಿಯ ಮಹತ್ವವನ್ನು ಕುರಿತು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ. ವಿಭೂತಿ ಕೇವಲ ಹೊರಗೆ ಕಾಣಿಸುವುದಾಗಿರದೆ, ಒಳಗಿನ ಕಾಮಾದಿ ಗುಣಗಳನ್ನು ಕಳೆದುಕೊಂಡಿರಬೇಕೆಂದು ಇಲ್ಲಿ ತಿಳಿಸಲಾಗಿದೆ. (ಮುಂದುವರಿಯುವುದು)

## ವಾರ್ತಾವಿಹಾರ

**ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಕಾರ್ಯ ಶ್ಲಾಘನೀಯ**

ಮನುಷ್ಯ ಆರೋಗ್ಯದಿಂದಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು, ಆರೋಗ್ಯ ಸರಿ ಇಲ್ಲದಿದ್ದರೆ ಮಾಡುವ ಕೆಲಸದಲ್ಲಿ ಉತ್ಸಾಹವಿರುವುದಿಲ್ಲ. ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಫೆಬ್ರವರಿ 29ರಂದು ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ 30ನೇ ವರ್ಷಾಚರಣೆಯನ್ನು ಉದ್ಘಾಟಿಸಿದ ಪರಮಪೂಜ್ಯರು ಆರೋಗ್ಯವಿದ್ದರೆ ಆಸೆಗಳು, ಭಾವನೆಗಳು, ಉದ್ದೇಶಗಳನ್ನು ಸ್ಪಷ್ಟವಾಗಿ ಈಡೇರಿಸಿಕೊಳ್ಳಬಹುದು. ಆದ್ದರಿಂದ ಆರೋಗ್ಯದ ಬಗ್ಗೆ ಎಲ್ಲರೂ ತೀವ್ರ ಕಾಳಜಿ ವಹಿಸಬೇಕಾದ ಅಗತ್ಯವಿದೆ. ಭಾರತ್ ಕ್ಯಾನ್ಸರ್ ಆಸ್ಪತ್ರೆಯು 30 ವರ್ಷಗಳಿಂದ ಎಲ್ಲಾ ವರ್ಗದ ಜನರಿಗೂ ಸೇವೆ ಮಾಡುತ್ತಾ ಬಂದಿದೆ. ಇದರಿಂದ ಎಷ್ಟೋ ಜನ ಮರುಜೀವ ಪಡೆದಿದ್ದಾರೆ. ಬಡವರಿಗೆ ಕೈಗೆಟುಕುವ ಚಿಕಿತ್ಸೆ ಇಲ್ಲಿ ದೊರೆಯುತ್ತಿರುವುದು ಗಮನಾರ್ಹ ಸಂಗತಿ ಎಂದು ಹೇಳಿದರು.

ಆಸ್ಪತ್ರೆಯ ಮುಖ್ಯಸ್ಥರಾದ ಡಾ. ಅಜಯ್‌ಕುಮಾರ್‌ರವರು, ಇದುವರೆಗೂ ಭಾರತ್ ಆಸ್ಪತ್ರೆಯಿಂದ 60,000ಕ್ಕೂ ಹೆಚ್ಚು ರೋಗಿಗಳಿಗೆ ಸೇವೆ ಸಲ್ಲಿಸಲಾಗಿದೆ. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಚಿಕಿತ್ಸೆ ನೀಡುವ ಮಹತ್ತರ ಕೆಲಸ ಇಲ್ಲಿ ಮುಂದುವರಿಯತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ರೆವೆರೆಂಡ್ ಬಿಷಪ್ ಡಾ. ಕೆ.ಎ. ವಿಲಿಯಮ್, ಶ್ರೀ ಜಾಫರ್ ಮೊಹಿದ್ದೀನ್, ಡಾ. ಎಂ.ಎಸ್. ವಿಶ್ವೇಶ್ವರ, ಶ್ರೀಮತಿ ಅಂಜಲಿ ಅಜಯ್‌ಕುಮಾರ್ ರವರು ಉಪಸ್ಥಿತರಿದ್ದರು.

**ಭಗವಂತನ ಸ್ಮರಣೆ ಬದುಕಿನ ಅವಿಭಾಜ್ಯ ಅಂಗ**

ಸಂಪತ್ತಿನಿಂದ ಸುಖ, ಶಾಂತಿ ಸಿಗುವುದಿಲ್ಲ. ಪ್ರೀತಿ, ವಿಶ್ವಾಸ, ನಂಬಿಕೆ ಇದ್ದಾಗ ಮಾತ್ರ ಜೀವನದಲ್ಲಿ ನೆಮ್ಮದಿ ಸಿಗಲಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 3 ರಂದು ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಪುರದಲ್ಲಿ ಶ್ರೀ ಸಿದ್ಧಪ್ಪಾಜಿ ದೇವಸ್ಥಾನ ಜೀರ್ಣೋದ್ಧಾರ, ಬಸವ ಮಹಾದ್ವಾರ ಹಾಗೂ ನಾಗಪ್ಪದೇವರ ಗದ್ದುಗೆ ಪ್ರಾರಂಭೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ, ಮನುಷ್ಯನಿಗೆ ದೇವಸ್ಥಾನ, ಧಾರ್ಮಿಕ ಕೇಂದ್ರ ಹಾಗೂ ಮಠಮಾನ್ಯಗಳು ಬೇಕು. ಜಗತ್ತಿನಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ ಬಗ್ಗೆ ಗೌರವವಿದೆ. ಇಲ್ಲಿನ ಜನರಿಗೆ ಭಗವಂತನ ಸ್ಮರಣೆ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಸಣ್ಣ ಕುಟುಂಬಗಳು ಹೆಚ್ಚುತ್ತಿರುವ ಕಾರಣ ಮಕ್ಕಳಲ್ಲಿ ಆದರ್ಶಗಳು ಕಡಿಮೆಯಾಗುತ್ತಿವೆ. ಎಲ್ಲಾ ಇದ್ದರೂ ಸುಖ ಸಿಗುತ್ತಿಲ್ಲ. ಜನರು ಕೃಷಿಯಿಂದ ವಿಮುಖವಾಗುತ್ತಿದ್ದಾರೆ. ಇದರಿಂದ ಮುಂದೆ ಬಹಳ ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಡುಕನಪುರ, ಹರವೆ, ಸೋಮಹಳ್ಳಿ, ಮಾದಾಪಟ್ಟಣ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಕೆ.ಎಸ್. ಮಹೇಶ್, ಶ್ರೀ ಕೊಡಸೋಗೆ ಶಿವಬಸಪ್ಪ ಶ್ರೀ ಎಚ್.ಎಸ್. ನಂಜುಂಡಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು.

**ಅಧ್ಯಾತ್ಮ ಮನುಷ್ಯನ ಬದುಕನ್ನು ಸುಂದರಗೊಳಿಸುತ್ತದೆ**

ಮಾತೃವಾತ್ಸಲ್ಯದ ಮುದ್ರೆಯನ್ನು ಜನಮಾನಸದಲ್ಲಿ ಒತ್ತಿರುವ ಡಾ. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಇಡೀ ಮಾನವ ಜನಾಂಗದ ಒಳಿತಿಗಾಗಿ ಶ್ರಮಿಸಿದ ಮಹಾನ್ ಗುರುಗಳು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 4 ರಂದು ನಾಗಮಂಗಲ ತಾಲ್ಲೂಕು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯದ ದ್ವಾದಶಾಬ್ದ ಮಹಾ ಕುಂಭಾಭಿಷೇಕ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳು, ಲೌಕಿಕವಾದ ಯಾವ ವಿಷಯಗಳೂ ಮನುಷ್ಯನಿಗೆ ಶಾಶ್ವತವಾದ ಸುಖವನ್ನು ನೀಡುವುದಿಲ್ಲ. ಆಧ್ಯಾತ್ಮದ ವಿಷಯಗಳು ಮಾತ್ರ ಮನುಷ್ಯನ ಬದುಕನ್ನು ಸುಂದರಗೊಳಿಸಲು ಸಾಧ್ಯ. ಆದ್ದರಿಂದ ಮನುಷ್ಯ ಭಗವಂತನಿಗೆ ಅಭಿಮುಖವಾಗಿ ನಡೆದರೆ ಮಾತ್ರ ಆತನ ಇಷ್ಟಾರ್ಥಗಳು ಈಡೇರುತ್ತವೆ ಎಂದು ತಿಳಿಸಿದರು.

ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಜನಪರ ಕೆಲಸಗಳಲ್ಲಿ ದಕ್ಷಿಣ ಭಾರತದ ಮಠಗಳು ತೊಡಗಿಸಿಕೊಂಡಿವೆ. ಎಲ್ಲ ವರ್ಗದ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿವೆ ಎಂದು ಹೇಳಿದರು.

ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ದೇಶ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳನ್ನು ಬಗೆಹರಿಸಲು ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಸಾಧ್ಯವಿಲ್ಲ, ಜನರು ಕೂಡ ಪ್ರಜ್ಞಾವಂತ ರಾಗಬೇಕು ಎಂದು ತಿಳಿಹೇಳಿದರು.

ಕಾರ್ಯಕ್ರಮದಲ್ಲಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀ ಶಿವಾನಂದ ಭಾರತೀ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶಾಸಕರಾದ ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಾ.ರಾ. ಮಹೇಶ್, ಶ್ರೀ ಮುರಗೇಶ್ ನಿರಾಣಿ, ಶ್ರೀ ಕೆ. ಸುರೇಶಗೌಡ, ಶ್ರೀ ಶರತ್ ಬಚ್ಚೇಗೌಡ, ಶ್ರೀ ಎಲ್. ಶಿವರಾಮೇಗೌಡ ಮೊದಲಾದವರು ಉಪಸ್ಥಿತರಿದ್ದರು.

**ಕೊರೋನಾ ವಾರಿಯರ್ಸ್‌ಗಳಿಗೆ ಚಪ್ಪಾಳೆ ತಟ್ಟಿ ಗೌರವ**

ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಮಾರ್ಚ್ 22ರಂದು ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕರೆ ನೀಡಿದ್ದ ಕೊರೋನಾ ಸೋಂಕಿತರು ಗುಣಮುಖರಾಗಲು ಶ್ರಮಿಸುತ್ತಿರುವ ಕೊರೋನಾ ವಾರಿಯರ್ಸ್‌ಗಳಿಗೆ ಪ್ರೋತ್ಸಾಹಿಸುವ ಅಭಿಯಾನದಲ್ಲಿ ಶ್ರೀಮಠದಲ್ಲಿನ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು ಚಪ್ಪಾಳೆ, ಘಂಟೆ, ಜಾಗಟೆಗಳನ್ನು ಬಾರಿಸಿ ಗೌರವ ಸಲ್ಲಿಸಿದರು.

**ಶ್ರೀಮಠದಲ್ಲಿ ಜ್ಯೋತಿ ಬೆಳಗುವ ಅಭಿಯಾನ**

ಏಪ್ರಿಲ್ 5ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೋವಿಡ್–19 ವೈರಾಣು ಸೋಂಕಿನ ಸಂದರ್ಭದಲ್ಲಿ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕರೆ ನೀಡಿದ್ದ ಜ್ಯೋತಿ ಬೆಳಗುವ ಅಭಿಯಾನ ದಲ್ಲಿ ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಶ್ರೀಮಠದಲ್ಲಿ ಜ್ಯೋತಿ ಬೆಳಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

**ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಸಂಸ್ಥೆಯ ನೌಕರರಿಂದ 50 ಲಕ್ಷ ರೂ.ಗಳ ಕೊಡುಗೆ**

ಕೋವಿಡ್–19 ವೈರಾಣು ಸೋಂಕು ದೇಶ ಹಾಗೂ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿ ದೇಶಾದ್ಯಂತ ಲಾಕ್‌ಡೌನ್ ಘೋಷಿಸಲಾಗಿದೆ. ಕೇಂದ್ರ

ಹಾಗೂ ರಾಜ್ಯಗಳು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಯುದ್ಧೋಪಾದಿಯಲ್ಲಿ ಎಲ್ಲಾ ರೀತಿಯ ತುರ್ತು ಕ್ರಮಗಳನ್ನು ಕೈಗೊಳ್ಳುತ್ತಿದೆ.

ವೈರಾಣು ಹರಡುವುದನ್ನು ತಡೆಗಟ್ಟಲು ಸರ್ಕಾರದೊಂದಿಗೆ ಕೈಜೋಡಿಸಲು ಹಾಗೂ ಈ ತುರ್ತು ಸ್ಥಿತಿಯ ನಿವಾರಣೆಗಾಗಿ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಸಂಸ್ಥೆಯ ನೌಕರರು ಸ್ವಇಚ್ಛೆಯಿಂದ ನೀಡಿರುವ ಮೊಬಲಗನ್ನು ಒಟ್ಟುಗೂಡಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50 ಲಕ್ಷ ರೂ.ಗಳ ಚೆಕ್‌ನ್ನು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 1ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ವಸತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ವಿ. ಸೋಮಣ್ಣನವರಿಗೆ ನೀಡಿದರು.

ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಪ್ರತಾಪ ಸಿಂಹ, ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಮ್ ಜಿ. ಶಂಕರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಹಣಕಾಸು ವಿಭಾಗದ ನಿರ್ದೇಶಕರಾದ ಶ್ರೀ ಎಸ್. ಪುಟ್ಟಸುಬ್ಬಪ್ಪ ಹಾಗೂ ಕಾಲೇಜು ಶಿಕ್ಷಣ ವಿಭಾಗದ ಶ್ರೀ ಬಿ. ನಿರಂಜನಮೂರ್ತಿ ಹಾಗೂ ಇತರರು ಉಪಸ್ಥಿತರಿದ್ದರು.

**ಮೈಸೂರು ನಾಗರಿಕರ ವೇದಿಕೆಯಿಂದ ಆಹಾರಧಾನ್ಯಗಳ ವಿತರಣೆ**

ಕೊರೋನಾ ಸೋಂಕನ್ನು ನಿಯಂತ್ರಿಸಲು ದೇಶದಲ್ಲಿ ಲಾಕ್‌ಡೌನ್ ಘೋಷಿಸಲಾಗಿದೆ. ಕೂಲಿ ಕಾರ್ಮಿಕ ಕುಟುಂಬದವರಿಗೆ ಇದರಿಂದ ಜೀವನ ನಿರ್ವಹಣೆಗೆ ತೊಂದರೆಯಾಗಿದೆ. ಅಂಥವರಿಗೆ ಅನುಕೂಲವಾಗಲೆಂದು ಮೈಸೂರು ನಾಗರಿಕ ವೇದಿಕೆಯಿಂದ ಏಪ್ರಿಲ್ 7ರ ಮಂಗಳವಾರದಂದು ಗಿರಿಯಾಭೋವಿಪಾಳ್ಯದ ಜೆಎಸ್‌ಎಸ್ ಪ್ರೌಢಶಾಲೆಯ ಆವರಣದಲ್ಲಿ ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಾಂಕೇತಿಕವಾಗಿ ಆಹಾರಧಾನ್ಯಗಳನ್ನು ವಿತರಿಸಲಾಯಿತು.

ಒಂದು ಕುಟುಂಬಕ್ಕೆ ಅವಶ್ಯವಿರುವ ಅಕ್ಕಿ, ಬೇಳೆ, ಸಕ್ಕರೆ, ಎಣ್ಣೆ, ಉಪ್ಪು ಮತ್ತು ಚಹಾಪುಡಿಯನ್ನು ಒಳಗೊಂಡಿರುವ 3,000 ಕಿಟ್‌ಗಳನ್ನು ಅಗತ್ಯವಿರುವವರಿಗೆ ವಿತರಿಸಲು ಮಹಾನಗರ ಪಾಲಿಕೆಗೆ ನೀಡಲಾಯಿತು.

ವಿತರಣೆಯ ಸಂದರ್ಭದಲ್ಲಿ ಮಹಾಪೌರರಾದ ಶ್ರೀಮತಿ ತಸ್ನೀಮ್, ಉಪಮಹಾಪೌರರಾದ ಶ್ರೀ ಸಿ. ಶ್ರೀಧರ್, ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಮ್

ಜಿ. ಶಂಕರ್, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ಗುರುದತ್ತ ಹೆಗಡೆ, ಸದಸ್ಯರಾದ ಶ್ರೀಮತಿ ಅಶ್ವಿನಿ ಅನಂತ್ ಮತ್ತು ಶ್ರೀ ಜಿ.ಎಸ್. ಸತ್ಯರಾಜ್, ಮೈಸೂರು ನಾಗರಿಕ ವೇದಿಕೆಯ ಶ್ರೀ ಆರ್. ವಾಸುದೇವ್ ಭಟ್, ಶ್ರೀ ಪಿ.ವಿ. ಗಿರಿ, ಶ್ರೀಮತಿ ರಶ್ಮಿ ಕೋಟಿ, ಶ್ರೀ ಜಗದೀಶ ಬಾಬು, ಡಾ. ಬಾಲ ಸುಬ್ರಹ್ಮಣ್ಯ, ಜೆಎಸ್‌ಎಸ್ ಮಹಾವಿದ್ಯಾಪೀಠದ ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್. ಶಿವಕುಮಾರ ಸ್ವಾಮಿ, ಶ್ರೀ ಆರ್. ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

**ವೀರಶೈವ ಮಠಾಧಿಪತಿಗಳ ಗೋಷ್ಠಿಯಿಂದ ಒಂದೂವರೆ ಲಕ್ಷ ರೂ.ಗಳ ಕೊಡುಗೆ**

ರಾಜ್ಯದ ಜನರ ಆರೋಗ್ಯ ರಕ್ಷಣೆ ಹಾಗೂ ಸಾಮಾನ್ಯ ಜನರಿಗೆ ಒದಗಿಸಲಾಗುತ್ತಿರುವ ಇತರ ಎಲ್ಲ ಸಹಾಯಕ ಕಾರ್ಯಗಳಿಗೆ ಅನುಕೂಲ ವಾಗಲೆಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಮಠಾಧಿಪತಿಗಳ ಗೋಷ್ಠಿಯ ವತಿಯಿಂದ ಮಠಾಧಿಪತಿಗಳು ಸ್ವಇಚ್ಛೆಯಿಂದ ನೀಡಿದ ಕೊಡುಗೆಯನ್ನು ಸಂಗ್ರಹಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಒಂದೂವರೆ ಲಕ್ಷ ರೂ.ಗಳ ಚೆಕ್ಕನ್ನು ಏಪ್ರಿಲ್ 11ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಮ್ಮುಖದಲ್ಲಿ ಶ್ರೀ ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳವರು, ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಶ್ರೀ ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮಿಗಳು ಹಾಗೂ ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರಿಗೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್, ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಅಡಗೂರು ಹೆಚ್. ವಿಶ್ವನಾಥ್, ಶ್ರೀ ರಾಜೇಂದ್ರ, ಶ್ರೀ ಅಶೋಕ್, ಶ್ರೀ ಹೆಚ್.ವಿ. ರಾಜೀವ್ ಮೊದಲಾದವರು ಉಪಸ್ಥಿತರಿದ್ದರು.

**ಲೋಕಕ್ಷೇಮಕ್ಕಾಗಿ ಸಾಮೂಹಿಕ ಲಿಂಗಪೂಜೆ**

ಅಖಿಲ ಭಾರತ ವೀರಶೈವ ಮಹಾಸಭೆ ಹಾಗೂ ಬೆಂಗಳೂರು ಬಸವ ಸಮಿತಿಯ ಸಂಯುಕ್ತ ಕರೆಯಂತೆ ಏಪ್ರಿಲ್ 13ರಂದು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠದಲ್ಲಿ ಸಾಮೂಹಿಕ ಲಿಂಗಪೂಜೆಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ನೆರವೇರಿಸಿ, ಇಂದಿನ ಆತಂಕಕಾರಿ ವಾತಾವರಣದಿಂದ ನಿವಾರಣೆಗೊಂಡು ಸಮಸ್ತ ಜನತೆಗೆ ಆರೋಗ್ಯ–ನೆಮ್ಮದಿ ದೊರಕಲೆಂದು ಪ್ರಾರ್ಥನೆ ಸಲ್ಲಿಸಲಾಯಿತು.

ಶ್ರೀಮಠದಲ್ಲಿರುವ ಗುರುಕುಲ ಸಾಧಕರು, ಸೇವಾಕರ್ತರು ಇದರಲ್ಲಿ ಪಾಲ್ಗೊಂಡಿದ್ದರು.

**ಶ್ರೀಮಠದಲ್ಲಿ ಬಸವ ಜಯಂತಿ**

ಬಸವಣ್ಣನವರು ಸಮಾಜದ ಅಸಮಾನತೆಯನ್ನು, ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಿದ ಪ್ರಭಾವಿ ಸಮಾಜ ಸುಧಾರಕರೆಂದು ಗುರುತಿಸಿ ಗೌರವಿಸಲಾಗುತ್ತಿದೆ. ಅದೆಲ್ಲದಕ್ಕೂ ಜೀವಚೈತನ್ಯಸ್ವರೂಪವಾದ ಅವರ ಆಧ್ಯಾತ್ಮಿಕ ಸಾಧನೆ, ಸಿದ್ಧಿ, ಸಂದೇಶಗಳ ಕಡೆಗೂ ಇನ್ನು ಮುಂದೆ ಹೆಚ್ಚಿನ ಗಮನಹರಿಸಬೇಕಾದುದು ಅಗತ್ಯವಾಗಿದೆ ಎಂದು ಆಲಮಟ್ಟಿಯ ಡಾ. ಶ್ರೀ ರುದ್ರಮುನಿದೇವರು ತಿಳಿಸಿದರು. ಅವರು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠದಲ್ಲಿ ಏಪ್ರಿಲ್ 26ರಂದು ಸರಳ ಹಾಗೂ ಅರ್ಥಪೂರ್ಣ ರೀತಿಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಬಸವ ಜಯಂತಿಯಲ್ಲಿ ಪಾಲ್ಗೊಂಡು ಮಾತನಾಡುತ್ತಾ ತಿಳಿಸಿದರು.

ಶ್ರೀಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಜಯರಾಜೇಂದ್ರರವರು, ಮನುಷ್ಯ ತನ್ನ ವ್ಯಾವಹಾರಿಕ ಜೀವನ ಕ್ರಮದಲ್ಲಿ ಮರೆಯದೇ ಪೂಜಿಸು ಕೂಡಲಸಂಗಮನ ಎಂದು ಬಸವಣ್ಣನವರು ತಿಳಿಸಿರುವಂತೆ ಸದಾ ಭಗವಂತನ ಸ್ಮರಣೆಯಲ್ಲಿದ್ದು, ಬದುಕನ್ನು ಸಾರ್ಥಕ ಗೊಳಿಸಿಕೊಳ್ಳಬೇಕೆಂದು ತಿಳಿಸಿದರು. ಗುರುಕುಲದ ಸಾಧಕರಾದ ಶ್ರೀ ಇಮ್ಮಡಿ ಮುರಘೀ ಸ್ವಾಮಿಗಳು, ಶ್ರೀ ಕುಮಾರದೇವರು, ಶ್ರೀ ರುದ್ರಯ್ಯದೇವರು ಹಾಗೂ ಶ್ರೀ ಗಿರೀಶ್‌ರವರು ಮಾತನಾಡಿ ಬಸವಣ್ಣನವರ ಜೀವನ ಸಾಮಾಜಿಕ ಸಮತೋಲನಕ್ಕೆ ಸಾಕ್ಷಿಯಾಯಿತು. ಮಾನವರು ಜಾತಿ, ಮತ, ಧರ್ಮ, ಕುಲ, ಭೇದ ಮರೆತು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಮಾರ್ಗದರ್ಶಿ ಯಾಗಿ ಸಮಾಜಕ್ಕೆ ದಾರಿದೀಪವಾದರು. ಕಳಬೇಡ, ಕೊಲಬೇಡ ಎಂದು ಅವರು ಬೋಧಿಸಿದ ಸಪ್ತಸೂತ್ರಗಳು ಜನತೆಯ ಬದುಕಿಗೆ ಸಂಜೀವಿನಿಯಾಗಿವೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಧೂಪಾರತಿ–ದೀಪಾರತಿ ಬೆಳಗಿ, ಪುಷ್ಪಾರ್ಚನೆ ಸಲ್ಲಿಸಿ ಸಾಮೂಹಿಕವಾಗಿ ವಚನಗಾಯನ ಮಾಡಲಾಯಿತು. ಶ್ರೀ ಬಿ.ಎಂ. ಕುಮಾರ್ ಹಾಗೂ ಶ್ರೀ ಎಸ್. ನಿಜಗುಣರವರು ವಚನಗಾಯನ ಮಾಡಿದರು. ಶ್ರೀ ಕೆ.ಎಸ್. ಶಿವಪ್ರಸಾದ್ ಸ್ವಾಗತಿಸಿದರು. ಶ್ರೀ ಆರ್.ಎಸ್. ನಂಜುಂಡಸ್ವಾಮಿ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

# ಪ್ರಸಾದ



## ಕೃತಿ-ಸ್ವೀಕೃತಿ

**ದಿವ್ಯಜೀವನ**
ಮಲ್ಲಿಕಾರ್ಜುನ ಹೊಸಪಾಳ್ಯ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು. 198, ಬೆಲೆ: 150/-

**ಬೋಧಿಯ ನೆರಳಿನಲ್ಲಿ**
ಪ್ರೊ. ಎಂ.ಎ. ಹೆಗಡೆ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು.224, ಬೆಲೆ: 150/-

**ಮರಳಿ ಪ್ರಕೃತಿಗೆ**
ಲಕ್ಷ್ಮೀ ಮಚ್ಚಿನ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು.170, ಬೆಲೆ: 150/-

**ಸಂಸ್ಕೃತಿ ಸಂಶೋಧನೆ**
ಡಾ. ಪಾದೇಕಲ್ಲು ವಿಷ್ಣುಭಟ್ಟ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು.264, ಬೆಲೆ: 150/-

**ಮಂಜೂಷಾ ಕರಂಡ**
ಡಾ. ಚೂಡಾಮಣಿ ನಂದಗೋಪಾಲ್
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು.210, ಬೆಲೆ: 150/-

**ಕ್ರಿಯಾಶೀಲ ಸಹೋದರರು**
ಡಾ. ಬಿ.ಸಿ. ಸಂಪತ್ ಕುಮಾರ್
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು.248, ಬೆಲೆ: 150/-

**ಧರ್ಮಸ್ಥಳದ ಜೀವಸೆಲೆ ಹೇಮಾವತಿ**
ರಾಜ್ಯಶ್ರೀ ಹಂಪನಾ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು. 290, ಬೆಲೆ: 150/-

**ದಾನ ಪುರುಷಾರ್ಥ**
ಡಾ. ಪ್ರಸನ್ನಕುಮಾರ ಐತಾಳ್
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು. 212, ಬೆಲೆ: 150/-

**ಭಾಗ್ಯದ ಬಾಗಿಲು**
ನಾ. ಕಾರಂತ ಪೆರಾಜೆ
ಅಧ್ಯಕ್ಷರು, ಧರ್ಮಾಧಿಕಾರಿ
ಡಾ. ಡಿ. ವೀರೇಂದ್ರ ಹೆಗ್ಗಡೆ
ಸುವರ್ಣ ಮಹೋತ್ಸವ ಸಮಿತಿ
ಧರ್ಮಸ್ಥಳ
ಪು. 202, ಬೆಲೆ: 150/-

## ಫಾರಂ (ರೂಲ್ 8 ರಂತೆ)
## 'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು

| | | |
|---|---|---|
| 1. ಪತ್ರಿಕೆಯ ಹೆಸರು<br>ಮತ್ತು ವಿಳಾಸ | : | ಪ್ರಸಾದ<br>ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು |
| 2. ದ್ವೈಮಾಸಿಕವೆ ? ಮಾಸಿಕವೆ ?<br>ವಾರಪತ್ರಿಕೆಯೆ ? | : | ದ್ವೈಮಾಸಿಕ |
| 3. ಪ್ರಕಾಶಕರ ಹೆಸರು ಮತ್ತು<br>ವಿಳಾಸ | : | ಸಿ.ಜಿ. ಬೆಟಸೂರಮಠ<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. ಸಂಪಾದಕರ ಹೆಸರು | : | ಮಲೆಯೂರು ಗುರುಸ್ವಾಮಿ |
| ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| ಮತ್ತು ವಿಳಾಸ | : | ಪ್ರಕಟಣ ವಿಭಾಗ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. ಮುದ್ರಕರ ಹೆಸರು ಮತ್ತು<br>ವಿಳಾಸ | : | ಜೆಎಸ್ಎಸ್ ಮುದ್ರಣಾಲಯ<br>ಮೈಸೂರು 570 004 |
| 6. ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ<br>ಒಡೆತನದಲ್ಲಿದ್ದರೆ ಅವರ ಹೆಸರು,<br>ವಿಳಾಸ ಮತ್ತು ವಿವರಗಳು | : | ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜವಾದ ವಿವರಗಳೆಂದು ಹೇಳುತ್ತೇನೆ.

ಸಿ.ಜಿ. ಬೆಟಸೂರಮಠ
ಪ್ರಕಾಶಕ, 'ಪ್ರಸಾದ' ದ್ವೈಮಾಸಿಕ
ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು

## ಲೇಖಕರ ವಿಳಾಸ

**ವೆಂಕಟೇಶ ಕೆ. ಜನಾದ್ರಿ ಕನಕಗಿರಿ**
ಸಹಾಯಕ ಲೆಕ್ಕಾಧಿಕಾರಿ
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ
ಕಲಬುರ್ಗಿ–585102

**ಡಾ. ಹಾ.ಮ.ನಾಗಾರ್ಜುನ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು
ಶಿವಮೊಗ್ಗ

**ವೈದ್ಯರತ್ನ ಡಾ॥ ಪಿ. ಶರತ್‌ಕುಮಾರ್**
ನಿರ್ದೇಶಕರು
ಮೆಡಿವೇವ್ ರಿಸರ್ಚ್ ಆಸ್ಪತ್ರೆ
ಸಿಟಿ ಎಕ್ಸ್‌ರೇ ಕಾಂಪ್ಲೆಕ್ಸ್
ನ್ಯೂ ಸಯ್ಯಾಜಿರಾವ್ ರಸ್ತೆ
ಮೈಸೂರು 570021

**ಡಾ. ಬಸವರಾಜ ಸಬರದ**
# 1, 2ನೇ ಮುಖ್ಯರಸ್ತೆ
2ನೇ ಅಡ್ಡರಸ್ತೆ, ಅಮರಜ್ಯೋತಿ ಲೇಔಟ್
ಕುಪ್ಪಸ್ವಾಮಿ ಪಾರ್ಕ್
ರವೀಂದ್ರನಾಥ ಟಾಗೂರ್ ನಗರ
(ಆರ್.ಟಿ. ನಗರ) ಅಂಚೆ, ಹೆಬ್ಬಾಳ
ಬೆಂಗಳೂರು 560032




ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕರೆ ನೀಡಿದ್ದ ಕೊರೋನಾ ಸೋಂಕಿತರು ಗುಣಮುಖರಾಗಲು ಶ್ರಮಿಸುತ್ತಿರುವ ಕೊರೋನಾ ವಾರಿಯರ್ಸ್‌ಗಳಿಗೆ ಪ್ರೋತ್ಸಾಹಿಸುವ ಅಭಿಯಾನದಲ್ಲಿ ಪೂಜ್ಯರೊಂದಿಗೆ ಶ್ರೀಮಠದಲ್ಲಿನ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು ಚಪ್ಪಾಳೆ, ಘಂಟೆ, ಜಾಗಟೆಗಳ ಮೂಲಕ ಅಭಿನಂದಿಸುತ್ತಿರುವುದು (22.3.2020)



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಹಾಗೂ ಡಾ. ಕೆ. ಸುಧಾಕರ್‌ರವರು ಭೇಟಿಮಾಡಿ ಕೋವಿಡ್–19ರ ಬಗ್ಗೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಸಮಾಜ ಸೇವಕರಾದ ಶ್ರೀಮತಿ ಪುಷ್ಪ ಅಯ್ಯಂಗಾರ್ ಮತ್ತು ಶ್ರೀಮತಿ ವೈದೇಹಿ ಅಯ್ಯಂಗಾರ್‌ರವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಒಂದು ಲಕ್ಷ ರೂ.ಗಳ ಚೆಕ್‌ನ್ನು ಸಚಿವರಿಗೆ ನೀಡುತ್ತಿರುವುದು. ಶ್ರೀ ಬಿ. ಹರ್ಷವರ್ಧನ್, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಉಪಸ್ಥಿತರಿದ್ದರು (5.4.2020)



ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಲೋಕಕ್ಷೇಮಕ್ಕಾಗಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಾಧಕರು ಹಾಗೂ ಸೇವಾಕರ್ತರು ಲಿಂಗಪೂಜೆ ಮಾಡುತ್ತಿರುವುದು (13.4.2020)



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಸವ ಜಯಂತಿಯನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು (26.4.2020)